ಕೃಷಿ ವಿಶ್ವವಿದ್ಯಾಲಯ, ಧಾರವಾಡ
**ಐ.ಸಿ.ಎ.ಆರ್–ಕೃಷಿ ವಿಜ್ಞಾನ ಕೇಂದ್ರ, ಹಾವೇರಿ**
ಹನುಮನಮಟ್ಟಿ – 581 115 ತಾ: ರಾಣೇಬೆನ್ನೂರು ಜಿ: ಹಾವೇರಿ
ಕಛೇರಿ : ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು

ದೂರವಾಣಿ & ಫ್ಯಾಕ್ಸ್ ಸಂಖ್ಯೆ: 08373–253524 ಇಮೇಲ್ : kvk_haveri@rediffmail.com
ಮೊ : 09448495338 ಅಂತರ್ಜಾಲ: www.kvkhaveri.org

ಸಂ. ಕೆ.ವಿ.ಕೆ. ಹನುಮನಮಟ್ಟಿ/2019–20/60 ದಿನಾಂಕ: 20.07.2019

ಗೆ,

ಅಧ್ಯಕರು
ಕೃಷಿ ಬೆಲೆ ಆಯೋಗ
ಕೃಷಿ ನಿರ್ದೇಶಕರ ಕಛೇರಿ
ಶೇಷಾದ್ರಿ ರಸ್ತೆ
ಬೆಂಗಳೂರು–560 001

**(ಮೇಲಾಧಿಕಾರಿಗಳ ಮುಖಾಂತರ)**

ಮಾನ್ಯರೇ,

**ವಿಷಯ:** ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ (ಹಾವೇರಿ) ಕೇಂದ್ರದ ಮುಖಾಂತರ ಆಯ್ಕೆಯಾದ ಖುರ್ಧವೀರಾಪುರ ಹಳ್ಳಿಯಲ್ಲಿ ನಿರ್ವಹಿಸಲ್ಪಟ ಕರ್ನಾಟಕ ಸರ್ಕಾರದ ಕೃಷಿ ಬೆಲೆ ಆಯೋಗದ ಯೋಜನೆಯ **"ರೈತರ ಆದಾಯ ಮತ್ತು ಕಲ್ಯಾಣ ವೃದ್ಧಿ"** ಕಾರ್ಯಕ್ರಮದ ಮೂರು ವರ್ಷಗಳ ಅಂತಿಮ ವರದಿ (2016–2019 ಸಲ್ಲಿಸುವ ಕುರಿತು...

**ಉಲ್ಲೇಖ** : ಸಂಖ್ಯೆ: ಕಕೃಬೆಆ/ಕೆ.ವಿ.ಕೆ/2019–20 ದಿನಾಂಕ: 11.07.2019

*****

ಈ ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದ್ದಂತೆ, ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ (ಹಾವೇರಿ) ಕೇಂದ್ರದ ಮುಖಾಂತರ ಆಯ್ಕೆಯಾದ ಖುರ್ಧವೀರಾಪುರ ಹಳ್ಳಿಯಲ್ಲಿ ನಿರ್ವಹಿಸಲ್ಪಟ್ಟ ಕರ್ನಾಟಕ ಸರ್ಕಾರದ ಕೃಷಿ ಬೆಲೆ ಆಯೋಗದ ಯೋಜನೆಯ **"ರೈತರ ಆದಾಯ ಮತ್ತು ಕಲ್ಯಾಣ ವೃದ್ಧಿ"** ಕಾರ್ಯಕ್ರಮದ 2016 ರಿಂದ 2019ರ ವರೆಗೆ ಒಟ್ಟು ಮೂರು ವರ್ಷಗಳ ಅಂತಿಮ ವರದಿಯನ್ನು ತಮ್ಮ ಅವಗಹನೆಗಾಗಿ ಸಲ್ಲಿಸುತ್ತಿದ್ದೇನೆ.

ಧನ್ಯವಾದಗಳೊಂದಿಗೆ

ತಮ್ಮ ವಿಶ್ವಾಸಿ

ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು
ಐ.ಸಿ.ಎ.ಆರ್-ಕೃಷಿ ವಿಜ್ಞಾನ ಕೇಂದ್ರ,
ಹನುಮನಮಟ್ಟಿ-581115

NO/ADE/174/2019-20 Dt 22/7/19

ಡಾ. ರಮೇಶ ಬಾಬು
ಸಹ ವಿಸ್ತರಣಾ ನಿರ್ದೇಶಕರು
ಕೃಷಿ ವಿಶ್ವವಿದ್ಯಾಲಯ, ಧಾರವಾಡ-580 005

DIRECTORATE OF EXTENSION
U.A.S., DHARWAD.
DATE : 24-7-19
INWORD No. 4812

DIRECTORATE OF EXTENSION UAS, DHARWAD
No 2764
Date 23-7-19

P.T.O

ಸಂ: ವಿನಿ/ವಿಅ/ಕೆವಿಕೆ ಹ.ಮಟ್ಟಿ/ /2019-20 ದಿ: 13/8/2019

ಮಾನ್ಯರೆ,

ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ ಕೇಂದ್ರದ ಮುಖ್ಯಸ್ಥರ ಅಧ್ಯಕ್ಷತೆಯ ಮುಂದಿನ ಮಾಹಿತಿಯ ದಸ್ತಾವೇಜುಗಳು ನಿರ್ವಹಿಸಲ್ಪಟ್ಟ "ಕೈತೋಟ ಆಹಾರ ಮತ್ತು ಕಲ್ಯಾಣ ಸ್ವಚ್ಛ" ಕಾರ್ಯಕ್ರಮದ ಮಾಗಿ ವರದಿಯ 6 ಪ್ರತಿಗಳನ್ನು ತಮ್ಮ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

ವಿಸ್ತರಣಾ ನಿರ್ದೇಶಕರು
ಕೃಷಿ ವಿಶ್ವವಿದ್ಯಾಲಯ
ಧಾರವಾಡ-580 005.

ಗೆ,
ಅಧ್ಯಕ್ಷರು,
ಕೃಷಿ ಬೆಲೆ ಆಯೋಗ,
ಕೃಷಿ ನಿರ್ದೇಶಕರ ಕಚೇರಿ,
ಶೇಷಾದ್ರಿ ರಸ್ತೆ,
ಬೆಂಗಳೂರು – 560 001.

**ಕೃಷಿ ವಿಶ್ವವಿದ್ಯಾಲಯ, ಧಾರವಾಡ**

**ಐ.ಸಿ.ಎ.ಆರ್.–ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ, ಜಿಲ್ಲೆ: ಹಾವೇರಿ**

**ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆ ಹಾಗೂ ಕರ್ನಾಟಕ ಕೃಷಿ ಬೆಲೆ ಆಯೋಗ, ಬೆಂಗಳೂರು**

# “ರೈತರ ಆದಾಯ ಮತ್ತು ಕಲ್ಯಾಣವೃದ್ಧಿ ಯೋಜನೆ”

**2016–19**

**ಐ.ಸಿ.ಎ.ಆರ್.–ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ,**

**ತಾ: ರಾಣೇಬೆನ್ನೂರು ಜಿಲ್ಲೆ: ಹಾವೇರಿ**

# “ರೈತರ ಆದಾಯ ಮತ್ತು ಕಲ್ಯಾಣವೃದ್ಧಿ ಯೋಜನೆ” ಅನುಷ್ಠಾನ
# (2017 ರಿಂದ 2019)

**ಗ್ರಾಮ: ಖುರ್ದವೀರಾಪುರ    ತಾಲೂಕು: ಬ್ಯಾಡಗಿ    ಜಿಲ್ಲೆ: ಹಾವೇರಿ**

## ತಂಡದ ವಿವರ


**ಪ್ರಧಾನ ಸಂಶೋಧಕರು**

ಡಾ. ಅಶೋಕ. ಪಿ.

**ಸಹ ಸಂಶೋಧಕರು**

ಡಾ. ಕೆ. ಪಿ. ಗುಂಡಣ್ಣವರ

ಡಾ. ವೆಂಕಣ್ಣ ಬಳಗಾನೂರ

ಶ್ರೀ ಹರೀಶ್ ಡಿ. ಕೆ

ಡಾ. ಶಿವಮೂರ್ತಿ ಡಿ

ಡಾ. ಕುಮಾರ. ಬಿ.ಹೆಚ್.

**ಯೋಜನಾ ಸಹಾಯಕರು**

ಶ್ರೀಮತಿ. ಅರ್ಚನಾ ಬಿ ಸಿ

**ಕ್ಷೇತ್ರ ಸಹಾಯಕರು**

ಕು. ವಿದ್ಯಾಶ್ರೀ ಶೇ ಶೆಗಣಿ

# "ರೈತರ ಆದಾಯ ಮತ್ತು ಕಲ್ಯಾಣ ವೃದ್ಧಿ ಯೋಜನೆ" ಅನುಷ್ಠಾನ

ಕೃಷಿ ಬೆಲೆ ಆಯೋಗದ ಅಧ್ಯಕ್ಷರಾದ ಡಾ. ಪ್ರಕಾಶ ಕಮ್ಮರಡಿ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 25.11.2016 ರಂದು ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯಲ್ಲಿ ಜಿಲ್ಲಾ ಮಟ್ಟದ ವಿವಿಧ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳಿಗೆ ಎಂಕಅ ಪ್ರಾಯೋಜಿತ, "ರೈತರ ಆದಾಯ ಮತ್ತು ಕಲ್ಯಾಣ ವೃದ್ಧಿ ಯೋಜನೆ" ಅನುಷ್ಠಾನದ ಬಗ್ಗೆ ಚರ್ಚಿಸಲು ಸಭೆಯನ್ನು ಹಮ್ಮಿಕೊಳ್ಳಲಾಯಿತು. ಈ ಸಭೆಯಲ್ಲಿ 45 ಅಧಿಕಾರಿಗಳು ಭಾಗವಹಿಸಿದ್ದರು.




## ಗ್ರಾಮ ಹಾಗೂ ಫಲಾನುಭವಿ ರೈತರ–ರೈತ ಮಹಿಳೆಯರ ಆಯ್ಕೆ ಸಭೆ:

ರೈತರ ಆದಾಯ ಮತ್ತು ಕಲ್ಯಾಣ ವೃದ್ಧಿ ಯೋಜನೆಯ ಅಡಿಯಲ್ಲಿ ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲೂಕಿನ ಖುರ್ದವೀರಾಪುರ ಎಂಬ ಗ್ರಾಮವನ್ನು ದಿನಾಂಕ 21.12.2016 ರಂದು ಮತ್ತು ಆ ಗ್ರಾಮದ 25 ಫಲಾನುಭವಿ ರೈತರ ಹಾಗೂ ರೈತ ಮಹಿಳೆಯರನ್ನು ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಮತ್ತು ಗ್ರಾಮ ಪಂಚಾಯತಿ ಇವರ ಸಹಯೋಗದೊಂದಿಗೆ ಹಾಗೂ ರೈತರ ಚರ್ಚೆಯೊಂದಿಗೆ ಸದಸ್ಯರನ್ನು ದಿನಾಂಕ 09.02.2017 ರಂದು ಆಯ್ಕೆ ಮಾಡಲಾಯಿತು. **ಇದರಲ್ಲಿ ಒಟ್ಟು 20** ರೈತರು (ಸಾಮಾನ್ಯ ವರ್ಗ: 14, ಪ.ಜಾ/ ಪ.ಪಂ : 06) ಮತ್ತು 5 ರೈತ ಮಹಿಳೆಯರನ್ನು (ಸಾಮಾನ್ಯ ವರ್ಗ: 02, **ಪ.ಜಾ/ ಪ.ಪಂ : 03**) ಆಯ್ಕೆ ಮಾಡಲಾಯಿತು.

**ಫಲಾನುಭವಿ ರೈತರ ಹಿಡುವಳಿ ವಿವರ:** ಯೋಜನೆಯ 25 ಫಲಾನುಭವಿ ರೈತರ ಪಟ್ಟಿಯು 12 ಅತಿ ಸಣ್ಣ ಹಿಡುವಳಿದಾರರು, 11 ಸಣ್ಣ ಹಿಡುವಳಿದಾರರು ಹಾಗೂ 2 ಮಧ್ಯಮ ಹಿಡುವಳಿದಾರರನ್ನು ಒಳಗೊಂಡಿದೆ.



ರೈತರ–ರೈತ ಮಹಿಳೆಯರ ಆಯ್ಕೆ ಸಭೆ




ಆಯ್ದ ಗ್ರಾಮ

## ಗ್ರಾಮದ ಪಕ್ಷಿನೋಟ

**ಗ್ರಾಮ:** ಖುರ್ದವೀರಾಪುರ **ತಾಲ್ಲೂಕ:** ಬ್ಯಾಡಗಿ **ಜಿಲ್ಲೆ:** ಹಾವೇರಿ

| | |
|---|---|
| ಭೌಗೋಳಿಕ ಕ್ಷೇತ್ರ (ಎಕರೆ) | 759 |
| ಸಾಗುವಳಿ ಕ್ಷೇತ್ರ (ಎಕರೆ) | 710 |
| ಜನ ಸಂಖ್ಯೆ | 476 |
| ಮಣ್ಣಿನ ವಿಧ ಖುಷ್ಕಿ ಕೆಂಪು ಜಮೀನು (ಎಕರೆ) | 657 |
| ಕಪ್ಪು ಜಮೀನು (ಎಕರೆ) | 53 |
| ಖಾತೆದಾರರ ಸಂಖ್ಯೆ | 210 |
| ಅತೀ ಸಣ್ಣ ಖಾತೆದಾರರ ಸಂಖ್ಯೆ | 84 |
| ಸಣ್ಣ ಖಾತೆದಾರರ ಸಂಖ್ಯೆ | 94 |
| ದೊಡ್ಡ ಖಾತೆದಾರರ ಸಂಖ್ಯೆ | 32 |
| ನೀರಾವರಿ ಕ್ಷೇತ್ರ (ಎಕರೆ) | 118 |
| ಕೆರೆಗಳ ಸಂಖ್ಯೆ | 02 |

| | |
|---|---|
| ಮುಖ್ಯ ಬೆಳೆಗಳು | ಮೆಕ್ಕೆಜೋಳ, ಹತ್ತಿ, ಕ್ಯಾಬೇಜ್, ಮೆಣಸಿನಕಾಯಿ, ಟೊಮ್ಯಾಟೊ, ಬಾಳೆ, ತೆಂಗು, ತೊಗರಿ, ಅಲಸಂಧಿ, ಉದ್ದು, ತರಕಾರಿ ಬೆಳೆಗಳು. |

## ರೈತರ ಆದಾಯ ಮತ್ತು ಕಲ್ಯಾಣವೃದ್ಧಿ ಯೋಜನೆಯಲ್ಲಿ ಫಲಾನುಭವಿಗಳ ಆಯ್ಕೆ

| ಲಿಂಗ | ಸಾಮಾನ್ಯ | ಪ.ಜಾ/ ಪ.ಪಂ | ಒಟ್ಟು |
|---|---|---|---|
| ಗಂಡು | 14 | 06 | 20 |
| ಹೆಣ್ಣು | 02 | 03 | 05 |
| ಒಟ್ಟು | 16 | 09 | 25 |

## ಫಲಾನುಭವಿ ರೈತರ ಹಿಡುವಳಿ ವಿವರ

| ಲಿಂಗ | ಅತಿ ಸಣ್ಣ ಹಿಡುವಳಿದಾರರು | ಸಣ್ಣ ಹಿಡುವಳಿದಾರರು | ಮಧ್ಯಮ ಹಿಡುವಳಿದಾರರು | ಒಟ್ಟು |
|---|---|---|---|---|
| ಗಂಡು | 07 | 11 | 02 | 20 |
| ಹೆಣ್ಣು | 05 | 00 | 00 | 05 |
| ಒಟ್ಟು | 12 | 11 | 02 | 25 |

## ರೈತರ ಆದಾಯ ಮತ್ತು ಕಲ್ಯಾಣವೃದ್ಧಿ ಯೋಜನೆಯಲ್ಲಿ ಫಲಾನುಭವಿಗಳ ಪಟ್ಟಿ

| ಕ್ರಮ ಸಂ | ಹೆಸರು | ಜಾತಿ | ದೂರವಾಣಿ ಸಂಖ್ಯೆ |
|---|---|---|---|
| 1 | ಶ್ರೀ ಸಿದ್ದಲಿಂಗಪ್ಪ. ಬ. ಗುರೇಮಟ್ಟಿ | ಸಾಮಾನ್ಯ | 9901283473 |
| 2 | ಶ್ರೀ ಮಂಜಪ್ಪ ಸುಭಾಸ ಮಾದರ | ಎಸ್.ಸಿ | 9900905168 |
| 3 | ಶ್ರೀ ಅರವಿಂದ ತಿರಕಪ್ಪ ಮಣ್ಣಬಸಣ್ಣವನರ | ಎಸ್.ಟಿ | 9591880724 |
| 4 | ಶ್ರೀಮತಿ ರೇಣವ್ವ ರಾಮಪ್ಪ ಕೆಂಚಣ್ಣನವರ | Cat-1 | 9900879641 |
| 5 | ಶ್ರೀ ಬಸವರಾಜ ನಾಗಪ್ಪ ಕಾಕೋಳ | ಸಾಮಾನ್ಯ | 9880637020 |
| 6 | ಶ್ರೀಮತಿ ಹೊನ್ನವ್ವ ಬರಮಪ್ಪ ಲಚ್ಚಪ್ಪನವರ | ಎಸ್.ಟಿ | 9008636683 |
| 7 | ಶ್ರೀ ನಾಗರಾಜ ಬಸಪ್ಪ ಕೋವೇರ್ | ಸಾಮಾನ್ಯ | 7348873304 |
| 8 | ಶ್ರೀ ವಿಜಯ ಹನುಮಂತಪ್ಪ ಗುರೇಮಟ್ಟಿ | ಸಾಮಾನ್ಯ | 9741537743 |
| 9 | ಶ್ರೀ ರಾಮಪ್ಪ ನಾಗಪ್ಪ ಪೂಜಾರ | ಎಸ್.ಟಿ | 9980260119 |
| 10 | ಶ್ರೀ ಶಂಬಣ್ಣ ನಿಂಗಪ್ಪ ಗುರೇಮಟ್ಟಿ | ಸಾಮಾನ್ಯ | 9008632950 |
| 11 | ಶ್ರೀಮತಿ ಸಾವಿತ್ರವ್ವ ಶೇಷಪ್ಪ ದ್ಯಾವಣ್ಣನವರ | ಎಸ್.ಟಿ | 8861326094 |
| 12 | ಶ್ರೀಮತಿ ರೇಖಾ ಶಂಕ್ರಪ್ಪ ಗುರೇಮಟ್ಟಿ | ಸಾಮಾನ್ಯ | 9663363748 |
| 13 | ಶ್ರೀ ಶಿವಮೂರ್ತೆಪ್ಪ ನಾಗಪ್ಪ ಪೂಜಾರ | ಎಸ್.ಟಿ | 9880997456 |
| 14 | ಶ್ರೀ ಹೊನ್ನಪ್ಪ ಸಣ್ಣಪ್ಪ ದ್ಯಾವಣ್ಣನವರ | ಎಸ್.ಟಿ | 8861112764 |
| 15 | ಶ್ರೀ ಮಲಪ್ಪ ನಾಗಪ್ಪ ಗಣಜೂರ | ಎಸ್.ಟಿ | 9731065849 |
| 16 | ಶ್ರೀ ರಾಜಪ್ಪ ಬ ಗುರೇಮಟ್ಟಿ | ಸಾಮಾನ್ಯ | 8861112764 |
| 17 | ಶ್ರೀ ಯಲ್ಲಪ್ಪ ಸೋಮಪ್ಪ ಆಡರ್ | ಸಾಮಾನ್ಯ | 8095483714 |
| 18 | ಶ್ರೀ ಕೃಷ್ಣಪ್ಪ ಅಡಿವೆಪ್ಪ ಗಣಜೂರ | ಎಸ್.ಟಿ | 9535397383 |
| 19 | ಶ್ರೀ ದುರಗಪ್ಪ ಮಲ್ಲಪ್ಪ ಕೆಂಚಣ್ಣವರ | ಸಾಮಾನ್ಯ | 8105685048 |

| | | | |
|---|---|---|---|
| 20 | ಶ್ರೀ ಸುನೀಲಗೌಡ ಪಾಟೀಲ | ಸಾಮಾನ್ಯ | 9880810176 |
| 21 | ಶ್ರೀ ಮುಕಪ್ಪ ಮಾರ್ತಾಂಡಪ್ಪ ಜೋಗಿಹಳ್ಳಿ | ಎಸ್.ಟಿ | 7348873352 |
| 22 | ಶ್ರೀ ದ್ಯಾಮಪ್ಪ ಸತ್ಯಪ್ಪ ಹಳ್ಳಳ್ಳಿ | ಎಸ್.ಟಿ | 9972294278 |
| 23 | ಶ್ರೀಮತಿ ಗಿರಿಜವ್ವ ಚಂದ್ರಪ್ಪ ಮಾದರ | ಎಸ್.ಸಿ | 9632946121 |
| 24 | ಶ್ರೀ ರೇವಣಪ್ಪ ಶಿವಪುತ್ರಪ್ಪ ಗುರೇಮಟ್ಟಿ | ಸಾಮಾನ್ಯ | 9611521904 |
| 25 | ಶ್ರೀ ರೇವಣಸಿದ್ದಪ್ಪ ಹನುಮಂತ ಪೂಜಾರ | ಎಸ್.ಟಿ | 9611523731 |

## ಖುರ್ದ ವೀರಾಪುರ ಗ್ರಾಮದಲ್ಲಿ ಕಛೇರಿಯ ಸ್ಥಾಪನೆ




## ಪ್ರಥಮ ಗ್ರಾಮ ಸಭೆ

ಹಾವೇರಿ ಜಿಲ್ಲೆಯ ಕೃಷಿ ವಿಜ್ಞಾನ ಕೇಂದ್ರ ಹನುಮನಮಟ್ಟಿ ಮತ್ತು ಕೃಷಿ ಬೆಲೆ ಆಯೋಗದ ಸಂಯೋಗದೊಂದಿಗೆ ರೈತರ ಆದಾಯ ಮತ್ತು ಕಲ್ಯಾಣಾಭಿವೃದ್ಧಿ ಯೋಜನೆಯ ಅಡಿಯಲ್ಲಿ ಪ್ರಥಮ ಗ್ರಾಮ ಸಭೆಯನ್ನು ದಿನಾಂಕ 11.04.2017 ರಂದು ಆಯ್ದ ಖುರ್ದವೀರಾಪುರ ಗ್ರಾಮದಲ್ಲಿ ಆಯೋಜಿಸಲಾಗಿತ್ತು. ಸಭೆಯಲ್ಲಿ ರೈತರ ಆದಾಯ ಮತ್ತು ಕಲ್ಯಾಣ ವೃದ್ಧಿ ಯೋಜನೆಯ ಗುರಿಸಾಧನೆಯ ಬಗ್ಗೆ ಗ್ರಾಮದ ರೈತರಿಗೆ ಹಾಗೂ ರೈತ ಮಹಿಳೆಯರಿಗೆ ಮಾಹಿತಿ ನೀಡಲಾಯಿತು ಮತ್ತು ದಿನಾಂಕ 13.04.2017 ರಂದು ಗ್ರಾಮದಲ್ಲಿ ಪೌಷ್ಟಿಕ ಆಹಾರ, ಮನೆ ಹಾಗೂ ಸುತ್ತಮುತ್ತಲಿನ ಸ್ವಚ್ಛತೆ ಕುರಿತ ಅರಿವು

ಕಾರ್ಯಕ್ರಮ, ಈ ಕಾರ್ಯಕ್ರಮದಲ್ಲಿ ಗುಣ ಮಟ್ಟದ ಆಹಾರ ಸೇವನೆ – ಆಹಾರದಲ್ಲಿ ಸಿರಿಧಾನ್ಯಗಳ ಬಳಕೆ ಮಾಡುವ್ಯದರಿಂದ ದೇಹಕ್ಕೆ ಹೆಚ್ಚಿನ ನಾರಿನಂಶ ದೊರೆಯುವುದರ ಮೂಲಕ ದೇಹಕ್ಕೆ ಹೆಚ್ಚು ವಿವಿಧ ಪೋಷಕಾಂಶಗಳು ಸಿಗುವುದು ಎಂಬುದರ ಬಗ್ಗೆ ಮಾಹಿತಿ ನೀಡಲಾಯಿತು ಹಾಗೂ ಸ್ವಚ್ಛತಾ ಸಪ್ತಾಹ ಕಾರ್ಯಕ್ರಮದ ಮೂಲಕ ಮನೆ ಮತ್ತು ಸುತ್ತಮುತ್ತಲಿನ ಸ್ವಚ್ಛತೆಯನ್ನು ಕಾಪಾಡುವ್ಯದರಿಂದ ಮನುಷ್ಯನ ಆರೋಗ್ಯವನ್ನು ಕಾಪಾಡಿಕೊಳ್ಳುವುದರ ಬಗ್ಗೆ ಮಾಹಿತಿ ನೀಡಲಾಯಿತು. ತೋಟಗಾರಿಕಾ ಬೆಳೆಗಳ ಸುಧಾರಿತ ತಳಿಗಳ ಬಗ್ಗೆ ಮಾಹಿತಿ ಅಂದರೆ ಟೊಮ್ಯಾಟೋದಲ್ಲಿ ಮೇಘ ಎಲ್–15, ಅರ್ಕಾ ಅಲೋಕ, ಅರ್ಕಾ ಆಶಿಶ್. ಕ್ಯಾಬೇಜ್ನಲ್ಲಿ ಗೋಲ್ಡನ್ ಏಕರ್, ಫ್ರೈಡ್ ಆಫ್ ಇಂಡಿಯಾ. ಬದನೆಕಾಯಿಯಲ್ಲಿ ಅರ್ಕಾ ಆನಚಿದ್, ಅರ್ಕಾ ಕೇಶವ್. ಹಾಗೂ ಹೀರೆಕಾಯಿಯಲ್ಲಿ ಅರ್ಕಾ ಸಿಜಾತ್, ಪೂಸಾ ನಸದಾರ್ ಈ ಎಲ್ಲಾ ತೋಟಗಾರಿಕೆ ಬೆಳೆಗಳ ಸುಧಾರಿತ ತಳಿಗಳ ಬಗ್ಗೆ ಚರ್ಚೆ ಹಾಗೂ ಈ ಎಲ್ಲಾ ಬೆಳೆಗಳಲ್ಲಿ ಬರುವ ವಿವಿಧ ರೋಗಗಳು, ಕೀಟಗಳು ಬೀಜೋಪಚಾರ, ಮಿಶ್ರ ಬೆಳೆ, ಸರಧಿ ಬೆಳೆ, ಸಾವಯವ ಗೊಬ್ಬರಗಳ ಬಳಕೆ, ಬಲೆ ಬೆಳೆಗಳ ಬಗ್ಗೆ ಉಪಯುಕ್ತ ಮಾಹಿತಿ ನೀಡಲಾಯಿತು. ಮುಂಗಾರು ಬೆಳೆಗಳ ಬೀಜಗಳ ಆಯ್ಕೆ, ನಿರ್ವಹಣೆ ಮತ್ತು ಸಮಗ್ರ ಕೃಷಿ ಪದ್ದತಿ ಬಗ್ಗೆ ರೈತರಿಗೆ ಅರಿವು ಮೂಡಿಸಲಾಯಿತು. ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುವಲ್ಲಿ ಸಾವಯವ ಗೊಬ್ಬರಗಳ ಪಾತ್ರ ಹಾಗೂ ಸುಧಾರಿತ ತಳಿಗಳ ಬಗ್ಗೆ ಮಾಹಿತಿ ನೀಡಲಾಯಿತು. ಜೊತೆಗೆ ರೈತರಿಗೆ ಹೊಸ ತಾಂತ್ರಿಕತೆಗಳು ಅವಶ್ಯವಿದ್ದು ಹಾಗೂ ಮಳೆ ನೀರು ಕೊಯ್ಲು ಮತ್ತು ಚೌಕುಮಡಿ ಪದ್ದತಿಯಿಂದ ತೇವಾಂಶ ಹಿಡಿದಿಟ್ಟುಕೊಳ್ಳುವ ತಾಂತ್ರಿಕತೆಗಳು ಹಾಗೂ ಕೃಷಿ ಉಪಕರಣಗಳ ಬಗ್ಗೆ ಮಾಹಿತಿ ನೀಡಲಾಯಿತು.

## ಆರೋಗ್ಯ ತಪಾಸಣೆ ಶಿಬಿರ

ಹಾವೇರಿ ಜಿಲ್ಲೆಯ ಕೃಷಿ ವಿಜ್ಞಾನ ಕೇಂದ್ರ ಹನುಮನಮಟ್ಟಿ ಮತ್ತು ಕೃಷಿ ಬೆಲೆ ಆಯೋಗ, ರೈತರ ಆದಾಯ ಮತ್ತು ಕಲ್ಯಾಣಾಭಿವೃದ್ಧಿ ಯೋಜನೆಯ ಅಡಿಯಲ್ಲಿ ಕೆ.ಎಮ್.ಸಿ.ಮಣಿಪಾಲ್ ಆಸ್ಪತ್ರೆ ಹಾಗೂ ತಾಲ್ಲೂಕ ಆರೋಗ್ಯ ಇಲಾಖೆ ಇವುಗಳ ಸಹಯೋಗದಲ್ಲಿ ದಿನಾಂಕ 17.04.2017 ರಂದು ಖುರ್ಧವೀರಾಪುರ ಗ್ರಾಮದ 100 ರೈತ/ರೈತ ಮಹಿಳೆಯರಿಗೆ ಆರೋಗ್ಯ ತಪಾಸಣೆ ಶಿಬಿರವನ್ನು ಏರ್ಪಡಿಸಲಾಗಿತ್ತು. ಈ ಶಿಬಿರದಲ್ಲಿ ರಕ್ತದ ಹಿಮೋಗ್ಲೊಬಿನ್, ರಕ್ತದ ಗುಂಪು, ಸಕ್ಕರೆ ಪ್ರಮಾಣ, ರಕ್ತದ ಒತ್ತಡ, ಮೂತ್ರ ತಪಾಸಣೆ ಹಾಗೂ ರಕ್ತದಲ್ಲಿನ ಪೀಡೆನಾಶಕ ಉಳಿಕೆಯ ಪರೀಕ್ಷೆಗಳನ್ನು ಕೈಗೊಳ್ಳಲಾಯಿತು.

ಈ ಶಿಬಿರದಲ್ಲಿ ಡಾ. ಬಿ.ಆರ್. ಲಮಾಣಿ, ತಾಲೂಕಾ ಆರೋಗ್ಯ ಅಧಿಕಾರಿಗಳು, ಬ್ಯಾಡಗಿ, ಶ್ರೀ ಲಕ್ಷ್ಮಣ ಗುಡ್ಡಪ್ಪ ಮೇದಳಮನಿ, ಗ್ರಾಮ ಪಂಚಾಯತ ಅಧ್ಯಕ್ಷರು, ಮಲ್ಲೂರ, ಶ್ರೀ ಸಿದ್ದಲಿಂಗಪ್ಪ ಗುರೇಮಟ್ಟಿ, ಗ್ರಾಮ ಪಂಚಾಯತ ಸದಸ್ಯರು, ಖರ್ಧವೀರಾಪುರ ಮತ್ತು ಡಾ. ಶಂಕರ, ವೈದ್ಯಾಧಿಕಾರಿಗಳು, ಕೆ.ಎಮ್.ಸಿ ಮಣಿಪಾಲ ಹಾಗೂ ಅವರ ತಂಡ ಪಾಲ್ಗೊಂಡಿತ್ತು.



ಆರೋಗ್ಯ ತಪಾಸಣೆಯ ಬಗ್ಗೆ ರೈತರೊಂದಿಗೆ ಚರ್ಚೆ




ರೈತರಿಗೆ ಆರೋಗ್ಯ ತಪಾಸಣೆ




**ಆರೋಗ್ಯ ತಪಾಸಣೆ ಶಿಬಿರ**

## ಕೋಷ್ಟಕ 1. ರಕ್ತ ತಪಾಸಣೆಯಿಂದ ಕಂಡು ಬಂದ ವಿವರಗಳು

| ಪೀಡೆನಾಶಕ ಉಳಿಕೆ | ಗಂಡು | ಹೆಣ್ಣು | ಒಟ್ಟು |
|---|---|---|---|
| ಆರ್ಗನೊಕ್ಲೊರಿನ್ | 34 | 26 | 60 |
| ಆರ್ಗನೊ ಪಾಸ್ಪೆಟ್ | 07 | 06 | 13 |
| ಪೀಡೆನಾಶಕ ಉಳಿಕೆ ಇರುವುದಿಲ್ಲ | 11 | 08 | 19 |
| ಆರ್ಗನೊಕ್ಲೊರಿನ್+ ಆರ್ಗನೊ ಪಾಸ್ಪೆಟ್ | 02 | 06 | 08 |
| ಒಟ್ಟು | 54 | 46 | 100 |

ಕೋಷ್ಟಕ 1. ರಲ್ಲಿ ತೋರಿಸಿದಂತೆ ಖಿರ್ಧವೀರಾಪುರ ಗ್ರಾಮದಲ್ಲಿ ಮಾಡಿದ ಆರೋಗ್ಯ ತಪಾಸಣೆ ಮೂಲಕ ಆರ್ಗನೊಕ್ಲೊರಿನ್ ಪೀಡೆನಾಶಕ ಉಳಿಕೆಯು ಒಟ್ಟು 60 ಜನರಲ್ಲಿ ಕಂಡುಬಂದಿದೆ, ಆರ್ಗನೊ ಪಾಸ್ಪೆಟ್ ಪೀಡೆನಾಶಕ ಉಳಿಕೆಯು ಒಟ್ಟು 13 ಜನರಲ್ಲಿ ಕಂಡುಬಂದಿದೆ,ಆರ್ಗನೊಕ್ಲೊರಿನ್, ಆರ್ಗನೊ ಪಾಸ್ಪೆಟ್ ಎರಡು ಪೀಡೆನಾಶಕ ಉಳಿಕೆಯು ಒಟ್ಟು 08 ಜನರಲ್ಲಿ ಕಂಡುಬಂದಿದೆ, ಮತ್ತು ಒಟ್ಟು 19ಜನರಲ್ಲಿ ಪೀಡೆನಾಶಕ ಉಳಿಕೆ ಇರುವುದಿಲ್ಲ. ಆರೋಗ್ಯ ತಪಾಸಣೆಯಲ್ಲಿ ಭಾಗವಹಿಸಿದ ಜನರಲ್ಲಿ 54 ಗಂಡು, 46 ಹೆಣ್ಣು ಒಟ್ಟು 100 ಗ್ರಾಮಸ್ಥರು ಭಾಗವಹಿಸಿದರು.

## ಕೋಷ್ಟಕ 1.1 ಪೀಡೆನಾಶಕಗಳ ಪೈ ನಕ್ಷೆ




**ಕೋಷ್ಟಕ** 1.1 ರಲ್ಲಿ ತೋರಿಸಿದಂತೆ ಆರೋಗ್ಯ ತಪಾಸಣೆಯ ಮೂಲಕ ತಿಳಿದುಬಂದಿರುವುದು 81% ಪೀಡೆನಾಶಕ ಉಳಿಕೆ ಇರುವುದಿಲ್ಲ ಮತ್ತು 19% ಪೀಡೆನಾಶಕ ಉಳಿಕೆ ಇದೆ ಎಂಬುವುದು ಕೋಷ್ಟಕ ತಿಳಿಸುತ್ತದೆ.

## ಕೋಷ್ಟಕ 1.2 ರಕ್ತ ತಪಾಸಣೆಯಿಂದ ಕಂಡು ಬಂದ ರಕ್ತಹೀನತೆಯ ವಿವರಗಳು

| ರಕ್ತದ ಹಿಮೋಗ್ಲೋಬಿನ್ (ಮೀ.ಗ್ರಾಂ./100 ಮಿಲೀ) | ಗಂಡು | ಹೆಣ್ಣು | ಒಟ್ಟು |
|---|---|---|---|
| > 12 (ಸಾಮಾನ್ಯ) | 39 | 28 | 67 |
| 10–12 (ಮಧ್ಯಮ ರಕ್ತಹೀನತೆ | 09 | 11 | 20 |
| 7–10 (ರಕ್ತ ಹೀನತೆ) | 01 | 04 | 05 |
| < 7 (ತೀವ್ರ ರಕ್ತ ಹೀನತೆ) | 00 | 02 | 02 |
| ಒಟ್ಟು | 49 | 45 | 94 |

ಕೋಷ್ಠಕ 1.2 ರಲ್ಲಿ ತೋರಿಸಿದಂತೆ ಗಂಡು 39 ಹೆಣ್ಣು 28 ಒಟ್ಟು 67 ಜನರಲ್ಲಿ ಸಾಮಾನ್ಯ ರಕ್ತಹೀನತೆ (>12 ರಷ್ಟು) ಕಂಡುಬಂದಿದೆ, ಗಂಡು 09 ಹೆಣ್ಣು 11 ಒಟ್ಟು 20 ಜನರಲ್ಲಿ ಮಧ್ಯಮ ರಕ್ತಹೀನತೆ(10–12 ರಷ್ಟು) ಕಂಡುಬಂದಿದೆ , ಗಂಡು 01 ಹೆಣ್ಣು 04 ಒಟ್ಟು 05 ಜನರಲ್ಲಿ ರಕ್ತಹೀನತೆ (7–10 ರಷ್ಟು) ಕಂಡುಬಂದಿದೆ, ಮತ್ತು ಹೆಣ್ಣು 02 ಒಟ್ಟು 02 ಜನರಲ್ಲಿ ತೀವ್ರ ರಕ್ತ ಹೀನತೆ (<7 ರಷ್ಟು) ಗ್ರಾಮದ ತಪಾಸಣೆಯ ಮುಖಾಂತರ ಈ ಮೇಲಿನ ವರದಿಯ ತಿಳಿಸುತ್ತದೆ.

## ರೈತರಿಗೆ ತರಬೇತಿ ಮತ್ತು ಗ್ರಾಮ ಸಭೆ

ಮುಂಗಾರು ಹಂಗಾಮಿನ ಕುರಿತು ರೈತರಿಗೆ ತರಬೇತಿ ಹಾಗೂ ಗ್ರಾಮ ಸಭೆಯನ್ನು ದಿನಾಂಕ 24.05.2017 ರಂದು ಆಯೋಜಿಸಲಾಗಿತ್ತು. ತೋಟಗಾರಿಕಾ ಇಲಾಖೆ ಬ್ಯಾಡಗಿ ಹಾಗೂ ಕೃಷಿ ಇಲಾಖೆ ಬ್ಯಾಡಗಿ ರವರು ತಮ್ಮ ಇಲಾಖೆಯಿಂದ ಪ್ರಸ್ತುತ ಸಾಲಿನಲ್ಲಿ ಅನುಷ್ಠಾನಗೊಳ್ಳುತ್ತಿರುವ ಕರ್ನಾಟಕ ಸರ್ಕಾರ ಯೋಜನೆಗಳ ಬಗ್ಗೆ ಸವಿಸ್ತಾರವಾಗಿ ತಿಳಿಸಿದರು.

ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯ ವಿಜ್ಞಾನಿಗಳು ರೈತರಿಗೆ ಬೀಜೋಪಚಾರದ ಮಹತ್ವ ಕುರಿತು ಪ್ರಾತ್ಯಕ್ಷಿತೆಗಳ ಮೂಲಕ ತಿಳಿಸಿ, ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುವಲ್ಲಿ ಸಾವಯವ ಗೊಬ್ಬರಗಳ ಪಾತ್ರ ಹಾಗೂ ಸುಧಾರಿತ ತಳಿಗಳ ಬಗ್ಗೆ ಮಾಹಿತಿ ನೀಡಿದರು. ಅದರಂತೆ ರೈತರನ್ನು ಕುರಿತು ಮುಂಗಾರು ಬೆಳೆಗಳಿಗೆ ಬರುವ ಪ್ರಮುಖ ಕೀಟ ಮತ್ತು ರೋಗಗಳ ನಿರ್ವಹಣೆಯಲ್ಲಿ ಮುಂಜಾಗ್ರತ ಕ್ರಮಗಳ ಬಗ್ಗೆ ತಿಳಿಸಿದರು ಇದರ ಜೊತೆಗೆ ರೈತರಿಗೆ ಹೊಸ ತಾಂತ್ರಿಕತೆ ಅವಶ್ಯಕತೆಯಿದ್ದು ಹಾಗೂ ಮಳೆನೀರು ಕೊಯ್ಲು ಮತ್ತು ಚೌಕುಮಡಿ ಪದ್ಧತಿಯಿಂದ ತೇವಾಂಶ ಹಿಡಿದಿಟ್ಟುಕೊಳ್ಳುವ ತಾಂತ್ರಿಕತೆ ಹಾಗೂ ಕೃಷಿ ಉಪಕರಣಗಳ ಬಗ್ಗೆ ಮಾಹಿತಿ ನೀಡಿದರು. ರೈತರು ಈ ಎಲ್ಲಾ ತಾಂತ್ರಿಕತೆಗಳನ್ನು ಅಳವಡಿಸಿಕೊಳ್ಳುವುದರ ಜೊತೆಗೆ ಕಡಿಮೆ ಖರ್ಚಿನಲ್ಲಿ ಹೆಚ್ಚಿನ ಆದಾಯಕೊಡುವ ಸಿರಿಧಾನ್ಯಗಳ ಬೆಳೆ ಬೆಳೆಯಲು ಪ್ರೋತ್ಸಾಹಿಸಲಾಯಿತು.

ಮಳೆಯ ಅನಿಶ್ಚಿತತೆಯ ಕತ್ತಿ ನೆತ್ತಿಯ ಮೇಲೆ ತೂಗುತ್ತಿರುವಾಗ ಬರುವ ಮಳೆಯ ನೀರನ್ನು ಕೊಯ್ಲು ಮಾಡಲು ಮತ್ತು ಬೆಳೆಗಳ ಸಂದಿಗ್ಧ ಹಂತಗಳಲ್ಲಿ ನೀರುಣಿಸಲು ಅವಕಾಶ ಕಲ್ಪಿಸಿಕೊಳ್ಳುವುದು ಅತ್ಯಗತ್ಯ, ಹಾಗೂ ಇಳುಕಲಿಗೆ ಅಡ್ಡಲಾಗಿ ಉಳುಮೆ, ನಿಗದಿತ ಅಂತರದಲ್ಲಿ ಹರಿ/ ಬೋದುಗಳನ್ನು ಸಮಪಾತಳಿಗುಂಟೆ ನಿರ್ಮಿಸುವ, ಕಪ್ಪು ಜಮೀನುಗಳಲ್ಲಿ ಚೌಕು ಮಡಿ ಮಾಡುವ ಮೂಲಕ ಮಳೆಯ ನೀರು ಕೊಯ್ಲು ಮಾಡಬೇಕು.

ನೀರಾವರಿ ಅನುಕೂಲ ಇಲ್ಲದ ಕಡೆ ಹೈಬ್ರಿಡ್ ಜೋಳ, ರಾಗಿ,ನವಣೆ,ಹೆಸರು,ನೆಲಗಡಲೆ ಧನಿಯಾ(ಕೊತ್ತಂಬರಿ), ಎಳ್ಳು ಇಂತಹ ಬೆಳೆಗಳನ್ನು ತೊಗರಿ, ಸೂರ್ಯಕಾಂತಿ, ಗುರೆಳ್ಳು ಇವುಗಳೊಂದಿಗೆ ಅಕ್ಕಡಿಯಾಗಿ ಬೆಳೆಯುವುದು ಸೂಕ್ತವೆಂದು ಸಲಹೆ ನೀಡಿದರು.

ಸಾವಯವ ಗೊಬ್ಬರಗಳನ್ನು ಸ್ವಂತವಾಗಿ ಉತ್ಪಾದಿಸಿ ಬಳಸಬೇಕು ಅವುಗಳನ್ನು ಖರೀದಿಸಿ ಬಳಸುವುದು ಸಾಗುವಳಿ ವೆಚ್ಚವನ್ನು ಹೆಚ್ಚಿಸುತ್ತದೆ, ರಸಗೊಬ್ಬರಗಳನ್ನು (ಅನಿವಾರ್ಯವಾದಲ್ಲಿ, ಸಾವಯವ ಗೊಬ್ಬರಗಳನ್ನು) ಅಧಿಕೃತ ಮಾರಾಟಗಾರರಿಂದ ನಿಗದಿತ ಬಿಲ್ಲು ಪಡೆದು ಖರೀದಿಸಬೇಕು ಹಾಗೂ ಮಳೆಯ ಅನಿಶ್ಚಿತತೆ ಇರುವ ಈ ದಿನಮಾನಗಳಲ್ಲಿ

ಮೂಟೆಗಟ್ಟಲೆ ಗೊಬ್ಬರ ಬಳಸುವುದು ಸರಿಯಲ್ಲ ದೀರ್ಘ ಶುಷ್ಕ ಅವಧಿ ನಂತರ ಮಳೆ ಬಂದಾಗ ಅಥವಾ ಸತತ ಮಳೆಯಾಗಿ ಅತೀ ತೇವದಿಂದ ಬೆಳೆಗಳ ಬೇರುಗಳ ಕಾರ್ಯ ಚಟುವಟಿಕೆ ಕಡಿಮೆಯಾಗುತ್ತದೆ.ಆಗ ನೀರಿನಲ್ಲಿ ಕರಗುವ ಗೊಬ್ಬರಗಳನ್ನು ಸಿಂಪರಣೆ ಮಾಡಿ ಬೆಳೆಯ ನಿರ್ವಹಣೆ ಮಾಡಬೇಕು. ಸಾವಯವ ಗೊಬ್ಬರವನ್ನು ಟ್ರೈಕೋಡರ್ಮಾ ಬೆರೆಸಿ ಬೆಳೆಯ ಸಾಲುಗಳಿಗುಂಟ ಬಿತ್ತುವ ಮೂಲಕ ಗೊಬ್ಬರೆಗಳ ಸಮರ್ಥ ಬಳಕೆ ಮತ್ತು ಪರಿಣಾಮಕಾರಿ ಬೆಳೆರೋಗಗಳ ನಿರ್ವಹಣೆ ಸಾಧ್ಯ ಎಂದು ಖುರ್ಧ ವೀರಾಪುರ ಗ್ರಾಮದ ಜನರಿಗೆ ಹೇಳಿದರು.

ಅಧಿಕ ಇಳುವರಿ ನೀಡುವ ಕೆಲವು ಮೆಕ್ಕೆಜೋಳದ ತಳಿಗಳು ಸೊರಗು ರೋಗಕ್ಕೆ ಸುಲಭವಾಗಿ ತುತ್ತಾಗುವ ಪ್ರಕರಣಗಳು ಕಂಡು ಬಂದಿವೆ.ಇಂತಹ ಜಮೀನುಗಳಲ್ಲಿ ಬಿತ್ತುವಾಗ ಟ್ರೈಕೋಡರ್ಮ ಜೈವಿಕ ಶಿಲೀಂಧ್ರ ನಾಶಕವನ್ನು ಎಕರೆಗೆ 5 ಕೆಜಿ ಪ್ರಮಾಣದಲ್ಲಿ ಕೊಟ್ಟಿಗೆ ಅಥವಾ ಕಾಂಪೋಸ್ಟ್ ಗೊಬ್ಬರದೊಡನೆ ಬೆರೆಸಿ ಬಿತ್ತನೆ ಸಾಲುಗಳಲ್ಲಿ ಹಾಕಬೇಕು. ತೇವಾಂಶ ಕೊರತೆ ಮತ್ತು ಅತಿ ಬಿಸಿಲು ಇದ್ದಾಗ ಮೆಕ್ಕೆಜೋಳ ಬೆಳೆಯ ಆರಂಭದಲ್ಲಿ ಕಾಂಡಕೋರಕದ ಬಾಧೆ ಕಾಣಿಸುವುದು. ಇದರಿಂದ ಬೆಳೆಯ ಸುಳಿ ಒಣಗಿ ಬಗಲು ಮರಿಗಳು ಬರುತ್ತವೆ. ಈ ಬಾಧೆ ತಡೆಯಲು, ಬಿತ್ತುವಾಗ ಕಾರ್ಬೋಫ್ಯುರಾನ್ ಹರಳುಗಳನ್ನು ಬಿತ್ತನೆ ಸಾಲುಗಳಲ್ಲಿ ಬಿತ್ತಬೇಕು ಅಥವಾ ಬಿತ್ತುವ ಮೂದಲು ಪ್ರತಿ ಕೆಜಿ ಬೀಜಕ್ಕೆ 3 ಮಿಲೀ ನಂತೆ ಕ್ಲೋರ್‌ಪೈರಿಪಾಸ್ ಕೀಟನಾಶಕದಿಂದ ಲೇಪನ ಮಾಡಿ ಬಿತ್ತಬೇಕು. ಬಿತ್ತನೆಯ ನಂತರ ಎಡೆಹೊಡೆಯುವಾಗ ತಪ್ಪದೇ ದಿಂಡು ಏರಿಸಬೇಕು. ಲಘು ಪೋಷಕಾಂಶಗಳನ್ನು ಅಗತ್ಯಕ್ಕಿಂತ ಹೆಚ್ಚು ಬಳಸಬಾರದು.ಹೆಚ್ಚಿನ ಪ್ರಮಾಣದಲ್ಲಿ ಪ್ರಮಾಣದಲ್ಲಿ ಅವುಗಳ ಬಳಕೆ ಮಾಡಿದ್ದಲ್ಲಿ ಬೆಳೆಯ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುವ ಸಾಧ್ಯತೆ ಇದೆ. ಶೇಂಗಾ, ಜೋಳ, ಮೆಕ್ಕೆಜೋಳ, ಹೆಸರು,ಸೋಯಾಅವರೆ ಬೆಳೆಗಳಲ್ಲಿ ತೊಗರಿಯನ್ನು ಅಕ್ಕಡಿಯಾಗಿ ತಪ್ಪದೇ ಬೆಳೆಯಬೇಕು. ಜುಲೈ ಕೊನೆಯಲ್ಲಿ ಭತ್ತ ನಾಟಿ ಮಾಡುವ ರೈತರು ಅಂತಹ ಜಮೀನುಗಳಲ್ಲಿ ಈಗ ಸೆಣಬು ಅಥವಾ ಢೈಂಚಾ ಬೆಳೆ ಬೆಳೆಯುವುದು ಸೊಕ್ತ.ಇದರಿಂದ ಭೂಫಲವತತ್ತೆ ಮತ್ತು ಉತ್ಪಾದಕತೆ ಉತ್ತಮಗೊಳ್ಳುವವು, ರಾಸಾಯನಿಕ ಗೊಬ್ಬರ ಬಳಕೆ ಪ್ರಮಾಣ ಸಹ ಕಡಿಮೆ ಮಾಡಬಹುದು.ಈ ಹಸಿರೆಲೆ ಗೊಬ್ಬರ ಬೆಳೆಗಳನ್ನು ಸಾಲುಗಳಲ್ಲಿ ಬಿತ್ತನೆ ಮಾಡಿದಲ್ಲಿ ಮಧ್ಯಂತರ ಬೇಸಾಯ ಮಾಡಲು ಸಾಧ್ಯವಾಗುವುದು ಮತ್ತು ಅದರಿಂದ ಬೆಳವಣಿಗೆ ಉತ್ತಮಗೊಳ್ಳುವುದು ಎಂದು ಮುಂಗಾರು ಹಂಗಾಮಿನ ಬಗ್ಗೆ ಹಾಗೂ ಬೀಜೋಪಚಾರದ ಬಗ್ಗೆ ಸಲಹೆ ನೀಡಿದರು.



ಮುಂಗಾರು ಹಂಗಾಮಿನ ತರಬೇತಿ



ಮುಂಗಾರು ಹಂಗಾಮಿನ ಬಗ್ಗೆ ರೈತರಿಗೆ ತರಬೇತಿ ಕಾರ್ಯಕ್ರಮ



ಬೀಜೋಪಚಾರದ ಬಗ್ಗೆ ಪ್ರಾತ್ಯಕ್ಷಿತೆ



ಪ್ರದೇಶ ಸಮಾಚಾರ

ಮಂಗಳವಾರ 30 ಮೇ 2017 30 MAY 2017 4A

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ

VIJAYAVANI » HUBBALLI

**ಕೃಷಿ ಚಟುವಟಿಕೆಗೆ ತಜ್ಞರ ಮಾಹಿತಿ ಪಡೆಯಿರಿ**

■ ವಿಜಯವಾಣಿ ಸುದ್ದಿಜಾಲ ಬ್ಯಾಡಗಿ

ರೈತರು ಕೃಷಿ ಚಟುವಟಿಕೆ ಕೈಗೊಳ್ಳುವ ಸಂದರ್ಭದಲ್ಲಿ ಸಂಬಂಧಿಸಿದ ಇಲಾಖೆ ಹಾಗೂ ತಜ್ಞರಿಂದ ಮಾಹಿತಿ ಪಡೆದುಕೊಳ್ಳಬೇಕು ಎಂದು ಕೃಷಿ ವಿಜ್ಞಾನಿ ಡಾ. ಸರೋಜಿನಿ ಕರಕಣ್ಣಹೇಳಿದರು.

ತಾಲೂಕಿನ ಖುರ್ದುವೀರಾಪುರ ಗ್ರಾಮದಲ್ಲಿ ಧಾರವಾಡದ ಕೃಷಿ ವಿಶ್ವವಿದ್ಯಾಲಯ ಹಾಗೂ ಹನುಮನಕಟ್ಟಿಯ ಐಸಿಆರ್ ಕೃಷಿ ವಿಜ್ಞಾನ ಕೇಂದ್ರದ ಆಶ್ರಯದಲ್ಲಿ ರೈತರ ಕಲ್ಯಾಣ ಹಾಗೂ ಆದಾಯ ಅಭಿವೃದ್ಧಿ ಯೋಜನೆಯ ಮುಂಗಾರು ಹಂಗಾಮು ತರಬೇತಿ ಹಾಗೂ ಗ್ರಾಮಸ್ಥರ ಸಭೆಯಲ್ಲಿ ಅವರು ಮಾತನಾಡಿದರು.

ರೈತರಲ್ಲಿ ಆರ್ಥಿಕ ಸದೃಢತೆ ಹುಟ್ಟಿಸುವ ನಿಟ್ಟಿನಲ್ಲಿ ಇಂತಹ ಕಾರ್ಯಕ್ರಮಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಆಯೋಜಿಸಲಾಗುತ್ತಿದೆ. ರೈತರು ಮುಂಗಾರು ಹಂತದಲ್ಲಿ ಮಣ್ಣು ಪರೀಕ್ಷೆಯ ಮೂಲಕ ಬೀಜೋಪಚಾರ, ರಸಗೊಬ್ಬರ ಬಳಕೆಯ ವಿಧಾನ, ಸಾವಯುವ ಗೊಬ್ಬರ ತಯಾರಿಕೆ ಸೇರಿದಂತೆ ನೀರಿನ ಬಳಕೆ ಮುಂತಾದ ಮಾಹಿತಿಗಳನ್ನು ಅಗತ್ಯವಾಗಿ ಪಡೆಯಬೇಕು ಎಂದರು.

ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕಿ ಎಂ. ವಿಜಯಲಕ್ಷ್ಮೀ, ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಕೆ. ಅಮೃತೇಶ್ವರ ಅವರು ಇಲಾಖೆಗಳ ಮೂಲಕ ರೈತರಿಗೆ ದೊರಕುವ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು.

ಡಾ. ಪಿ. ಅಶೋಕ, ಆರ್. ವೀರಣ್ಣ, ಡಿ.ಕೆ. ಹರೀಶ, ಜೆ. ಕೆ. ನೀಲಕಾಂತ, ಸಿದ್ಧಲಿಂಗಪ್ಪ ಗುರೇಮಟ್ಟಿ ಮತ್ತಿತರರಿದ್ದರು.

ಖುರ್ದುವೀರಾಪುರ ಗ್ರಾಮದಲ್ಲಿ ರೈತರಿಗಾಗಿ ಆಯೋಜಿಸಲಾಗಿದ್ದ ಮುಂಗಾರು ಹಂಗಾಮು ತರಬೇತಿ ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನಿ ಡಾ. ಸರೋಜಿನಿ ಕರಕಣ್ಣನವರ ಮಾತನಾಡಿದರು.

ದಿನ ಪತ್ರಿಕೆಯಲ್ಲಿ ಪ್ರಕಟವಾದ ಮುಂಗಾರು ಹಂಗಾಮಿನ ತರಬೇತಿ ಕಾರ್ಯಕ್ರಮ

## ಎಲ್ಲೆಗೆರೆ ಸಮೀಕ್ಷೆ (Baseline survey)

- ಐಸ್ಯಕ್ (ISEC) ಬೆಂಗಳೂರಿನಲ್ಲಿ ಎಲ್ಲಾ ವಿಜ್ಞಾನಿಗಳು ಭಾಗವಹಿಸಿ ಪ್ರಶ್ನಾವಳಿಯನ್ನು ಪುನರ್ ವಿಮರ್ಶಿಸಿ ಅಂತಿಮ ಪ್ರಶ್ನಾವಳಿಯನ್ನು ದಿನಾಂಕ 15.05.17 ರಂದು ಸಿದ್ದಪಡಿಸಲಾಯಿತು.
- ರೈತರ ಆದಾಯ ಮತ್ತು ಕಲ್ಯಾಣ ವೃದ್ಧಿ ಯೋಜನೆ ಅಡಿಯಲ್ಲಿ ಆಯ್ಕೆಯಾದ 25 ಫಲಾನುಭವಿ ರೈತರ ಸಮಗ್ರ ಕೃಷಿ ಪದ್ಧತಿಯ ಅಳವಡಿಕೆಯ ಕುರಿತು ಸಂಪೂರ್ಣ ಮಾಹಿತಿಯನ್ನು ಜೂಲೈ ತಿಂಗಳಲ್ಲಿ ಕಲೆಹಾಕಲಾಯಿತು.
- ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆಯ ಸಲಹೆಯಂತೆ ಆಯ್ಕೆಯಾದ ಗ್ರಾಮದ ಎಲ್ಲೆಗೆರೆ ಸಮೀಕ್ಷೆಯನ್ನು ಗ್ರಾಮದ 94 ರೈತ ಕುಟುಂಬಗಳ ಸಂಪೂರ್ಣ ಮಾಹಿತಿ ಪಡೆಯಲಾಯಿತು ಹಾಗೂ KAPC ತಂಡವು ಗ್ರಾಮಕ್ಕೆ ಆಗಮಿಸಿ ಎಲ್ಲೆಗೆರೆ ಸಮೀಕ್ಷೆಯ ಪ್ರತಿಗಳನ್ನು ಪರಿಶೀಲನೆ ಮಾಡಿದರು.





ಐಸ್ಯಕ್ (ISEC) ಬೆಂಗಳೂರಿನಲ್ಲಿ ಎಲ್ಲೆಗೆರೆ ಸಮೀಕ್ಷೆಯ ಪರಿಶೀಲನೆ

ಎಲ್ಲೆಗೆರೆ ಸಮೀಕ್ಷೆ

# ಮಣ್ಣಿನ ಆರೋಗ್ಯ ಪರೀಕ್ಷೆ

ರೈತರಿಗೆ ಮಣ್ಣಿನ ಆರೋಗ್ಯ ಪರೀಕ್ಷೆ ಬಗ್ಗೆ ಒಲವು ಮೂಡಿಸಲು ಮತ್ತು ಮಣ್ಣು ಆರೋಗ್ಯ ಕಾರ್ಡನ ಕುರಿತು ಮಾಹಿತಿ ನೀಡಲಾಯಿತು. ರೈತರೊಂದಿಗೆ ಗುಂಪು ಚರ್ಚೆ ಹಮ್ಮಿಕೊಂಡು ರೈತರಿಗೆ ಮಣ್ಣು ಮಾದರಿ ಸಂಗ್ರಹಣೆ ವಿಧಾನದ ಬಗ್ಗೆ ಸಂಪೂರ್ಣ ವಿವರವನ್ನು ಚಿತ್ರಣದ ಮೂಲಕ ಮೂದಲು ಜಮೀನನ್ನು ಏಕರೀತಿನತುಂಡುಗಳಾಗಿ ವಿಂಗಡಣೆ ಮಾಡಿ ಇಂಗ್ಲೀಷ ವರ್ಣಮಾಲೆ ' Z ' ಆಕಾರದಲ್ಲಿ ಮಾದರಿ ತೆಗೆಯಬೇಕು, ಗುರುತಿನ ಗುಂಡಿಗಳನ್ನು ತೆಗೆದು ಉಪಮಾದರಿಗಳನ್ನು ಒಂದು ಕಡೆ ಹಾಕಿ ಸರಿಯಾಗಿ ಕಲಿಸಬೇಕು, ನಂತರ ಒಂದು ಹಾಳೆಯ ಮೇಲೆ ಸಂಗ್ರಹಿಸಿದ ಉಪಮಾದರಿಯ ಮಣ್ಣನ್ನು ಹಾಕಿ ಅದನ್ನು ನಾಲ್ಕು ವಿಭಾಗವಾಗಿ ವಿಂಗಡಿಸಿ ಎದುರು ಬದರಿನ ಮಣ್ಣಿನ ಮಾದರಿಗಳನ್ನು ತಿರಸ್ಕರಿಸುವುದು,ಪ್ರಾಥಮಿಕ ಮಾದರಿಯನ್ನು ಮಾಹಿತಿಯ ಚೀಟಿಯೊಂದಿಗೆ ಒಂದು ಚೀಲದಲ್ಲಿ ಹಾಕಿ ಕೊಡಬೇಕು ಎಂದು ರೈತರಿಗೆ ಮನವರಿಕೆ ಮಾಡಲಾಯಿತು.

ಮಣ್ಣಿನ ಮಾದರಿಗಳನ್ನು ತೆಗೆಯುವಾಗ ಕೆಲವು ಎಚ್ಚರಿಕೆಗಳನ್ನು ಕೂಡ ಅನುಸರಿಸುವ ಕ್ರಮಗಳು

1. ಭೂಮಿಗೆ ಗೊಬ್ಬರ ಹಾಕಿದ ನಂತರ ತೆಗೆಯಬಾರದು
2. ತಿಪ್ಪೆ ಗುಂಡಿಗಳ ಪಕ್ಕ, ರಸ್ತೆ ಬದಿಗಳ ಪಕ್ಕ, ಮರದ ಪಕ್ಕ, ಕಾಲುವೆಗಳ ಪಕ್ಕ ತೆಗೆಯಬಾರದು
3. ಮಣ್ಣು ತೇವವಾಗಿದ್ದರೆ ನೆರಳಿನಲ್ಲಿ ಒಣಗಿಸಬೇಕು
4. ಬಿಸಿಲಿನಲ್ಲಿ ಒಣಗಿಸಿದರೆ ಬಿಸಿಲಿನ ತಾಪದಿಂದ ಅವುಗಳ ಗುಣಧರ್ಮಗಳಲ್ಲಿ ವ್ಯತ್ಯಾಸವಾಗುತ್ತದೆ. ಎಂದುಹಳ್ಳಿಯ ರೈತರಿಗೆ ಹೇಳಲಾಯಿತು.

ಮಣ್ಣು ಆರೋಗ್ಯ ಕಾರ್ಡ ಪ್ರತಿ ರೈತರಿಗೂ ಅವಶ್ಯಕತೆಯಿದ್ದು, ಕಾರಣ ಎಲ್ಲಾ ರೈತರು ತಮ್ಮ ಹೊಲಗಳ ಮಣ್ಣು ಮಾದರಿಯ ಪರೀಕ್ಷೆಯ ಆಧಾರದ ಮೇಲೆ ರಸಗೊಬ್ಬರಗಳನ್ನು ಉಪಯೋಗಿಸಲು ತಿಳಿಸಲಾಯಿತು. ಗ್ರಾಮದ ಒಟ್ಟು 50 ಮಣ್ಣಿನ ಮಾದರಿಗಳನ್ನು ಸಂಗ್ರಹಿಸಿದ್ದು ಮಾದರಿಗಳ ರಸಸಾರ, ಇಸಿ, ಮುಖ್ಯ ಹಾಗೂ ಲಘು ಪೋಷಕಾಂಶಗಳ ಲಭ್ಯತೆ ಕುರಿತಂತೆ ವರದಿಯನ್ನು ಸಿದ್ಧಪಡಿಸಲಾಗಿದೆ.

**ರೈತರ ಹೊಲಗಳಲ್ಲಿ ಮಣ್ಣು ಮಾದರಿಯ ತೆಗೆಯುವ ಪ್ರಾತ್ಯಕ್ಷಿತೆ**

- **ಪಾಯಿಂಟ್ ಮಾದರಿ:** ಮುಖ್ಯ ಹಾಗೂ ಲಘು ಪೋಷಕಾಂಶಗಳ ವಿಶ್ಲೇಷಣೆ ಪೂರ್ಣಗೊಂಡಿದ್ದು, ಮಣ್ಣು ಆರೋಗ್ಯ ಕಾರ್ಡನ್ನು ಸಿದ್ದಪಡಿಸಲಾಗಿದೆ.
- **ಗ್ರಿಡ್ ಮಾದರಿ:** ಮುಖ್ಯ ಹಾಗೂ ಲಘು ಪೋಷಕಾಂಶಗಳ ವಿಶ್ಲೇಷಣೆ ಪೂರ್ಣಗೊಂಡಿದೆ

**ಮಣ್ಣಿನ ಆರೋಗ್ಯ ಪರೀಕ್ಷೆ–25 ಮಾದರಿಗಳು**

**ಗ್ರಾಮದ ಒಟ್ಟು 25 ಮಣ್ಣಿನ ಮಾದರಿಗಳನ್ನು ಸಂಗ್ರಹಿಸಿದ್ದು ಮಾದರಿಗಳ ರಸಸಾರ, ಇಸಿ, ಮುಖ್ಯ ಹಾಗೂ ಲಘು ಪೋಷಕಾಂಶಗಳ ಲಭ್ಯತೆ ಕುರಿತಂತೆ ವರದಿ ಸಿದ್ಧಪಡಿಸಲಾಗಿದೆ.**

| ಕ್ರ.ಸಂ | ಪೋಷಕಾಂಶಗಳು | ಕಡಿಮೆ | ಮಧ್ಯಮ | ಅಧಿಕ |
|---|---|---|---|---|
| 1 | N | 12 | 13 | – |
| 2 | P | 07 | 18 | – |
| 3 | K | 03 | 09 | 13 |
| 4 | pH | 10 | 14 | 01 |
| 5 | EC | – | 13 | 02 |
| 6 | OC | 05 | 20 | – |
| 7 | S | 05 | 15 | 05 |
| 8 | Fe | 23 | – | 02 |
| 9 | B | 05 | 20 | – |
| 10 | Mn | 03 | 22 | – |
| 11 | Zn | 08 | 17 | – |
| 12 | Cu | 06 | 19 | – |

## ಮಣ್ಣಿನ ಮಾದರಿ ತೆಗೆಯುವ ಪದ್ಧತಿ :

ಮಣ್ಣಿನ ಮಾದರಿ ತೆಗೆಯಲು ಒಳಪಡಿಸುವ ಜಮೀನನ್ನು ಒಂದು ಸಲ ಸಾಮಾನ್ಯವಾಗಿ ಪರೀಕ್ಷಿಸಬೇಕು. ಇಳಿಜಾರು ಪ್ರದೇಶ, ಮಣ್ಣಿನ ಸಾವಯವದ ಅಂಶ, ಮಣ್ಣಿನ ಫಲವತ್ತತೆ ಇವುಗಳನ್ನು ಪ್ರತಿನಿಧಿಸುವಂತೆ ಬೇರೆ ಮಾದರಿಗಳನ್ನು ತೆಗೆದುಕೊಳ್ಳಬೇಕು. ಕಟ್ಟಡಗಳ ಪಕ್ಕ, ಹೊಲದ ಬದುವಿನಲ್ಲಿ, ಕ್ಷೇತ್ರಗಳಲ್ಲಿ ದಾರಿಗುಂಟ ಮತ್ತು ಗೊಬ್ಬರ ಹಾಕಿದ ಬೆಳೆಗಳ

ಸಾಲುಗಳಲ್ಲಿ ಮಣ್ಣಿನ ಮಾದರಿಗಳನ್ನು ತೆಗೆಯುವುದು ಸೂಕ್ತವಲ್ಲ. ಮಣ್ಣಿನ ಮಾದರಿಯನ್ನು ತೆಗೆಯುವ ಪ್ರತಿಯೊಂದು ಕ್ಷೇತ್ರದಲ್ಲಿ ತಿರುಗಾಡಿ 15 ರಿಂದ 20 ಹೆಜ್ಜೆಗಳ ಅಂತರದಲ್ಲಿ ಒಂದೊಂದು ಮಾದರಿಯನ್ನು ತೆಗೆದು ಚೀಲದಲ್ಲಿ ಹಾಕಬೇಕು. ಒಂದು ಮಣ್ಣಿನ ಮಾದರಿ ಬೇಕಾದಲ್ಲಿ ಈ ತರಹದ 20 ರಿಂದ 25 ಸ್ಥಳದಲ್ಲಿ ' Z ' ಆಕಾರದಲ್ಲಿ ತಿರುಗಾಡಿ ಮಣ್ಣಿನ ಮಾದರಿಯನ್ನು ತೆಗೆಯಬೇಕು ಒಂದೊಂದು ಸ್ಥಳದಲ್ಲಿ ಮಣ್ಣಿನ ಮಾದರಿಯ ಗಾತ್ರ ಆದಷ್ಟು ಸಣ್ಣದಿದ್ದರೆ ಸೂಕ್ತ,

ಮೇಲೆ ತಿಳಿಸಿದಂತೆ ಸಂಗ್ರಹಿಸಿದ ಮಣ್ಣಿನ ಮಾದರಿಯ ಗಾತ್ರ ಅತೀ ದೊಡ್ಡದಾಗಿದ್ದರೆ ಅದನ್ನು ಚೆನ್ನಾಗಿ ಕೂಡಿಸಿ, ದೊಡ್ಡ ಸಾಣಿಗೆಯ ಮೂಲಕ ಹಾಯಿಸಿ, ಇಲ್ಲವೇ ಮಣ್ಣನ್ನು ಪ್ರತಿನಿಧಿಸುವಂತೆ ಸಣ್ಣ ಗಾತ್ರದ ಮಾದರಿಯನ್ನು ತೆಗೆದುಕೊಳ್ಳಲು ಮೊದಲು ದೊಡ್ಡ ಸಾಣಿಗೆಯ ಮೂಲಕ ಹಾಯಿಸಿದ ಮಣ್ಣನ್ನು ಸ್ವಚ್ಛವಾದ ಪ್ಲಾಸ್ಟಿಕ್ ಹಾಳೆಯ ಮೇಲೆ ಹರಡಿ ಸಮನಾಗಿ ನಾಲ್ಕು ಭಾಗಗಳನ್ನು ಮಾಡಬೇಕು. ಎದರು ಬದರು ಇರುವ ಎರಡು ಭಾಗಗಳನ್ನು ಆಯ್ದುಕೊಂಡು ಉಳಿದೆರಡು ಭಾಗಗಳನ್ನು ತಿರಸ್ಕರಿಸಬೇಕು. ಈ ಪದ್ಧತಿಯನ್ನು ಸುಮಾರು 1 ರಿಂದ 2 ಮುಷ್ಟಿ (500 ಗ್ರಾಂ) ಮಣ್ಣು ಉಳಿಯುವವರೆಗೆ ಮುಂದುವರೆಸಬೇಕು. ಸಾಮಾನ್ಯವಾಗಿ ಮಣ್ಣು ಪರೀಕ್ಷೆಗೆ 500 ಗ್ರಾಂ ಮಣ್ಣು ಮಾದರಿ ಸಾಕಾಗುತ್ತದೆ. ಹೀಗೆ ತೆಗೆದ ಪ್ರತಿಯೊಂದು ಮಣ್ಣಿನ ಮಾದರಿಯನ್ನು " ಪ್ರತಿ ಮಣ್ಣು ಮಾದರಿಯೊಂದಿಗೆ ಮಣ್ಣು ಪರೀಕ್ಷಾ ಪ್ರಯೋಗಾಲಯಕ್ಕೆ ಕಳುಹಿಸಬೇಕು.

ಮಣ್ಣು ಪರೀಕ್ಷಾ ಕೇಂದ್ರಗಳಲ್ಲಿ ಮೂರು ಪ್ರಧಾನ ಸಸ್ಯ ಪೋಷಕಾಂಶಗಳಾದ ಸಾರಜನಕ ( ಸಾವಯವ ಇಂಗಾಲ),ರಂಜಕ ಮತ್ತು ಪೊಟ್ಯಾಷಗಳು ದೊರೆಯುವ ಪ್ರಮಾಣವನ್ನು ನಿರ್ಧರಿಸಲಾಗುವುದು. ಇವುಗಳು ಆದಾರದ ಮೇಲೆ ಮಣ್ಣನ್ನು ಕಡಿಮೆ ಮಧ್ಯಮ ಅಥವಾ ಅಧಿಕ ಫಲವತ್ತತೆ ವರ್ಗಗಳಾಗಿ ಈ ಕೆಳಗಿನಂತೆ ವಿಂಗಡಿಸಲಾಗುವುದು.

ಮುಖ್ಯ ಪೋಷಕಾಂಶಗಳು ಯವ ಫಲವತ್ತತೆಯ ಗುಂಪಿಗೆ ಸೇರಿವೆ ಎಂದು ನಿರ್ಧರಿಸಿದ ನಚಿತರ ಶಿಫಾರಸು (ನಿಗದಿತ) ಮಾಡಿದ ರಾಸಾಯನಿಕ ಗೊಬ್ಬರಗಳ ಪ್ರಮಾಣದಲ್ಲಿ ಬದಲಾವಣೆ ಮಾಡಬೇಕಾಗುತ್ತದೆ. ಫಲವತ್ತತೆ ಮಧ್ಯಮ ವರ್ಗಕ್ಕೆ ಸೇರಿದ್ದರೆ, ಶಿಫಾರಸು ಮಾಡಿದ ರಾಸಾಯನಿಕ ಗೊಬ್ಬರಗಳ ಪ್ರಮಾಣದಲ್ಲಿ ಯಾವ ಬದಲಾವಣೆಗಳನ್ನು ಮಾಡುವ ಅವಶ್ಯಕತೆ ಇಲ್ಲ. ಪೋಷಕಾಂಶಗಳು ಕಡಿಮೆ ಅಥವಾ ಅಧಿಕ ಫಲವತ್ತತೆ ವರ್ಗಕ್ಕೆ ಸೇರಿದ್ದರೆ, ಈ ಕೆಳಗಿನಂತೆ ರಾಸಾಯನಿಕ ಗೊಬ್ಬರಗಳ ಪ್ರಮಾಣವನ್ನು ಬದಲಾಯಿಸಿಕೊಳ್ಳಬಹುದು.

## ಸಮವಸ್ತ್ರ ಹಾಗೂ ಇತರೆ ಸಾಮಗ್ರಿಗಳ ವಿತರಣೆ









## ಕೃಷಿಗೆ ಸಂಬಂದಿಸಿದ ಪುಸ್ತಕಗಳ ವಿತರಣೆ




## ಸೈನಿಕ ಹುಳುವಿಗೆ ವಿಷ ಪಾಷಾಣ ತಯಾರಿಕೆಯ ಪದ್ಧತಿ ಪ್ರಾತ್ಯೇಕ್ಷಿಕೆ

ಹಾವೇರಿ ಜಿಲ್ಲೆಯಲ್ಲಿ ಹೆಚ್ಚಾಗಿ ಗೋವಿನ ಜೋಳ ಬೆಳೆಯುತ್ತಿದ್ದು, ಆ ಬೆಳೆಗೆ ಸೈನಿಕ ಹುಳುವಿನ ಭಾದೆ ಹೆಚ್ಚಾಗಿ ಕಂಡು ಬಂದಿರುತ್ತದೆ, ಬ್ಯಾಡಗಿ ತಾಲ್ಲೂಕಿನ ಖುರ್ಧ ವೀರಾಪುರ ಗ್ರಾಮದ ಸುತ್ತಮುತ್ತಲೂ ಕೂಡಾ ಗೋವಿನ ಜೋಳ ಬೆಳೆಯುತ್ತಿದ್ದು, ಆ ಬೆಳೆಗೆ ಸೈನಿಕ ಹಿಳುವಿನ ಹಾವಳಿಯಿಂದ ಇಳುವರಿ ಕಡಿಮೆಯಾಗಿದ್ದು ಇದರ ನಿರ್ವಹಣೆಗಾಗಿ ರೈತರಿಗೆ ಸೈನಿಕ ಹುಳುವಿನ ಹತೋಟಿಗೆ ವಿಷ ಪಾಷಾಣ ತಯಾರಿಕೆಯ ಬಗ್ಗೆ ತಿಳಿಸಲಾಯಿತು

ಸೈನಿಕ ಹುಳುವಿನ ಹತೋಟಿಗೆ ವಿಷ ಪಾಷಾಣ ತಯಾರಿಕೆಯ ಪದ್ದತಿ ಪ್ರಾತ್ಯಕ್ಷಿಕೆಯನ್ನು ದಿನಾಂಕ 11.10.2017 ರಂದು ಖುರ್ಧ ವೀರಾಪುರ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿತ್ತು ಈ ಕಾರ್ಯಕ್ರಮದಲ್ಲಿ ಡಾ. ಗುರುಪ್ರಸಾದ ಜಿ. ಎಸ್. ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು ಕೃಷಿ ವಿಜ್ಞಾನ ಕೇಂದ್ರ ಹನುಮನಮಟ್ಟಿ ಇವರು ಸೈನಿಕ ಹುಳುವಿನ ಜೀವನ ಚಕ್ರ, ಗುಣಲಕ್ಷಣ ಮತ್ತು ನಿರ್ವಹಣಾ ಕ್ರಮಗಳ ಬಗ್ಗೆ ರೈತರಿಗೆ ಸೈನಿಕ ಹುಳುವಿನ ವಿಷ ಪಾಷಾಣವನ್ನು ತಯಾರಿಸುವ ಮೂಲಕ ಅರಿವು ಮೂಡಿಸಿದರು. ನಂತರ ಡಾ. ಪ್ರಿಯಾ. ಪಿ ವಿಜ್ಞಾನಿ (ಬೇಸಾಯಶಾಸ್ತ್ರ) ಇವರು ಹೊಲದ ಸುತ್ತಲಿನ ಬದುಗಳಲ್ಲಿ ಬೆಳೆಯುವ ಕಳೆಯನ್ನು

ನಿರ್ಮೂಲನೆ ಮಾಡುವುದರಿಂದ ಸೈನಿಕ ಹುಳುವಿನ ಭಾದೆಯನ್ನು ಕಡಿಮೆ ಮಾಡಬಹುದೆಂದು ವಿವರಿಸಿದರು. ಈ ಕಾರ್ಯಕ್ರಮದಲ್ಲಿ ಸುಮಾರು 55 ಜನ ರೈತರು ಭಾಗವಹಿಸಿ ಮಾಹಿತಿಯನ್ನು ಪಡೆದುಕೊಂಡರು.




**ಸೈನಿಕ ಹುಳುವಿನ ಹತೋಟಿಗೆ ವಿಷ ಪಾಷಾಣ ತಯಾರಿಕೆಯ ಪದ್ದತಿ ಪ್ರಾತ್ಯಕ್ಷಿಕೆಯ ಬಗ್ಗೆ ರೈತರೊಂದಿಗೆ ಚರ್ಚೆ**

**ಸೈನಿಕ ಹುಳುವಿನ ಲಕ್ಷಣಗಳು** : ಮರಿ ಕೀಡೆಗಳು ಎಲೆಯನ್ನು ಅಂಚಿನಿಂದ ತಿನ್ನುವ್ವದರಿಂದ ಮಧ್ಯದ ನರ ಮಾತ್ರ ಉಳಿಯುವುದು. ಸುಳಿಯಲ್ಲಿ ಕೀಡೆಯ ಲದ್ದಿಯು ಕಾಣುತ್ತದೆ. ಹಾನಿಯ ಪ್ರಮಾಣ ಶೇ.33 ರ ವರೆಗೂ ಆಗಬಹುದು.

**ನಿರ್ವಹಣೆ** : ಪಾಷಾಣ ತಯಾರಿಸುವ ವಿಧಾನ: 4 ಕಿ.ಗ್ರಾಂ ಬೆಲ್ಲ, 250 ಮಿ.ಲೀ. ಮೊನೋಕ್ರೋಟೊಫಾಸ್ 36 ಎಸ್.ಎಲ್. 5–8 ಲೀಟರ್ ನೀರು ಹಾಗೂ 50 ಕಿ. ಗ್ರಾಂ ಅಕ್ಕಿ ಅಥವಾ ಗೋಧಿ ತೌಡಿನೊಂದಿಗೆ ಬೆರೆಸಿ. ನಂತರ 48 ಗಂಟೆಗಳ ಕಾಲ ಗೋಣಿ ಚೀಲಗಳಲ್ಲಿ ಕಳಿಯಲು ಇಡಬೇಕು. ಕಳಿತ ಪಾಷಾಣವನ್ನು ಹೆಕ್ಟೇರಿಗೆ 50 ಕ. ಗ್ರಾಂ ದಷ್ಟು ಸುಳಿ ಹಾಗೂ ಎಲೆಗಳ ಮೇಲೆ ಬೀಳುವಂತೆ ಎರಚಬೇಕು.



**ವಿಷ ಪಾಷಾಣ ತಯಾರಿಕೆಯ ಪದ್ದತಿ ಪ್ರಾತ್ಯಕ್ಷಿಕೆ**

# ಅಂತರಾಷ್ಟ್ರೀಯ ಗ್ರಾಮೀಣ ಮಹಿಳೆಯರ ದಿನ ಹಾಗೂ ವಿಶ್ವ ಆಹಾರ ದಿನಾಚರಣೆ

ಅಂತರಾಷ್ಟ್ರೀಯ ಗ್ರಾಮೀಣ ಮಹಿಳೆಯರ ದಿನ ಹಾಗೂ ವಿಶ್ವ ಆಹಾರ ದಿನಾಚರಣೆಯ ಅಂಗವಾಗಿ ದಿನಾಂಕ 16.10.2017 ರಂದು ಖುರ್ಧವೀರಾಪುರ ಗ್ರಾಮದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ 2017–18ನೇ ಸಾಲಿನ ಶ್ರೇಷ್ಠ ಕೃಷಿ ಮಹಿಳೆ ವಿಜೇತರಾದ ಶ್ರೀಮತಿ ಮಹದೇವಕ್ಕನವರನ್ನು ವಿಶೇಷ ಅಥಿತಿಯಾಗಿ ಆಹ್ವಾನಿಸಲಾಗಿತ್ತು. ಅವರು ತಮ್ಮ ಸಾಧನೆಯ ಬಗ್ಗೆ ಆ ಗ್ರಾಮದ ರೈತ / ರೈತ ಮಹಿಳೆಯರೊಂದಿಗೆ ಹಂಚಿಕೊಂಡರು. ಗ್ರಾಮದ ಗ್ರಾಮ ಪಂಚಾಯಿತಿ ಸದಸ್ಯರಾದ ಶ್ರೀ ಸಿದ್ಧಲಿಂಗಪ್ಪ ಗುರೇಮಟ್ಟಿಯವರು ಉಪಸ್ಥಿತರಿದ್ದರು, ಕಾರ್ಯಕ್ರಮದಲ್ಲಿ ಸುಮಾರು 70 ಜನ ರೈತ ಮಹಿಳೆಯರು ಆಗಮಿಸಿದ್ದರು. ಕೃಷಿ ಮಹಿಳೆ ವಿಜೇತರಾದ ಶ್ರೀಮತಿ ಮಹದೇವಕ್ಕನವರು ಮಹಿಳೆಯರು ಮನಸ್ಸು ಮಾಡಿದರೆ ಎನನ್ನು ಬೇಕಾದರು ಸಾಧಿಸುತ್ತರೆ, ಅವರಿಗೆ ಪ್ರೋತ್ಸಾಹ ನೀಡಬೇಕು, ಪ್ರಸ್ತುತ ಎಲ್ಲ ರಂಗದಲ್ಲಿ ಮಹಿಳೆಯರದೆ ಮೇಲುಗೈ ಇದೆ, ಹಾಗೆಯೇ ನಾವು ಅವರ ಅದನ ಮಾಡಿದರು ಇದನ ಮಾಡಿದರು ಅಂತ ಹೇಳುವುದುಕ್ಕಿಂತ ನಾವು ಎನಾದರು ಸಾಧನೆ ಮಾಡಬೇಕು ಎಂಬ ಛಲ ನಮ್ಮ ಮನದಲ್ಲಿ ಬರಬೇಕು ಎಂದು ಹೇಳುತ್ತಾ ಇಂದಿನ ಹೆಣ್ಣು ಮಕ್ಕಳಿಗೆ ಒಳ್ಳೆಯ ಅಭ್ಯಾಸವನ್ನು ನೀವು ಮಕ್ಕಳಿಗೆ ನೀಡಿ ಮತ್ತೆ ನೀವು ನಿಮ್ಮ ಜೀವನದಲ್ಲಿ ನಿಮ್ಮದೆ ಆದ ಚಾಪು ಮೂಡಿಸಿ ಎಂದು ಮಹದೇವಕ್ಕನವರು ಖುರ್ಧವೀರಾಪುರ ಗ್ರಾಮದ ಮಹಿಳೆಯರಿಗೆ ಮನದಾಳದ ಮಾತನ್ನು ಹೇಳಿದರು.

ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು ಡಾ. ಸರೋಜಿನಿ ಮೇಡಮ ಅವರು ಈಗಿನ ಪ್ರಸ್ತತ ಜಗತ್ತಿನಲ್ಲಿ ಮಹಿಳೆಯ ಕೊಡುಗೆ ಅಪಾರ, ಹಾಗೆಯೇ ಅವಳು ಅಡುಗೆ ಮನೆಗೆ ಮಾತ್ರ ಸೀಮಿತ ಅಲ್ಲ ನಾನು ಪುರುಷರಿಗೆ ಯಾವದ್ದಕ್ಕು ಕಡಿಮೆ ಇಲ್ಲಾ ಎಂಬುದನ್ನು ನಿರೂಪಿಸಿದ್ದಾಳೆ. ನಮ್ಮ ಹಾವೇರಿ ಜಿಲ್ಲೆಯ 2017–18ನೇ ಸಾಲಿನ ಶ್ರೇಷ್ಠ ಕೃಷಿ ಮಹಿಳೆ ವಿಜೇತರಾದ ಶ್ರೀಮತಿ ಮಹದೇವಕ್ಕನವರು ಕೂಡಾ ಒಬ್ಬ ಮಹಿಳೆ ಅವರು ಕೂಡಾ ಕೃಷಿಯಲ್ಲಿ ಸಾಧನೆ ಮಾಡಿ ಎಷ್ಟೋ ಜನ ರೈತರಿಗೆ ಮಾದರಿಯಾಗಿದ್ದಾರೆ ಅವರಂತೆಯೇ ನೀವು ಕೊಡಾ ಮುಂದೆ ಬರುವ ಪ್ರಯತ್ನ ಮಾಡಬೇಕು ಅದಕ್ಕೆ ಸರಕಾರ ಕೂಡಾ ಪ್ರೋತ್ಸಹ ನೀಡುತ್ತದೆ ಎಂದು ಖುರ್ಧವೀರಾಪುರ ಗ್ರಾಮದ ಮಹಿಳೆಯರಿಗೆ ಹೇಳಿದರು.



**ಅಂತರಾಷ್ಟ್ರೀಯ ಗ್ರಾಮೀಣ ಮಹಿಳೆಯರ ದಿನ ಹಾಗೂ ವಿಶ್ವ ಆಹಾರ ದಿನಾಚರಣೆ**

## ಖುರ್ದವೀರಾಪುರ ಗ್ರಾಮಕ್ಕೆ ಪ್ಲಸ್ ಟ್ರಸ್ಟ್ ತಂಡದ ಭೇಟಿ ಮತ್ತು ಸಮಗ್ರ ಕೃಷಿ ಪದ್ಧತಿಯ ಅಳವಡಿಕೆಯ ಕುರಿತು ಫಲಾನುಭವಿಗಳ ಜೊತೆ ಚರ್ಚೆ

ಡಾ. ಮುಕುಂದ ಜೋಶಿ ಪ್ಲಸ್ ಟ್ರಸ್ಟ್ ಬೆಂಗಳೂರು ಇವರು ದಿನಾಂಕ 25.10.17 ರಂದು ಖುರ್ದವೀರಾಪುರ ಗ್ರಾಮಕ್ಕೆ ಭೇಟಿ ನೀಡಿದ್ದರು. ಇವರು ಪ್ರತಿಯೊಬ್ಬ ಫಲಾನುಭವಿಗಳ ಜೊತೆಗೆ ಚರ್ಚಿಸಿ ಸಮಗ್ರ ಕೃಷಿ ಪದ್ದತಿಯ (IFS Model) ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡಿದರು. ಗುಂಪು ಚರ್ಚೆಯ ನಂತರ ಮಾಸಣಗಿ ಗ್ರಾಮದ ಪ್ರಗತಿಪರ ರೈತರಾದ ಶ್ರೀ ಭರಮಗೌಡ್ರ ಪಾಟೀಲ ಇವರ ಹೈನು ಘಟಕಕ್ಕೆ  ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳೊಂದಿಗೆ ಭೇಟಿ ನೀಡಿದರು, ಅದೇ ದಿನದಂದು ಇವರ ಅಧ್ಯಕ್ಷತೆಯಲ್ಲಿ ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯಲ್ಲಿ ಜಿಲ್ಲಾ ಮಟ್ಟದ ವಿವಿಧ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳಿಗೆ ಏಂಕಅ ಪ್ರಾಯೋಜಿತ, "ರೈತರ ಆದಾಯ ಮತ್ತು ಕಲ್ಯಾಣ ವೃದ್ಧಿ ಯೋಜನೆ" ಬಗ್ಗೆ ಸಭೆಯನ್ನು ಆಯೋಜಿಸಲಾಗಿತ್ತು.



**ಸಮಗ್ರ ಕೃಷಿ ಪದ್ಧತಿಯ ಅಳವಡಿಕೆಯ ಕುರಿತು ಫಲಾನುಭವಿಗಳ ಜೊತೆ ಚರ್ಚೆ**



**ಪ್ರಗತಿಪರ ರೈತ: ಶ್ರೀ ಭರಮಗೌಡ್ರ ಪಾಟೀಲ ಇವರ ಹೈನು ಘಟಕಕ್ಕೆ ಭೇಟಿ**



**ಇಲಾಖೆಯ ಅಧಿಕಾರಿಗಳಿಗೆ ಏಂಕಅ ಪ್ರಾಯೋಜಿತ, "ರೈತರ ಆದಾಯ ಮತ್ತು ಕಲ್ಯಾಣ ವೃದ್ಧಿ ಯೋಜನೆ" ಬಗ್ಗೆ ಸಭ**

## ವಿಶ್ವ ಮಣ್ಣು ಆರೋಗ್ಯ ದಿನಾಚರಣೆ

ಹನುಮನಮಟ್ಟಿಯಲ್ಲಿ ದಿನಾಂಕ: 05.12.2017 ರಂದು ಕೃಷಿ ವಿಜ್ಞಾನ ಕೇಂದ್ರ, ಕೃಷಿ ಮಹಾವಿದ್ಯಾಲಯ ಹನುಮನಮಟ್ಟಿ ಹಾಗೂ ಕೃಷಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ **"ವಿಶ್ವ ಮಣ್ಣು ದಿನಾಚರಣೆ"** ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಬಗ್ಗೆ ಪ್ರಾಸ್ತಾವಿಕವಾಗಿ ಡಾ. ಸಿ ಪಿ ಮನ್ಸೂರ, ಡೀನ್ (ಕೃಷಿ), ಕೃಷಿ ಮಹಾವಿದ್ಯಾಲಯ, ಹನುಮನಮಟ್ಟಿ ಇವರು ಮಾತನಾಡಿ ಮಣ್ಣಿನ ಫಲವತ್ತತೆಯನ್ನು ಕಾಪಾಡಲು ಹೆಚ್ಚಿನ ಸಾವಯವ ಗೊಬ್ಬರಗಳನ್ನು ಬಳಸಲು ತಿಳಿಸಿದರು. ಡಾ. ಮಲ್ಲಣ್ಣ ನಾಗರಾಳ, ಕೃಷಿ ವಿಶ್ವವಿದ್ಯಾಲಯ ಧಾರವಾಡದಿಂದ ಗೌರವ ಡಾಕ್ಟರೇಟ್ ಪುರಸ್ಕೃತರು ಬಾಗಲಕೋಟೆ ಇವರು ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿ ಮಣ್ಣಿನ ಫಲವತ್ತತೆ, ಸಂರಕ್ಷಣೆ ಮತ್ತು ಮಹತ್ವದ ಬಗ್ಗೆ ಸವಿಸ್ತಾರವಾಗಿ ರೈತರಿಗೆ ಮಾಹಿತಿ ನೀಡಿದರು. ನೀರು ಮತ್ತು ಮಣ್ಣು ಸಂರಕ್ಷಣೆ ಬಗ್ಗೆ ಸುದೀರ್ಘವಾಗಿ ಚರ್ಚಿಸಿ ಇತ್ತೀಚಿನ ಯುವಕರು ಕೃಷಿ ಕಡೆಗೆ ಗಮನ ಹರಿಸಬೇಕು ಮತ್ತು ಮಣ್ಣಿನ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಹಾಗೂ ವಿಜ್ಞಾನಿಗಳ ಜೊತೆಗೆ ಅನುಭವವನ್ನು ಹಂಚಿಕೊಂಡು ಕೃಷಿಯಲ್ಲಿ ತೊಡಗಿದರೆ ಕೃಷಿ ಒಂದು ಲಾಭದಾಯಕ ಚಟುವಟಿಕೆಯಾಗಿ ಮತ್ತು ಮನುಷ್ಯರ ಮತ್ತು ಪ್ರಾಣಿ, ಪಕ್ಷಿಗಳ ಆರೋಗ್ಯವನ್ನು ಕಾಪಾಡಲು ಸಹಾಯವಾಗುತ್ತದೆ. ಆದ್ದರಿಂದ ಮಣ್ಣನ್ನು ಉಳಿಸಿ ಮಣ್ಣಿನಿಂದಲೆ ಅನ್ನ, ಮಣ್ಣಿನಿಂದಲೆ ಚಿನ್ನ, ಮಣ್ಣಿನಿಂದಲೆ ಆರೋಗ್ಯ, ಎಂದು ಈ ಕಾರ್ಯಕ್ರಮಕ್ಕೆ ಹಾಜರಾದ ಸರ್ವರಿಗೂ ಕರೆನೀಡಿದರು. ಶ್ರೀಮತಿ ಮಂಗಳಾಗೌರಿ ಅರುಣ ಕುಮಾರ, ಜಿಲ್ಲಾ ಪಂಚಾಯತ ಸದಸ್ಯರು ಹಾವೇರಿ, ಇವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ, ಕೃಷಿ ಇಲಾಖೆ ಮತ್ತು ಕೃಷಿ ವಿಜ್ಞಾನ ಕೇಂದ್ರಗಳಿಗೆ ಭೇಟಿ ನೀಡುವ ರೈತರಿಗೆ ಕೃಷಿ ಮತ್ತು ಇತರೆ ಚಟುವಟಿಕೆಗಳ ಬಗ್ಗೆ ಹೆಚ್ಚಿನ ಮಾಹಿತಿ ನೀಡಿ ಅವರ ಜೀವನ ಶೈಲಿಯನ್ನು ಬದಲಾಯಿಸುವ ದಿಸೆಯಲ್ಲಿ ಸೇವೆ ನೀಡಬೇಕು ಎಂದು ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ ಕೃಷಿ ಇಲಾಖೆ ರಾಣೇಬೆನ್ನೂರಿನ ಉಪ ಕೃಷಿ ನಿರ್ದೇಶಕರಾದ ಶ್ರೀ ಮಂಜುನಾಥ ಅಂತರವಳ್ಳಿ ಮತ್ತು ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯದ ಮಣ್ಣು ವಿಜ್ಞಾನಿಯಾದ ಡಾ. ಎಸ್ ಎಮ್ ಪ್ರಸನ್ನ, ಇವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಣ್ಣು ಮತ್ತು ನೀರಿನ ಬಗ್ಗೆ ತಾಂತ್ರಿಕ ಮಾಹಿತಿ ನೀಡಿದರು. ಶ್ರೀಮತಿ ಗದಿಗೆವ್ವ ಗುಂಡಪ್ಪ ದೇಸಾಯಿ, ಜಿಲ್ಲಾ ಪಂಚಾಯತ ಸದಸ್ಯರು ಹಾವೇರಿ ಮತ್ತು ರಾಣೇಬೆನ್ನೂರ ತಾಲ್ಲೂಕು ಪಂಚಾಯತ ಸದಸ್ಯರಾದ ಶ್ರೀ ಭರಮಪ್ಪ ಉರ್ಮಿ ಇವರು ಕೂಡ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರದ ಎಲ್ಲಾ ವಿಜ್ಞಾನಿಗಳು, ಕೃಷಿ ಸಂಶೋಧನಾ ಕೇಂದ್ರದ ವಿಜ್ಞಾನಿಗಳು ಹಾಗೂ ಕೃಷಿ ಮಹಾವಿದ್ಯಾಲಯದ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಖರ್ಧ ವೀರಾಪುರ ಗ್ರಾಮದ ರೈತ ಮತ್ತು ರೈತ ಮಹಿಳೆಯರು ಪಾಲ್ಗೊಂಡಿದ್ದರು. ಒಟ್ಟಾರೆಯಾಗಿ ಸುಮಾರು 562 ರೈತ ಮತ್ತು ರೈತ ಮಹಿಳೆಯರು ಭಾಗವಹಿಸಿ ಈ ಕಾರ್ಯಕ್ರಮದ ಸದುಪಯೋಗವನ್ನು ಪಡೆದುಕೊಂಡರು. ಕಾರ್ಯಕ್ರಮದ ನಂತರ ಕೃಷಿ ಮಹಾವಿದ್ಯಾಲಯ

ಹನುಮನಮಟ್ಟಿಯಲ್ಲಿ ತೃಣಧಾನ್ಯ+ದ್ವಿದಳಧಾನ್ಯ (4:1) ಅಂತರ ಬೆಳೆಯ ಕ್ಷೇತ್ರೋತ್ಸವವನ್ನು ಸಹ ಏರ್ಪಡಿಸಲಾಗಿತ್ತು ಹಾಗೂ ಮಣ್ಣು ಆರೋಗ್ಯ ಚೀಟಿಯನ್ನು 25 ರೈತ/ರೈತ ಮಹಿಳೆಯರಿಗೆ ವಿತರಿಸಲಾಯಿತು.



**ಖುರ್ದವೀರಾಪುರ ಗ್ರಾಮದಲ್ಲಿ "ವಿಶ್ವ ಮಣ್ಣು ದಿನಾಚರಣೆ"**



**ಖುರ್ದವೀರಾಪುರ ಗ್ರಾಮದ ರೈತರಿಗೆ ಮಣ್ಣು ಆರೋಗ್ಯ ಚೀಟಿ ವಿತರಣೆ**




**ಖುರ್ಧವೀರಾಪುರ ಗ್ರಾಮದ ರೈತರಿಗೆ ಮಣ್ಣು ಆರೋಗ್ಯ ಚೀಟಿ ವಿತರಣೆ**

## ರೈತ ದಿನಾಚರಣೆ

ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನ ಖುರ್ಧವೀರಾಪುರ ಗ್ರಾಮದಲ್ಲಿ ಹನುಮನಮಟ್ಟಿಯ ಕೃಷಿ ವಿಜ್ಞಾನ ಕೇಂದ್ರದಿಂದ **"ರೈತ ದಿನಾಚರಣೆ"**ಯನ್ನು 23.12.2017 ರಂದು ಆಚರಿಸಲಾಯಿತು. ಈ ಕಾರ್ಯಕ್ರಮವನ್ನು ಕೃಷಿ ಪಂಡಿತ ಮತ್ತು ಜಿಲ್ಲಾ ಮಟ್ಟದ ಶ್ರೇಷ್ಠ ಕೃಷಿಕ ಪ್ರಶಸ್ತಿ ವಿಜೇತರಾದ ಶ್ರೀ ಹೇಮಣ್ಣ ಬಾರಂಗಿ, ಹಿರೇಅಣಜಿ, ಬ್ಯಾಡಗಿ ತಾಲ್ಲೂಕು ಇವರು ಉದ್ಘಾಟನೆಯನ್ನು ಮಾಡಿ, ತಮ್ಮ ಉದ್ಘಾಟನಾ ಭಾಷಣದಲ್ಲಿ ರೈತರು ಸಮಗ್ರ ಕೃಷಿ ಪದ್ಧತಿಯನ್ನು ಅನುಸರಿಸಿ ಕಡಿಮೆ ಖರ್ಚಿನಲ್ಲಿ ಹೆಚ್ಚಿನ ಲಾಭವನ್ನು ಪಡೆದುಕೊಳ್ಳಬೇಕೆಂದು ರೈತರಿಗೆ ಕರೆ ನೀಡಿದರು. ಇವರು ತಮ್ಮ 10 ಗುಂಟೆಯ ಕ್ಷೇತ್ರದಲ್ಲಿ ತೆಂಗು, ನುಗ್ಗೆ, ತೊಂಡೆಕಾಯಿ, ತರಕಾರಿ ಬೆಳೆಗಳು, ಗುಲಾಬಿ ಮತ್ತು ನಿಂಬೆ ಸಸಿಯ ಕಸಿ ಕಟ್ಟುವುದು, ಮೀನು ಸಾಕಾಣಿಕೆ, ಜೇನು ಸಾಕಾಣಿಕೆ, ಎರೆಹುಳು ಗೊಬ್ಬರ ಮತ್ತು ಎರೆ ಜಲ ತಯಾರಿಕೆ, ಹೈನುಗಾರಿಕೆ ಮತ್ತು ಅನಿಲ ಘಟಕವನ್ನು ಹೊಂದಿದ್ದಾರೆ. ಈ ರೀತಿಯಾಗಿ ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕೆಂದು ಇತರೆ ರೈತರಿಗೆ ಅರಿವು ಮೂಡಿಸಿದರು. ಕೃಷಿ ವಿಜ್ಞಾನ ಕೇಂದ್ರದ ಬೇಸಾಯ ತಜ್ಞರಾದ ಡಾ. ಪ್ರಿಯ ಪಿ. ರವರು ಮಾತನಾಡಿ ವೈಜ್ಞಾನಿಕವಾಗಿ ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸುವುದರಿಂದ ಕಡಿಮೆ ಖರ್ಚಿನಲ್ಲಿ ಹೆಚ್ಚಿನ ಲಾಭ ಪಡೆಯಬಹುದೆಂದು ರೈತರಿಗೆ ತಿಳಿಸಿಕೊಟ್ಟರು. ಕೃಷಿ ವಿಜ್ಞಾನ ಕೇಂದ್ರದ, ತೋಟಗಾರಿಕಾ ತಜ್ಞರಾದ ಶ್ರೀ. ಹರೀಶ ಡಿ ಕೆ. ಇವರು ತಮ್ಮ ಭಾಷಣದಲ್ಲಿ ಸಮಗ್ರ ಕೃಷಿ ಪದ್ಧತಿಯಲ್ಲಿ ತೋಟಗಾರಿಕೆ ಬೆಳೆಗಳ ಮಹತ್ವವನ್ನು ತಿಳಿಸಿಕೊಟ್ಟರು. ರೈತರು ತಮ್ಮ ಜಮೀನಿನಲ್ಲಿ ತರಕಾರಿ ಬೆಳೆಗಳು, ಹಣ್ಣಿನ ಬೆಳೆಗಳು ಹಾಗೂ ತೋಟದ ಬೆಳೆಗಳನ್ನು ಬೆಳೆಯುವುದರಿಂದ ರೈತರು ತಮ್ಮ ಕುಟುಂಬದ ಪೌಷ್ಠಿಕ ಭದ್ರತೆಯನ್ನು ಕಾಪಾಡಿಕೊಳ್ಳಬಹುದೆಂದು ಮಾಹಿತಿ ನೀಡಿದರು.ಕೃಷಿ ವಿಜ್ಞಾನ ಕೇಂದ್ರದ, ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರಾದ ಡಾ. ಗುರುಪ್ರಸಾದ ಜಿ ಎಸ್, ಇವರು ಅಧ್ಯಕ್ಷೀಯ ಭಾಷಣ ಮಾಡಿದರು. ಇವರು ತಮ್ಮ ಭಾಷಣದಲ್ಲಿ ಸಮಗ್ರ ಪೀಡೆ ನಿರ್ವಹಣೆಯ ಕ್ರಮಗಳ ಬಗ್ಗೆ ರೈತರಿಗೆ ಮನದಟ್ಟು ಮಾಡಿಕೊಟ್ಟರು. ಮುಂದುವರೆದು ಕೀಟನಾಶಕಗಳ ದುಷ್ಪರಿಣಾಮದ ಬಗ್ಗೆ ವಿವರಿಸುತ್ತಾ ಕೀಟನಾಶಕಗಳ ಸದ್ಬಳಕೆ ಮಾಡಿಕೊಳ್ಳಲು ತಿಳಿ ಹೇಳಿದರು. ಈ ಕಾರ್ಯಕ್ರಮದಲ್ಲಿ ಖುರ್ಧವೀರಾಪುರ ಗ್ರಾಮದ ಗ್ರಾಮಪಂಚಾಯಿತಿ ಸದ್ಯಸರಾದ ಶ್ರೀ ಸಿದ್ಧಲಿಂಗಪ್ಪ ಬ ಗುರೇಮಟ್ಟಿ ಮತ್ತು ಹಿರಿಯ ರೈತರಾದ ಬಸವರಾಜಪ್ಪ ನಾಗಪ್ಪ ಕಾಕೋಳ, ಇವರು ಉಪಸ್ಥಿತರಿದ್ದರು. ಈ ಕಾರ್ಯಾಕ್ರಮದಲ್ಲಿ ಸುಮಾರು 91 ಜನ ರೈತ ಹಾಗೂ ರೈತ ಮಹಿಳೆಯರು ಭಾಗವಹಿಸಿದ್ದರು.



**"ರೈತ ದಿನಾಚರಣೆ"**

## ಪ್ರಗತಿಪರ ರೈತರ ತಾಂತ್ರಿಕ ಆವಿಷ್ಕಾರಗಳನ್ನು ತರಬೇತಿಗಳ ಮುಖಾಂತರ ಇತರೆ ರೈತರಿಗೆ ತಲುಪಿಸುವ ಯೋಜನೆ

ರಾಣೇಬೆನ್ನೂರ ತಾಲ್ಲೂಕಿನ ಹನುಮನಮಟ್ಟಿಯ ಕೃಷಿ ವಿಜ್ಞಾನ ಕೇಂದ್ರದಲ್ಲಿ ಪ್ರಗತಿಪರ ರೈತರ ತಾಂತ್ರಿಕ ಆವಿಷ್ಕಾರಗಳನ್ನು ತರಬೇತಿಯ ಮುಖಾಂತರ ಇತರೆ ರೈತರಿಗೆ ತಲುಪಿಸುವ ತರಬೇತಿ ಕಾರ್ಯಕ್ರಮವನ್ನು ದಿನಾಂಕ: 27.12.2017 ರಂದು ಉದ್ಘಾಟಿಸಲಾಯಿತು. ದಿನಾಂಕ: 27.12.2017 ರಿಂದ 29.12.2017 ರ ವರೆಗೆ ಏರ್ಪಡಿಸಲಾದ ಈ ತರಬೇತಿ ಕಾರ್ಯಕ್ರಮ ಮೂರು ದಿನಗಳದ್ದಾಗಿದ್ದು, ಪ್ರಗತಿಪರ ಪ್ರಶಸ್ತಿ ವಿಜೇತ ರೈತರಿಂದ ಇತರೆ ರೈತರಿಗೆ ಕೃಷಿಯ ಕುರಿತು ತಂತ್ರಜ್ಞಾನ ವರ್ಗಾವಣೆ ಮಾಡುವದು ಇದರ ಉದ್ದೇಶವಾಗಿದೆ. ಕಾರ್ಯಕ್ರಮವನ್ನು ಡಾ. ವಿ. ಎಸ್. ಪಾಟೀಲ್, ಪ್ರಾಂಶುಪಾಲರು (ಡಿಪ್ಲೋಮಾ) ಕೃಷಿ ಮಹಾವಿದ್ಯಾಲಯ, ಹನುಮನಮಟ್ಟಿ ಇವರು ಉದ್ಘಾಟಿಸಿ ರೈತರು ತಮ್ಮ ಜಮೀನಿನಲ್ಲಿ ವೈಜ್ಞಾನಿಕವಾಗಿ ಹೇಗೆ ಕೃಷಿಯನ್ನು ಅಳವಡಿಸಿಕೊಳ್ಳಬೇಕೆಂದು ತಿಳಿಸಿಕೊಟ್ಟರು. ಜೊತೆಗೆ ತರಬೇತಿಗೆ ಹಾಜರಾದ ಇತರ ರೈತರಿಂದ ಕೃಷಿಗೆ ಸಂಬಂಧಿಸಿದ ಇತರೆ ವಿಚಾರಗಳನ್ನು ಪರಸ್ಪರ ಚರ್ಚಿಸಿ ತಮ್ಮ ಜ್ಞಾನ ಹೆಚ್ಚಿಸಿಕೊಳ್ಳಬೇಕೆಂದು ಕರೆ ನೀಡಿದರು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಚನ್ನಬಸಪ್ಪ ಕೋಂಬಳಿ, ಪ್ರಗತಿಪರ ರೈತರು, ಕಾಕೋಳ, ಶ್ರೀಮತಿ ಸುನಿತಾ ಶಂ ಗಂಗನಗೌಡ್ರ, ಪ್ರಗತಿಪರ ರೈತ ಮಹಿಳೆ, ಮುದೇನೂರ, ಶ್ರೀಮತಿ ಮಾದೇವಕ್ಕ ಲಿಂಗದಹಳ್ಳಿ, ಪ್ರಗತಿಪರ ರೈತ ಮಹಿಳೆ, ಕೆರವಡಿ, ಹಾಗೂ ಶ್ರೀಮತಿ ನೀಲವ್ವ ಅಂತರವಳ್ಳಿ, ಪ್ರಗತಿಪರ ರೈತ ಮಹಿಳೆ, ಮೆಡ್ಲೇರಿ ಇವರುಗಳು ಆಗಮಿಸಿ ತಮ್ಮ ಕೃಷಿ ಅನುಭವಗಳನ್ನು ಹಂಚಿಕೊಂಡರು. ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರಾದ ಡಾ. ಗುರುಪ್ರಾಸಾದ್ ಜಿ. ಎಸ್ ಇವರು ಅಧ್ಯಕ್ಷತೆ ವಹಿಸಿದ್ದರು, ಡಾ. ಪ್ರಿಯ ಪಿ ವಿಜ್ಞಾನಿ (ಬೇಸಾಯ ಶಾಸ್ತ್ರ) ಇವರು ಈ ಕಾರ್ಯಕ್ರಮವನ್ನು ನಿರೂಪಿಸಿದರು. ಈ ತರಬೇತಿ ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರದ ಎಲ್ಲಾ ವಿಜ್ಞಾನಿಗಳು ಹಾಗೂ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು. ಈ ತರಬೇತಿ ಕಾರ್ಯಕ್ರಮಕ್ಕೆ ಖುರ್ಧವೀರಾಪುರ ಗ್ರಾಮದ ರೈತರು ಆಗಮಿಸಿ ಕಾರ್ಯಕ್ರಮದ ಸದುಪಯೋಗವನ್ನು ಪಡೆದುಕೊಂಡರು.



**ಪ್ರಗತಿಪರ ರೈತರ ತಾಂತ್ರಿಕ ಆವಿಷ್ಕಾರಗಳನ್ನು ಇತರೆ ರೈತರೊಂದಿಗೆ ಚರ್ಚೆ**

## ರೈತರ ಆದಾಯ ಹಾಗೂ ಕಲ್ಯಾಣ ವೃದ್ಧಿ ಯೋಜನೆಯ ಪ್ರಗತಿ ಪರಿಶೀಲನಾ ಸಭೆ

ದಿನಾಂಕ 05.01.2018 ರಂದು ಕರ್ನಾಟಕ ಕೃಷಿ ಬೆಲೆ ಅಯೋಗ ಬೆಂಗಳೂರು ಇವರ ಪ್ರಾಯೋಜಿತ ಯೋಜನೆಯಾದ "ರೈತರ ಆದಾಯ ಹಾಗೂ ಕಲ್ಯಾಣ ವೃದ್ದಿ ಯೋಜನೆ" ಪ್ರಗತಿ ಪರಿಶೀಲನೆ ಕುರಿತು ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯಲ್ಲಿ ಸಭೆಯನ್ನು ಆಯೋಜಿಸಲಾಗಿತ್ತು. ಈ ಸಭೆಯಲ್ಲಿ ಡಾ. ಟಿ. ಎನ್. ಪ್ರಕಾಶ್ ಕಮ್ಮರಡಿ, ಅಧ್ಯಕ್ಷರು, ಕರ್ನಾಟಕ ಕೃಷಿ ಬೆಲೆ ಆಯೋಗ ಬೆಂಗಳೂರು, ಇವರು ರೈತರ ಆಧಾಯವನ್ನು ಹೆಚ್ಚಿಸುವ ಹಾಗೂ ಸಮಗ್ರ ಕೃಷಿ ಪದ್ಧತಿಯ ಅಳವಡಿಕೆಯ ಮಹತ್ವವನ್ನು ಕುರಿತು ರೈತರೊಂದಿಗೆ ಚರ್ಚಿಸಿ ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡಲ್ಲಿ ಉತ್ತಮ ಲಾಭ ಪಡೆಯಬಹುದೆಂದು ತಿಳಿಸಿದರು ಹಾಗೂ ಬೇರೆ ಬೇರೆ ಇಲಾಖೆಯ ಆಧಿಕಾರಿಗಳು ತಮ್ಮ ಇಲಾಖೆಯಲ್ಲಿ ಲಭ್ಯವಿರುವ ಸೌಲಭ್ಯಗಳು ಹಾಗೂ ಅವುಗಳ ಬಗ್ಗೆ ಮಾಹಿತಿಯನ್ನು ರೈತರೊಂದಿಗೆ ಹಂಚಿಕೊಳ್ಳಲು ಸಲಹೆ ನೀಡಿದರು. ಈ ಕಾರ್ಯಕ್ರಮದಲ್ಲಿ ಲೋಕೇಶ್ ಪಿ. ಎನ್. ಅಸಿಸ್ಟಂಟ್ ಕಮಿಷನರ್, ಹಾವೇರಿ, ಹೆಚ್ ವೈ ಮೀಶಿ, ಸಿ.ಪಿ.ಓ ಪ್ರ. ಜಿಲ್ಲಾ ಪಂಚಾಯತ್ ಹಾವೇರಿ. ರಾಜಶೇಖರ್ ಬಿಜಾಪುರ್, ಜಂಟಿ ಕೃಷಿ ನಿರ್ದೇಶಕರು, ಹಾವೇರಿ, ಎಸ್. ಪಿ. ಭೋಗಿ, ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ ಹಾವೇರಿ, ಗುರುಪ್ರಸಾದ್ ಜಿ. ಎಸ್. ಮುಖ್ಯಸ್ಥರು ಹಾಗೂ ಹಿರಿಯ ವಿಜ್ಞಾನಿ ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ, ಎಸ್ ಎಸ್ ಅವಟಿ, ತಾಂತ್ರಿಕ ಸಲಹೆಗಾರರು ಕರ್ನಾಟಕ ಕೃಷಿ ಬೆಲೆ ಆಯೋಗ ಬೆಂಗಳೂರು ಮತ್ತು ರೇಷ್ಮೆ, ಪಶು ಹಾಗೂ ಇತರೆ ಇಲಾಖೆಯ ಅಧಿಕಾರಿಗಳು ಹಾಗೂ ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ ಸಿಬ್ಬಂದಿ ವರ್ಗದವರು ಸೇರಿದಂತೆ ಈ ಯೋಜನೆಯ ಮಾದರಿ ಗ್ರಾಮವಾದ ಖುರ್ದವೀರಾಪುರ ಗ್ರಾಮದ ರೈತರು ಸಹ ಪಾಲ್ಗೊಂಡಿದ್ದರು. ಸಭೆಯ ನಂತರ ಡಾ. ಟಿ. ಎನ್. ಪ್ರಕಾಶ್ ಕಮ್ಮರಡಿ, ಗುರುಪ್ರಸಾದ್ ಜಿ. ಎಸ್. ಮತ್ತು ಪರಿಶ್ರಮ ಪ್ಲಾಂಟೇಶನ್ಸ್ ಸಂಸ್ಥೆಯ ಪ್ರತಿನಿಧಿಯಾದ ಭರತ್ ಎ. ಜಿ, ವಿಜಯಲಕ್ಷ್ಮಿ ಹಿರಿಯ ತೋಟಗಾರಿಕೆ ನಿರ್ದೇಶಕಿ, ಡಾ. ಬಿ. ಆರ್ ಲಮಾಣಿ, ತಾಲೂಕಾ ಆರೋಗ್ಯ ಅಧಿಕಾರಿಗಳು ಮತ್ತು

ಎಸ್. ಎಸ್ ಅವಟಿ, ಇವರುಗಳು ಖುರ್ಧ ವೀರಾಪುರ ಗ್ರಾಮಕ್ಕೆ ಭೇಟಿ ನೀಡಿ ರೈತರೊಂದಿಗೆ ಸಂವಾದ ನಡೆಸಿದರು ಹಾಗೂ ಭರತ್ ಎ. ಜಿ. ಇವರು ಹೆಬ್ಬೇವಿನ ಮಹತ್ವದ ಬಗ್ಗೆ ಅರಿವು ಮೂಡಿಸಿದರು. ನಂತರ ಡಾ. ಟಿ. ಎನ್. ಪ್ರಕಾಶ್ ಕಮ್ಮರಡಿರವರು ರೈತರೊಂದಿಗೆ ಚರ್ಚಿಸಿ ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸುವುದರೊಂದಿಗೆ ಹೆಬ್ಬೇವನ್ನು ಹೊಲದ ಸುತ್ತಲು ನೆಡುವುದರಿಂದ ರೈತರ ಆಧಾಯವನ್ನು ಹೆಚ್ಚಿಸಬಹುದೆಂದು ಸವಿಸ್ತಾರವಾಗಿ ತಿಳಿಸಿದರು. ಗ್ರಾಮದ ಸುಮಾರು 25 ರೈತ / ರೈತಮಹಿಳೆಯರು ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.



ಸಮಗ್ರ ಕೃಷಿ ಪದ್ಧತಿಯ ಅಳವಡಿಕೆಯ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚೆ



**ಖುರ್ಧ ವೀರಾಪುರ ಗ್ರಾಮಕ್ಕೆ ಭೇಟಿ ಹಾಗೂ ಸಮಗ್ರ ಕೃಷಿ ಪದ್ಧತಿಯ ಅಳವಡಿಕೆಯ ಬಗ್ಗೆ ರೈತರೊಂದಿಗೆ ಚರ್ಚೆ.**

- ಖುರ್ಧ ವೀಪುರ ಗ್ರಾಮದ ಆಸಕ್ತ ರೈತರಿಗೆ ಹೆಬ್ಬೇವನ್ನು ಕೊಡಿಸುವ ಬಗ್ಗೆ ಪರಿಶ್ರಮ ಪ್ಲಾಂಟೇಶನ್ಸ ಸಂಸ್ಥೆಯೊಂದಿಗೆ ಚರ್ಚಿಸಿ ಮಾಹಿತಿ ಸಂಗ್ರಹಿಸಲಾಗಿದೆ.
- ಗ್ರಾಮದ ಆಸಕ್ತ ರೈತರಿಗೆ ಕೃಷಿ ಇಲಾಖೆಯಿಂದ ಕೃಷಿ ಹೊಂಡ ಹಾಗೂ ಎರೆಗೊಬ್ಬರ ಘಟಕವನ್ನು ಕೊಡಿಸಲು ಫಲಾನುಭವಿಗಳ ಹೆಸರನ್ನು ಪಟ್ಟಿ ಮಾಡಲಾಗಿದೆ.

## ವ್ಯಕ್ತಿತ್ವ ವಿಕಸನ ಶಿಬಿರ– ಮಣಿಪಾಲ್

ಮಣಿಪಾಲದ ಕಸ್ತೂರಬಾ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ದಿನಾಂಕ 29.01.2018–31.01.2018 ರಂದು ರೈತರ ವ್ಯಕ್ತಿತ್ವ ವಿಕಸನ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಈ ಶಿಬಿರದಲ್ಲಿ ಖುರ್ಧ ವೀರಾಪುರ ಗ್ರಾಮದ 25 ರೈತ ಹಾಗೂ ರೈತ ಮಹಿಳೆಯರು ಪಾಲ್ಗೊಂಡು ಶಿಬಿರದ ಸದುಪಯೋಗವನ್ನು ಪಡೆದುಕೊಂಡರು




ಮಣಿಪಾಲದ ಕಸ್ತೂರಬಾ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ವ್ಯಕ್ತಿತ್ವ ವಿಕಸನ ಶಿಬಿರ

## ಗ್ರಾಮ ಸಭೆ

ದಿನಾಂಕ 09.02.18 ರಂದು ಖುರ್ಧ ವೀರಾಪುರ ಗ್ರಾಮದಲ್ಲಿ ರೈತರ ಆಧಾಯ ಮತ್ತು ಕಲ್ಯಾಣವೃದ್ಧಿ ಯೋಜನೆಯಡಿಯಲ್ಲಿ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು. ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರಾದ ಡಾ. ಅಶೋಕ ಪಿ. ಹಾಗೂ ಪಶು ವಿಜ್ಞಾನಿಯಾದ ಡಾ. ವೆಂಕಣ್ಣ ಬಳಗಾನೂರ ರವರು ಪಾಲ್ಗೊಂಡಿದ್ದರು. ಈ ಸಭೆಯಲ್ಲಿ ಹೆಬ್ಬೇವಿನ ಮಹತ್ವದ ಬಗ್ಗೆ ಚರ್ಚಿಸಿ, ನಂತರ KMC ಮಣಿಪಾಲದಲ್ಲಿ ನಡೆದ ರೈತರ ವ್ಯಕ್ತಿತ್ವ ವಿಕಸನ ಶಿಬಿರದ ಬಗ್ಗೆ ಹಾಗೂ ಆರೋಗ್ಯ ಸುರಕ್ಷಾ ಇನ್ಶುರನ್ಸ್ ಮತ್ತು ಮೂಲಭೂತ ಸೌಕರ್ಯ, ನೈರ್ಮಲ್ಯ ಮತ್ತು ಸಾಮಾಜಿಕ ಸಮಸ್ಯೆಗಳ ಕುರಿತು ಸಮೀಕ್ಷೆ ಹಾಗೂ ಕೃಷಿಯಲ್ಲಿ ಮುನ್ನೆಡೆಯುವ ಕುರಿತು ರೈತರ ಹಾಗೂ ರೈತ ಮಹಿಳೆಯರ ಮನೋಭಾವ ಮತ್ತು ತಂತ್ರಜ್ಞಾನಗಳ ಅರಿವಿನ ಬಗ್ಗೆ ಸಮೀಕ್ಷೆಯನ್ನು ಮಾಡುವ ಬಗ್ಗೆ ತಿಳಿಸಲಾಯಿತು.



## ಮೂಲಭೂತ ಸೌಕರ್ಯ, ನೈರ್ಮಲ್ಯ ಮತ್ತು ಸಾಮಾಜಿಕ ಸಮಸ್ಯೆಗಳ ಕುರಿತು ಸಮೀಕ್ಷೆ

We care society NGO ದ ಪ್ರತಿನಿಧಿಯಾದ ಉಮಾಪತಿ ರವರು ದಿನಾಂಕ 13.02.18 ರಂದು ಖರ್ಧ ವೀರಾಪುರ ಗ್ರಾಮಕ್ಕೆ ಬೇಟಿ ನೀಡಿ ಸಮೀಕ್ಷೆಯ ಕುರಿತು ರೈತರೊಂದಿಗೆ ಚರ್ಚಿಸಿ, ಸಮೀಕ್ಷೆಯನ್ನು ಮಾಡಲಾಯಿತು.



**ಮೂಲಭೂತ ಸೌಕರ್ಯ, ನೈರ್ಮಲ್ಯ ಮತ್ತು ಸಾಮಾಜಿಕ ಸಮಸ್ಯೆಗಳ ಕುರಿತು ಸಮೀಕ್ಷೆ**



ಮೂಲಭೂತ ಸೌಕರ್ಯ, ನೈರ್ಮಲ್ಯ ಮತ್ತು ಸಾಮಾಜಿಕ ಸಮಸ್ಯೆಗಳ ಕುರಿತು ಸಮೀಕ್ಷೆ

**ಸರ್ಕಾರದ ಯೋಜನೆಗಳ ಮತ್ತು ತಂತ್ರಜ್ಞಾನಗಳ ಬಗ್ಗೆ ರೈತರಲ್ಲಿ ಅರಿವು ಮತ್ತು ಅಳವಡಿಕೆ ಹಾಗೂ ಕೃಷಿಯಲ್ಲಿ ಮುಂದುವರೆಯುವ ಕುರಿತು ಗ್ರಾಮೀಣ ಯುವಕರ ಮತ್ತು ರೈತ ಮಹಿಳೆಯರ ಎಲ್ಲೆಗೆರೆ ಸಮೀಕ್ಷೆ**



ಸರ್ಕಾರದ ಯೋಜನೆಗಳ ಮತ್ತು ತಂತ್ರಜ್ಞಾನಗಳ ಬಗ್ಗೆ ರೈತರಲ್ಲಿ ಅರಿವು ಮತ್ತು ಅಳವಡಿಕೆ



**ಕೃಷಿಯಲ್ಲಿ ಮುಂದುವರೆಯುವ ಕುರಿತು ಗ್ರಾಮೀಣ ಯುವಕರ ಮತ್ತು ರೈತ ಮಹಿಳೆಯರ ಎಲ್ಲೆಗೆರೆ ಸಮೀಕ್ಷೆ**



**ಆರೋಗ್ಯ ಸುರಕ್ಷಾ ಇನ್ಸುರನ್ಸ್‌ಗಾಗಿ ಅರ್ಜಿಗಳನ್ನು ಹಾಕುತ್ತಿರುವುದು**

ಸರ್ಕಾರದ ಯೋಜನೆಗಳ ಮತ್ತು ತಂತ್ರಜ್ಞಾನಗಳ ಬಗ್ಗೆ ರೈತರಲ್ಲಿ ಅರಿವು ಮತ್ತು ಅಳವಡಿಕೆ ಹಾಗೂ ಕೃಷಿಯಲ್ಲಿ ಮುಂದುವರೆಯುವ ಕುರಿತು ಗ್ರಾಮೀಣ ಯುವಕರ ಮತ್ತು ರೈತ ಮಹಿಳೆಯರ ಎಲ್ಲೆಗೆರೆ ಸಮೀಕ್ಷೆಯನ್ನು ಮಾಡಲಾಯಿತು. ಹಾಗೂ ಕಸ್ತೂರಬಾ ವೈದ್ಯಕೀಯ ಮಹಾವಿದ್ಯಾಲಯ ಮಣಿಪಾಲ್ ಹಾಗೂ ಕರ್ನಾಟಕ ಕೃಷಿ ಬೆಲೆ ಆಯೋಗದ ಸಹಭಾಗಿತ್ವದಲ್ಲಿ ಬ್ಯಾಡಗಿ ತಾಲೂಕಿನ ಖುರ್ಧ ವೀರಾಪುರ ಗ್ರಾಮದ 25 ರೈತರಿಗೆ **ಆರೋಗ್ಯ ಸುರಕ್ಷಾ ಇನ್ಸುರನ್ಸ್‌ಗಾಗಿ** ಅರ್ಜಿಗಳನ್ನು ಹಾಕಿಸಲು ಮಾಹಿತಿಯನ್ನು ನೊಂದಾಯಿಸಿಕೊಳ್ಳಲಾಯಿತು.




ಆರೋಗ್ಯ ಸುರಕ್ಷಾ ಇನ್ಶ್ಯುರನ್ಸ್‌ಗಾಗಿ ಅರ್ಜಿಗಳನ್ನು ಹಾಕಿಸಲು ಮಾಹಿತಿಯನ್ನು ನೊಂದಾಯಿಸಿಕೊಳ್ಳಲಾಯಿತು.




ಕಸ್ತೂರಬಾ ವೈದ್ಯಕೀಯ ಮಹಾವಿದ್ಯಾಲಯ ಮಣಿಪಾಲದಲ್ಲಿ ನಡೆದ 3 ದಿನಗಳ ರೈತರ ವ್ಯಕ್ತಿತ್ವ ವಿಕಸನ ಶಿಬಿರದಲ್ಲಿ ಪಾಲ್ಗೊಂಡ ರೈತ/ ರೈತ ಮಹಿಳೆಯರಿಗೆ ಗೌರವ ಭತ್ಯೆಯನ್ನು ನೀಡಲಾಯಿತು



## ಕಸ್ತೂರಬಾ ವೈದ್ಯಕೀಯ ಮಹಾವಿದ್ಯಾಲಯ ಮಣಿಪಾಲದಲ್ಲಿ ನಡೆದ 3 ದಿನಗಳ ರೈತರ ವ್ಯಕ್ತಿತ್ವ ವಿಕಸನ ಶಿಬಿರದಲ್ಲಿ ಪಾಲ್ಗೊಂಡ ರೈತ/ ರೈತ ಮಹಿಳೆಯರಿಗೆ ಗೌರವ ಭತ್ಯೆಯನ್ನು ನೀಡಲಾಯಿತು

### ರಾಜ್ಯ ಮಟ್ಟದ ರೈತರ ಕಾರ್ಯಗಾರ

ದಿನಾಂಕ 02.03.2018 ರಿಂದ 03.03.2018 ರವರೆಗೆ ಕರ್ನಾಟಕ ಕೃಷಿ ಬೆಲೆ ವತಿಯಿಂದ ಕೇಂದ್ರೀಯ ವಿಶ್ವ ವಿದ್ಯಾಲಯ ಕಲಬುರಗಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ರಾಜ್ಯ ಮಟ್ಟದ ರೈತರ ಕಾರ್ಯಗಾರಕ್ಕೆ 10 ರೈತ/ ರೈತ ಮಹಿಳೆಯರನ್ನು ಕರೆದುಕೊಂಡು ಹೋಗಲಾಗಿತ್ತು ಹಾಗೂ ಎಲ್ಲಾ ಎಂಟು ಹಳ್ಳಿಗಳಿಂದ ಭಾಗವಹಿಸಿದ ರೈತರು ತಮ್ಮ ಅನಿಸಿಕೆ ಅಭಿಪ್ರಾಯಗಳನ್ನು ಹಂಚಿಕೊಂಡರು.




**ರಾಜ್ಯ ಮಟ್ಟದ ರೈತರ ಕಾರ್ಯಗಾರ**



**ರಾಜ್ಯ ಮಟ್ಟದ ರೈತರ ಕಾರ್ಯಗಾರದ ಸಮಾವೇಶ**

## ಕೃಷಿಯಲ್ಲಿ ದೂರ ಶಿಕ್ಷಣ

ದಿನಾಂಕ 24.03.2018 ರಂದು ಖುರ್ಧ ವೀರಾಪುರ ಗ್ರಾಮಕ್ಕೆ ಭೇಟಿ ನೀಡಿ ಕೃಷಿಯಲ್ಲಿ ದೂರಶಿಕ್ಷಣದ ಬಗ್ಗೆ ಮಾಹಿತಿ ನೀಡಿ ಸಮಗ್ರ ಕೃಷಿ, ಆಹಾರ ಧಾನ್ಯ, ಹಣ್ಣು ಮತ್ತು ತರಕಾರಿಗಳ ಕೊಯ್ಲೋತ್ತರ ನಿರ್ವಹಣೆಯ ಕೋರ್ಸ್‌ಗಳ ಬಗ್ಗೆ ಖುರ್ಧ ವೀರಾಪುರ ರೈತರಿಗೆ ತಿಳಿಸಿ ಈ ಶಿಕ್ಷಣದ ಸದುಪಯೋಗವನ್ನು ಪಡೆದುಕೊಳ್ಳಲು ತಿಳಿಸಲಾಯಿತು.

# ಯುವ ರೈತರಿಗೆ ದೂರಶಿಕ್ಷಣ




**ಖುರ್ಧವೀರಾಪುರ ಗ್ರಾಮದಲ್ಲಿ ದೂರ ಶಿಕ್ಷಣಕ್ಕೆ ರೈತರಿಂದ ಅರ್ಜಿ ಹಾಕಿಸುತ್ತಿರುವುದು**

ರೈತರ ಆದಾಯ ಮತ್ತು ಕಲ್ಯಾಣ ವೃದ್ಧಿ ಯೋಜನೆ ಅಡಿಯಲ್ಲಿ ಆಯ್ಕೆಯಾದ ಖುರ್ಧವೀರಾಪುರ ಗ್ರಾಮದ ರೈತರಿಗೆ ಕರ್ನಾಟಕ ಕೃಷಿ ಬೆಲೆ ಆಯೋಗದ ವತಿಯಂದ ದೂರ ಶಿಕ್ಷಣ ಕೋರ್ಸಿಗೆ ಆಸಕ್ತ 8 ಯುವ ರೈತರಿಂದ ಅರ್ಜಿ ಹಾಕಿಸಲಾಯಿತು.

# ವಾರ್ಷಿಕ ಸಭೆ–12.04.2018



**ದಿನಾಂಕ 12.04.2018 ರಂದು ಕರ್ನಾಟಕ ಕೃಷಿ ಬೆಲೆ ಆಯೋಗ ಬೆಂಗಳೂರಿನಲ್ಲಿ ಯೋಜನೆಯ ಸಭೆಯನ್ನು ಆಯೋಜಿಸಲಾಗಿತ್ತು.**

**2018–19 ನೇ ಸಾಲಿನಲ್ಲಿ ಕೈಗೊಳ್ಳಬೇಕಾದ ಯೋಜನೆಗಳು ಹಾಗೂ ಕಾರ್ಯಕ್ರಮಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಯಿತು.**

# ಗ್ರಾಮ ಸಭೆ– ಮುಂಗಾರು ಹಂಗಾಮಿನ ಬೆಳೆಗಳಲ್ಲಿ ಸಮಗ್ರ ಬೆಳೆ ನಿರ್ವಹಣೆ ತರಬೇತಿ ಕಾರ್ಯಕ್ರಮ, 03.05.2018, ಋರ್ಧ ವೀರಾಪುರ

ದಿನಾಂಕ 03.05.2018 ರಂದು ಋರ್ಧ ವೀರಾಪುರ ಗ್ರಾಮದಲ್ಲಿ ಗ್ರಾಮಸಭೆಯನ್ನು ಏರ್ಪಡಿಸಲಾಗಿತ್ತು. ಈ ಸಭೆಯಲ್ಲಿ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಸೇರಿದಂತೆ ಕೃಷಿ ಇಲಾಖೆ ಬ್ಯಾಡಗಿಯಿಂದ ಸಹಾಯಕ ಕೃಷಿ ಅಧಿಕಾರಿಗಳು ಪಾಲ್ಗೊಂಡು ಪ್ರಸಕ್ತ ಸಾಲಿನ ಯೋಜನೆಗಳ ಬಗ್ಗೆ ಚರ್ಚಿಸಿದರು ಹಾಗೂ ವಿಜ್ಞಾನಿಗಳು ತರಕಾರಿ ಬೆಳೆಗಳ ಸಸ್ಯ ಸಂರಕ್ಷಣೆ, ಟ್ರೈಕೋಡರ್ಮಾ ಬೀಜೋಪಚಾರ ಪದ್ಧತಿ ಪ್ರಾತ್ಯಕ್ಷಿಕೆ ಹಾಗೂ ಸಮಗ್ರಬೆಳೆ ನಿರ್ವಹಣೆಗಳ ಬಗ್ಗೆ ರೈತರಿಗೆ ಉಪನ್ಯಾಸ ನೀಡಿದರು.

# ತರಕಾರಿ ಬೆಳೆಗಳಲ್ಲಿ ಸಮಗ್ರ ಬೆಳೆ ನಿರ್ವಹಣೆ :

1. ಸರಿಯಾದ ತಳಿಗಳ ಆಯ್ಕೆ, ಸರಿಯಾದ ವೇಳೆಯಲ್ಲಿ ಬಿತ್ತನೆ, ಹಾಗೂ ಸರಿಯಾದ ಬೀಜ ಪ್ರಮಾಣದ ಆಯ್ಕೆ ಇರಬೇಕು. ಶಿಫಾರಸ್ಸು ಮಾಡಿದ ಸಾರಜನಕ, ರಂಜಕ, ಪೋಟ್ಯಾಷನ್ನು, ಬೆಳೆಗೆ ಕೊಡಬೇಕು.
2. ರಾಸಾಯನಿಕ ಗೊಬ್ಬರಕ್ಕಿಂತ, ಕೊಟ್ಟಿಗೆ ಗೊಬ್ಬರ ಮತ್ತು ಎರೆಹುಳು ಗೊಬ್ಬರ, ಸಾವಯವ ಗೊಬ್ಬರ ಹೆಚ್ಚಾಗಿ ಕೊಡಬೇಕು.
3. ಸರಿಯಾದ ಸಸ್ಯ ಪ್ರಚೋದಕಗಳನ್ನು ಸಿಂಪರಣೆ ಮಾಡಬೇಕು, ಎರೆಡು ಸಾರಿ ಮಾಡಿದರೆ ಇಳುವರಿ ಹೆಚ್ಚಿಸಬಹುದು. ಏಕದಳ ಕಳೆಗೆ ಅಲ್ಲಾಕ್ಲೋರ್ ಮತ್ತು ಬ್ಯೂಟಾಕ್ಲೋರ್‌ನ್ನು ಕಳೆ ಬರುವ ಪೂರ್ವದಲ್ಲಿ 1.5 ಲೀ/ಹೆ ಗೆ ಸಿಂಪರಣೆ ಮಾಡಬೇಕು.



ತರಕಾರಿ ಬೆಳೆಗಳಲ್ಲಿ ಸಮಗ್ರ ಬೆಳೆ ನಿರ್ವಹಣೆ

## ತರಕಾರಿ ಬೆಳೆಗಳಲ್ಲಿ ಸಮಗ್ರ ಕೀಟ ನಿರ್ವಹಣೆ

1. ತರಕಾರಿ ಬೆಳೆಗಳಲ್ಲಿ ಬರುವ ರಸ ಹೀರುವ ಕೀಟಗಳು (ಜಿಗಿಹುಳು , ಸಸ್ಯ ಹೇನು , ಬಿಳಿನೊಣ, ಎಲೆ ಸುರಂಗಕೀಟ, ಥ್ರಿಪ್ಸ ನುಸಿ ) ಇವುಗಳ ಹತೋಟಿಗಾಗಿ ಅಂತರವ್ಯಾಪ್ತಿ ಕೀಟನಾಶಕವನ್ನು ಅಥವಾ ಬೇವಿನ ಕಷಾಯವನ್ನು ನೀರಿನಲ್ಲಿ ಬೆರೆಸಿ ಸಿಂಪರಣೆ ಮಾಡಬೇಕು.
2. ಎಲ್ಲಾ ತರಕಾರಿ ಬೆಳೆಗಳಲ್ಲಿ ಬರುವ ಕಾಯಿಕೋರಕದ ಹುಳುವಿಗೆ ಎನ್.ಪಿ.ವಿ 250 ಎಲ್.ಇ ದ್ರಾವಣವನ್ನು ಸಿಂಪರಣೆ ಮಾಡಬೇಕು.ಮತ್ತು ಹುಳು ಲಾರ್ವಾ ಇದ್ದಾಗ ಹುಳುಗಳನ್ನು ಆರಿಸಿ ಇಮಾಮೆಕ್ಟಿನ ಬೆನಜೊಯೆಟ್ ಸಿಂಪರಣೆ ಮಾಡಬೇಕು ಹಾಗೂ ಪಕ್ಷಿಗಳು ಕೂಡುವಂತೆ ಜೋಳ, ಸಜ್ಜೆ, ಬೆಚಿಡೆ ಬೆಳೆಯನ್ನು ಸುತ್ತಲೂ ಹಾಕಬೇಕು. ಬೇವಿನ ಕಷಾಯ ಸಿಂಪರಣೆ ಮಾಡಬೇಕು.
3. ಆಯಾ ಬೆಳೆಗೆ ಅನುಗುಣವಾಗಿ ಬಲೆ ಬೆಳೆಯನ್ನು ಬೆಳೆ ಹಗೂ ಅಂತರ ಬೆಳೆಯನ್ನು ಬೆಳೆಯಬೇಕು. ಬೆಳೆಯುವುದರಿಂದ ಕೀಟದ ಹತೋಟಿ ಮಾಡಬಹುದು.



ತರಕಾರಿ ಬೆಳೆಗಳಲ್ಲಿ ಸಮಗ್ರ ಕೀಟ ನಿರ್ವಹಣೆ

# ಟ್ರೈಕೋಡರ್ಮಾದ ಮಹತ್ವ :

ಟ್ರೈಕೋಡರ್ಮಾ ಎಂಬ ಶಿಲೀಂಧ್ರವು ಮಣ್ಣಿನಿಂದ ಬರುವ ಸಸ್ಯ ರೋಗಗಳ ಜೈವಿಕ ಹತೋಟಿ ಮತ್ತು ಸಸ್ಯರೋಗವುಂಟು ಮಾಡುವ ಸೂಕ್ಷ್ಮಾಣುಗಳ ಸಂಖ್ಯೆ ಕಡಿಮೆ ಮಾಡಲು ಉಪಯೋಗಿಸುತ್ತಾರೆ. ಇದೊಂದು ಜೈವಿಕ ಶಿಲೀಂಧ್ರನಾಶಕವಾಗಿದೆ.

ಹಿಂಗಾರು ಜೋಳದಲ್ಲಿ ಇದ್ದಿಲು ಕಾಡಿಗೆ ರೋಗವನ್ನು ಟ್ರೈಕೋಡರ್ಮಾ ಉಪಚಾರದಿಂದ ನಿರ್ವಹಿಸಬಹುದು. ಹತ್ತಿಯಲ್ಲಿ ಪ್ರತಿ ಕಿ. ಗ್ರಾಂ ಬೀಜಕ್ಕೆ 4 ಗ್ರಾಂ ಟ್ರೈಕೋಡರ್ಮಾ ಬೀಜೋಪಚಾರದಿಂದ ಮಣ್ಣಿನಿಂದ ಹರಡುವ ಬೀಜ/ಬೇರು ಕೊಳೆಯುವ ರೋಗಗಳನ್ನು ಹತೋಟಿ ಮಾಡಬಹುದು.ಇದಲ್ಲದೆ ಗೋಧಿ, ಟೊಮ್ಯಾಟೋ, ಶೇಂಗಾ ಮತ್ತು ಕಾಳುಮೆಣಸಿನಲ್ಲಿ ಬುಡ ಕೊಳೆ ರೋಗ, ಕಡಲೆಯಲ್ಲಿ ಸೊರಗು ರೋಗ, ಆಲೂಗಡ್ಡೆಯಲ್ಲಿ ಸಿಡಿ ರೋಗ ಹಾಗೂ ಕಲ್ಲಂಗಡಿಯಲ್ಲಿ ಬಾಡು ರೋಗಗಳ ಹತೋಟಿಗೆ ಟ್ರೈಕೋಡರ್ಮಾ ಉಪಯೋಗಿಸಬಹುದು.



ಟ್ರೈಕೋಡಾರ್ಮಾ ಬೀಜೋಪಚಾರ ಪದ್ಧತಿ ಪ್ರಾತ್ಯಕ್ಷಿಕೆ



ಎರೆಹುಳು ಗೊಬ್ಬರದ ಮಹತ್ವ



ಕೃಷಿ ಇಲಾಖೆಯಿಂದ ರೈತರಿಗೆ ಸವಲತ್ತುಗಳ ಮಾಹಿತಿ



ಬೀಜೋತ್ಪಾದಕರ ಸಂಘ ರಚನೆ ಬಗ್ಗೆ ಚರ್ಚೆ



ಕ್ಷೇತ್ರ ಭೇಟಿ

**ಮುಂಗಾರಿನ ಮುಂಚೂಣಿ ಪ್ರಾತ್ಯಕ್ಷಿತೆಗಳ ಫಲಾನುಭವಿಗಳ ಆಯ್ಕೆ ಸಭೆ**

**18.05.2018**





ಪ್ರಾತ್ಯಕ್ಷಿತೆಗಳ ಅನುಕೂಲ ಮತ್ತು ಅವುಗಳ ಮಾಹಿತಿಯನ್ನು ರೈತರಿಗೆ ತಿಳಿಸಲಾಯಿತು

# ಬೀಜೋತ್ಪಾದಕ ಸಂಘ ರಚನೆ ಬಗ್ಗೆ ಚರ್ಚೆ ಮತ್ತು ರೈತರ ಹೊಲಗಳಿಗೆ ಕ್ಷೇತ್ರ ಭೇಟಿ– ಖರ್ಧ ವೀರಾಪುರ



ಬೀಜೋತ್ಪಾದಕ ಸಂಘ ರಚನೆ ಬಗ್ಗೆ ರೈತರೊಂದಿಗೆ ಚರ್ಚೆ



ರೈತರ ಹೊಲಗಳಿಗೆ ಕ್ಷೇತ್ರ ಭೇಟಿ



ರೈತರೊಂದಿಗೆ ಹೀರೇಬಳ್ಳಿ ಯಲ್ಲಿ ನಂಜಾಣು ರೋಗದ ಹತೋಟಿ ಬಗ್ಗೆ ಚರ್ಚಿಸುತ್ತಿರುವುದು

## ನಂಜಾಣು ರೋಗ :

ರೋಗಕ್ಕೆ ತುತ್ತಾದ ಗಿಡಗಳ ಬೆಳೆವಣಿಗೆ ಕುಂಠಿತವಾಗುತ್ತದೆ. ಎಲೆಗಳು ಹಸಿರು ಮಿಶ್ರಿತ ಹಳದಿ ಬಣ್ಣದಿಂದ ಕೂಡಿರುತ್ತದೆ.

ನಂಜು ರೋಗಕ್ಕೆ ತುತ್ತಾದ ಗಿಡಗಳನ್ನು ಕಿತ್ತು ಸುಡುವ್ಯದರಿಂದ ರೋಗ ಹರಡುವುದನ್ನು ತಡೆಗಟ್ಟಬಹುದು.

## ಮುಂಗಾರಿನ ಮುಂಚೂಣಿ ಪ್ರಾತ್ಯಕ್ಷಿತೆಯ ಫಲಾನುಭವಿಗಳ ಪಟ್ಟಿ

| ಕ್ರ. ಸಂ. | ರೈತನ ಹೆಸರು | ಜಾತಿ | ಬೆಳೆ | ದೂರವಾಣಿ ಸಂಖ್ಯೆ |
|---|---|---|---|---|
| 1 | ಶ್ರೀ ವಿಜಯ ಹನುಮಂತಪ್ಪ ಗುರೇಮಟ್ಟಿ | ಸಾಮಾನ್ಯ | ಬಿಟಿ ಹತ್ತಿ | 9741537743 |
| 2 | ಶ್ರೀ ನಾಗರಾಜ ಬಸಪ್ಪ ಕೋವೇರ್ | ಸಾಮಾನ್ಯ | ಬಿಟಿ ಹತ್ತಿ | 7348873304 |
| 3 | ಶ್ರೀ ದ್ಯಾಮಪ್ಪ ಸತ್ಯಪ್ಪ ಹಳ್ಳಳ್ಳಿ | ಎಸ್.ಟಿ | ಬಿಟಿ ಹತ್ತಿ | 9972294278 |
| 4 | ಶ್ರೀ ದುರಗಪ್ಪ ಮಲ್ಲಪ್ಪ ಕೆಂಚಣ್ಣವರ | ಸಾಮಾನ್ಯ | ಬಿಟಿ ಹತ್ತಿ | 8105685048 |
| 5 | ಶ್ರೀ ಮುಕಪ್ಪ ಮಾರ್ತಾಂಡಪ್ಪ ಜೋಗಿಹಳ್ಳಿ | ಎಸ್.ಟಿ | ಬಿಟಿ ಹತ್ತಿ | 7348873352 |
| 6 | ಶ್ರೀಮತಿ ರೇಣವ್ವ ರಾಮಪ್ಪ ಕೆಂಚಣ್ಣನವರ | ಪ್ರವರ್ಗ–ಅ | ಬಿಟಿ ಹತ್ತಿ | 9900879641 |
| 7 | ಶ್ರೀ ಬಸವರಾಜ ನಾಗಪ್ಪ ಕಾಕೋಳ | ಸಾಮಾನ್ಯ | ಬಿಟಿ ಹತ್ತಿ | 9880637020 |
| 8 | ಶ್ರೀ ಈಶ್ವರಪ್ಪ ನಾಗಪ್ಪ ಕಾಕೋಳ | ಸಾಮಾನ್ಯ | ಬಿಟಿ ಹತ್ತಿ | 8296422142 |
| 9 | ಶ್ರೀಮತಿ ಗಿರಿಜವ್ವ ಚಂದ್ರಪ್ಪ ಮಾದರ | ಎಸ್.ಸಿ | ಬಿಟಿ ಹತ್ತಿ | 9632946121 |
| 10 | ಶ್ರೀ ಯಲ್ಲಪ್ಪ ಸೋಮಪ್ಪ ಆಡರ್ | ಸಾಮಾನ್ಯ | ಬಿಟಿ ಹತ್ತಿ | 8095483714 |

# ಕೃಷಿ ವಿಜ್ಞಾನ ಕೇಂದ್ರ ಹಿರಿಯೂರಿನಲ್ಲಿ ಕೃಷಿ ಬೆಲೆ ಆಯೋಗದ ಸಭೆ

ದಿನಾಂಕ 08.06.18 ಮತ್ತು 09.06.2018 ರಂದು 2018–19 ನೇ ಸಾಲಿನಲ್ಲಿ ಕೈಗೊಳ್ಳಬೇಕಾದ ವಿವಿಧ ಕಾರ್ಯಕ್ರಮಗಳ ಕುರಿತು ಸುದೀರ್ಘವಾಗಿ ಚರ್ಚಿಸಲು ಸಭೆಯನ್ನು ಕೃಷಿ ವಿಜ್ಞಾನ ಕೇಂದ್ರ ಹಿರಿಯೂರಿನಲ್ಲಿ ಕೃಷಿ ಬೆಲೆ ಆಯೋಗದ ಸಮ್ಮುಖದಲ್ಲಿ ಆಯೋಜಿಸಲಾಗಿತ್ತು. ಈ ಸಭೆಯಲ್ಲಿ ಎಲ್ಲಾ 8 ಹಳ್ಳಿಗಳ ರೈತರು ಭಾಗವಹಿಸಿದ್ದರು.



**ಕೃಷಿ ವಿಜ್ಞಾನ ಕೇಂದ್ರ ಹಿರಿಯೂರಿನಲ್ಲಿ ಆಯೋಜಿಸಿದ್ದ ಸಭೆಯಲ್ಲಿ ರೈತರ ಸಮ್ಮುಖದಲ್ಲಿ ಯೋಜನೆಯ ವರಧಿ ಸಲ್ಲಿಸುತ್ತಿರುವುದು**

## ಖುರ್ಧ ವೀರಾಪುರದಲ್ಲಿ ಗ್ರಾಮಸಭೆ: 23.07.2018

ದಿನಾಂಕ 23.07.2018ರಂದು ಖುರ್ಧ ವೀರಾಪುರ ಗ್ರಾಮದಲ್ಲಿ ಗ್ರಾಮಸಭೆಯನ್ನು ಏರ್ಪಡಿಸಲಾಗಿತ್ತು. ಈ ಸಭೆಯಲ್ಲಿ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಸೇರಿದಂತೆ ಕೃಷಿ ಇಲಾಖೆ ಬ್ಯಾಡಗಿಯಿಂದ ಎನ್. ಜಿ ಅಮೃತೇಶ್ವರ, ಸಹಾಯಕ ಕೃಷಿ ನಿರ್ದೇಶಕರು ಹಾಗೂ ಮಂಜುನಾಥ್ ಆರ್, ಕೃಷಿ ಅಧಿಕಾರಿಗಳು ಪಾಲ್ಗೊಂಡು ಪ್ರಸಕ್ತ ಸಾಲಿನ ಯೋಜನೆಗಳ ಬಗ್ಗೆ ಚರ್ಚಿಸಿದರು. ಹಾಗೂ ವಿಜ್ಞಾನಿಗಳು ಮುಂಗಾರು ಬೆಳೆಗಳ ಸಸ್ಯ ಸಂರಕ್ಷಣೆ, ಪೋಷಕಾಂಶ ನಿರ್ವಹಣೆ ಹಾಗೂ ಸಮಗ್ರಬೆಳೆ ನಿರ್ವಹಣೆಗಳ ಬಗ್ಗೆ ರೈತರಿಗೆ ಉಪನ್ಯಾಸ ನೀಡಿದರು.





**ಪ್ರಸಕ್ತ ಸಾಲಿನ ಕೃಷಿ ಇಲಾಖೆಯ ಯೋಜನೆಗಳ ರೈತರಿಗೆ ಬೆಳೆ ನಿರ್ವಹಣೆ ಬಗ್ಗೆ ಉಪನ್ಯಾಸ ಬಗ್ಗೆ ಚರ್ಚೆ**

# ರಾಷ್ಟ್ರ ಮಟ್ಟದ ತಾಂತ್ರಿಕ ಕಾರ್ಯಾಗಾರ: 26.07.2018

ದಿನಾಂಕ 26.07.2018 ರಂದು ಬೆಂಗಳೂರಿನಲ್ಲಿ ರಾಷ್ಟ್ರ ಮಟ್ಟದ ಕಾರ್ಯಗಾರವನ್ನು ಆಯೋಜಿಸಲಾಗಿತ್ತು. ಈ ಸಭೆಯಲ್ಲಿ ಕಾರ್ಯ ನಿರ್ವಹಣಾಧಿಕಾರಿಗಳು (ಭಾ.ಅ.ಸೇ) ಅಶೋಕ ದಳವಾಯಿ, ಮಾನ್ಯ ಕೃಷಿ ಸಚಿವರಾದ ಶ್ರೀ ಎನ್ ಎಚ್ ಶಿವಶಂಕರ ರೆಡ್ಡಿ, ಮಾನ್ಯ ತೋಟಗಾರಿಕಾ ಸಚಿವರಾದ ಶ್ರೀ ಎಂ ಸಿ ಮನಗೂಳಿ, ಕೃಷಿ ಬೆಲೆ ಆಯೋಗದ ಅಧ್ಯಕ್ಷರು ಡಾ ಪ್ರಕಾಶ್ ಕಮ್ಮರಡಿ, ರೈತ ಮುಖಂಡರು ಮತ್ತಿತರು ಭಾಗವಹಿಸಿದ್ದರು. ಈ ಸಭೆಯಲ್ಲಿ ರೈತರ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ಮತ್ತು ಸದೃಡ ಮಾರುಕಟ್ಟೆ– ಕೇಂದ್ರದ ನೂತನ ಯೋಜನೆಗಳ ಸಮಗ್ರ ವಿಶ್ಲೇಷಣೆ ಬಗ್ಗೆ ಚರ್ಚಿಸಲಾಯಿತು.



ರಾಷ್ಟ್ರ ಮಟ್ಟದ ತಾಂತ್ರಿಕ ಕಾರ್ಯಗಾರ

# ಎಲೆಕೋಸು ಬೆಳೆಯಲ್ಲಿ ಮುಂಚೂಣಿ ಪ್ರಾತ್ಯಕ್ಷಿತೆ

ಕೃಷಿ ವಿಜ್ಞಾನ ಕೇಂದ್ರ ಹನುಮನಮಟ್ಟಿ ವತಿಯಿಂದ ಖುರ್ಧ ವೀರಾಪುರ ಗ್ರಾಮದ ಹತ್ತು ರೈತರಿಗೆ ಎಲೆಕೋಸಿನ ಮೂಂಚೂಣಿ ಪ್ರಾತ್ಯೆಕ್ಷಿಕೆಯನ್ನು ನೀಡಲಾಗಿತ್ತು ಹಾಗೂ ಎಲೆಕೋಸಿನ ಕ್ಷೇತ್ರೋತ್ಸವವನ್ನು ದಿನಾಂಕ 06.08.2018 ರಂದು ಹಮ್ಮಿಕೊಳ್ಳಲಾಗಿತ್ತು. ಈ ಎಲೆಕೋಸಿನಲ್ಲಿ ಸೇಂಟ್ ಎಂಬ ತಳಿಯನ್ನು ಪ್ರಾತಿಕ್ಷಿಕೆಗೆ ಉಪಯೋಗಿಸಲಾಗಿತ್ತು ಹಾಗೂ ಎಲೆಕೋಸಿನಲ್ಲಿ ಬೆಳೆ, ರೋಗ, ಕೀಟ ನಿರ್ವಹಣೆ ಮತ್ತು ಅಧಿಕ ಇಳುವರಿ ಕೊಡುವ ತಳಿಗಳ ಬಗ್ಗೆ ಪ್ರಾತ್ಯಕ್ಷಿಕೆಯ ಮೂಲಕ ರೈತರಿಗೆ ಮಾಹಿತಿ ನೀಡಲಾಯಿತು.



Mustard as Trap crop



Field Visit



DBM larva incidence



Blackrot disease



**ಎಲೆಕೋಸು ಬೆಳೆಯಲ್ಲಿ ಅಪಾಯಕಾರಿ ವಜ್ರ ಬೆನ್ನಿನ ಪತಂಗದ ನಿರ್ವಹಣೆ ಕುರಿತು ರೈತರೊಂದಿಗೆ ಚರ್ಚೆ**

## ಎಲೆಕೋಸು ಬೆಳೆಯಲ್ಲಿ ವಜ್ರ ಬೆನ್ನಿನ ಚಿಟ್ಟೆಯ ಲಕ್ಷಣಗಳು ಮತ್ತು ನಿರ್ವಹಣೆ :

**ಲಕ್ಷಣಗಳು :** ಮೊದಲ ಹಂತದ ಮರಿಹುಳುಗಳು ಎಲೆಗಳ ಮೇಲೆ ಹಸಿರು ಪದಾರ್ಥವನ್ನು ಕೆರೆದು ತಿನ್ನುತ್ತವೆ.ಇದರಿಂದ ಎಲೆಗಳ ಮೇಲೆ ಅಲ್ಲಲ್ಲಿ ಬಿಳಿ ಬಿಳಿ ತೆಳುವಾದ ಪದರುಗಳಂತೆ ಕಾಣುತ್ತವೆ. ನಂತರ ಬೆಳೆದ ಕೀಟಗಳು ಗಡ್ಡೆಗಳನ್ನು ಕೊರೆದು ರಂಧ್ರ ಮಾಡಿ ತಿನ್ನುತ್ತವೆ. ಇದರಿಂದ ಗಡ್ಡೆಗಳು ಹಿಕ್ಕೆಗಳಿಂದ ತುಂಬಿ ಹಾಳಾಗುತ್ತವೆ. ಮರಿಹುಳು ದೇಹವು ಎರಡೂ ಕಡೆ ಚೂಪಾಗಿದ್ದು ಹಸಿರು ಬಣ್ಣದಿಂದ ಕೂಡಿರುತ್ತದೆ.

**ನಿರ್ವಹಣೆ :** ಕೋಸು ಗುಂಪಿಗೆ ಸೇರಿದ ತರಕಾರಿಗಳನ್ನು ಮೂರು ಮೂರು ವರ್ಷದಲ್ಲಿ ಒಂದು ಸಾರಿ ಮಾತ್ರ ಬೆಳೆಯಬೇಕು ಎಲೆಕೋಸು ನಾಟಿ ಮಾಡುವ ೧೫ ದಿನ ಮೊದಲು ಪ್ರತಿ ೨೫ ಸಾಲಿಗೆ ಒಂದು ಸಾಲು ಸಾಸಿವೆ ಮತ್ತು ನಾಟಿ ಮಾಡಿದ ೧೫ ರಿಂದ ೨೫ ದಿನ ನಂತರ ಇನ್ನೊಂದು ಸಾಲು ಸಾಸಿವೆಯನ್ನು ಬಿತ್ತನೆ ಮಾಡಬೇಕು. ಸಾಸಿವೆಯ ಮೇಲೆ ಅತಿ ಹೆಚ್ಚಿನ ಪ್ರಮಾಣದಲ್ಲಿ ಹುಳುಗಳು ಕಂಡು ಬಂದಾಗ ಪ್ರತಿ ಲೀಟರ್ ನೀರಿಗೆ ೦.೫ ಮಿ.ಲೀ. ಡೈಕ್ಲೋರೊವಾಸ್ ಸೇರಿಸಿ ಸಾಸಿವೆಗೆ ಮಾತ್ರ ಸಿಂಪರಣೆ ಮಾಡಬೇಕು ಗಡ್ಡೆಯಾಗುವ ಸಮಯದಲ್ಲಿ ಹುಳುವಿನ ಬಾಧೆ ಕಂಡು ಬಂದರೆ ಎಲೆಕೋಸು ಬೆಳೆಗೆ ಶೇ.೫ ರ ಬೇವಿನ ಬೀಜದ ಕಷಾಯ ಸಿಂಪರಣೆ ಮಾಡಬೇಕು. ಹುಳುವಿನ ಬಾಧೆ ಮುಂದುವರೆದರೆ ಪುನಃ ಇದೇ ಸಿಂಪರಣೆಯನ್ನು ೧೫ ದಿನಗಳ ಅಂತರದಲ್ಲಿ ಮಾಡಬಹುದು.



## ಎಲೆಕೋಸಿನಲ್ಲಿ ಮುಂಚೂಣಿ ಪ್ರಾತ್ಯಕ್ಷಿಕೆಯ ಕ್ಷೇತ್ರೋತ್ಸವ

ಖುರ್ದವೀರಾಪುರ ಗ್ರಾಮದಲ್ಲಿ ೧೦ ಜನ ರೈತರಿಗೆ ಎಲೆಕೋಸಿನ ಮೂಂಚೂಣಿ ಪ್ರಾತ್ಯಕ್ಷಿಕೆಯ ಮಾಡಲಾಯಿತು. ಪ್ರಾತ್ಯಕ್ಷಿಕೆಯಲ್ಲಿ ಸೇಂಟ್ ಎಂಬ ತಳಿಯನ್ನು ಆಯ್ಕೆ ಮಾಡಲಾಯಿತು ಮತ್ತು ಅದನ್ನು ಸ್ಥಳೀಯ ತಳಿಯೋಂದಿಗೆ ಹೋಲಿಕೆ ಮಾಡಿ ನೋಡಿದಾಗ ಸೇಂಟ್ ತಳಿಯು ೬೩.೮೩ ಕ್ವಿ/ಹೆ ಇಳುವರಿ ಬಂದಿದೆ ಮತ್ತು ಸ್ಥಳೀಯ ತಳಿಯು ೫೭.೮೪ ಕ್ವಿ/ಹೆ ಬಂದಿದ್ದು, ಇಂದರಿಂದ ರೈತರಿಗೆ ಪ್ರಾತ್ಯಕ್ಷಿಕೆಯ ತಾಂತ್ರಿಕತೆಯು ಸ್ಥಳೀಯ ತಳಿ ಕ್ವಿಂತ ಶೇ ೧೦.೩೫ ರಷ್ಟು ಹೆಚ್ಚಳವಾಗಿದೆ ಎಂದು ಖುರ್ದವೀರಾಪುರ ಗ್ರಾಮದ ರೈತರಿಗೆ ಸೇಂಟ್ ತಳಿಯ ಬಗ್ಗೆ ತಿಳಿಸಿ ಹೇಳಲಾಯಿತು, ನಚಿತರ ರೈತರೆ ಮುಂದಿನ ಬಾರಿ ಪ್ರಾತ್ಯಕ್ಷಿಕೆಯ ತಾಂತ್ರಿಕತೆಯನ್ನು ಆಳವಡಿಸಿಕೊಳ್ಳುತ್ತೆವೆ ಎಂದು ಭರವಸೆ ನೀಡಿದರು.

## ಎಲೆಕೋಸಿನಲ್ಲಿ ಮುಂಚೂಣಿ ಪ್ರಾತ್ಯಕ್ಷಿತೆಯ ಫಲಾನುಭವಿಗಳ ಪಟ್ಟಿ

| ಕ್ರ.ಸಂಖ್ಯೆ | ಫಲಾನುಭವಿಗಳ ಹೆಸರು | ಲಿಂಗ | ವಯಸ್ಸು | ಉದ್ಯೋಗ | ಜಾತಿ |
|---|---|---|---|---|---|
| 1 | ಅರವಿಂದ್ರಪ್ಪ ಮಣ್ಣಬಸಣ್ಣವರ | ಗಂ | 42 | ರೈತ | ಎಸ್ ಟಿ |
| 2 | ರೇವಣೆಪ್ಪ ಗುರೇಮಟ್ಟಿ | ಗಂ | 45 | ರೈತ | ಸಾಮಾನ್ಯ |
| 3 | ಶಿವಮೂರ್ತೆಪ್ಪ ಪ್ರಜಾರ | ಗಂ | 46 | ರೈತ | ಎಸ್ ಟಿ |
| 4 | ಭರಮಪ್ಪ ಲಚ್ಚಪ್ಪನವರ | ಗಂ | 62 | ರೈತ | ಎಸ್ ಟಿ |

| | | | | | |
|---|---|---|---|---|---|
| 5 | ಯಲ್ಲಪ್ಪ ಕಾಕೋಳ | ಗಂ | 43 | ರೈತ | ಸಾಮಾನ್ಯ |
| 6 | ರಾಮಪ್ಪ ಪ್ರಜಾರ | ಗಂ | 57 | ರೈತ | ಎಸ್ ಟಿ |
| 7 | ಶಂಬಪ್ಪ ಗುರೇಮಟ್ಟಿ | ಗಂ | 45 | ರೈತ | ಸಾಮಾನ್ಯ |
| 8 | ಹೊನ್ನಪ್ಪ ಪ್ರಜಾರ | ಗಂ | 52 | ರೈತ | ಎಸ್ ಟಿ |
| 9 | ಪರಸಪ್ಪ ಕಾಕೋಳ | ಗಂ | 48 | ರೈತ | ಸಾಮಾನ್ಯ |
| 10 | ಅಡಿವೆಪ್ಪ ಗಣಜೂರ | ಗಂ | 60 | ರೈತ | ಎಸ್ ಟಿ |

## ಮೆಣಸಿನಕಾಯಿಯಲ್ಲಿ ಮುಂಚೂಣಿ ಪ್ರಾತ್ಯಕ್ಷಿತೆ

ಕೃಷಿ ವಿಜ್ಞಾನ ಕೇಂದ್ರ ಹನುಮನಮಟ್ಟಿ ವತಿಯಿಂದ ಖುರ್ಧ ವೀರಾಪುರ ಗ್ರಾಮದ ಮೂರು ರೈತರಿಗೆ ಎಲೆಕೋಸಿನ ಮೂಂಚೂಣಿ ಪ್ರಾತ್ಯೆಕ್ಷಿಕೆಯನ್ನು ನೀಡಲಾಗಿತ್ತು. ಈ ಪ್ರಾತ್ಯಕ್ಷಿತೆಯಲ್ಲಿ ಎರಡು ವಿದದ ತಳಿಗಳನ್ನು ಉಪಯೋಗಿಸಲಾಗಿದ್ದು, ಅವು ಕೆಬಿಸಿಹೆಚ್–1, ಅರ್ಕಾ ಮೇಘನಾ, ವಿವಿಧ ರೋಗಗಳು, ಕೀಟಗಳು ಮತ್ತು ಇಳುವರಿಯ ಬಗ್ಗೆ ಮೌಲ್ಯಮಾಪನೆ ಮಾಡಲಾಗಿದೆ.

ರೈತರು ಬೆಳೆದ ಮೆಣಸಿನಕಾಯಿ ಹೊಲಕ್ಕೆ ಹೋಲಿಸಿದಾಗ ಅರ್ಕಾ ಮೇಘನಾ ಮತ್ತು ಕೆಬಿಸಿಹೆಚ್–1 ದಲ್ಲಿ ಇಳುವರಿ ಹೆಚ್ಚಾಗಿದ್ದು, ಪ್ರತಿ ಗಿಡದಲ್ಲಿ ಬಿಡುವ ಹಣ್ಣುಗಳ ಸಂಖ್ಯೆಯೂ ಸಹ ಅಧಿಕವಾಗಿದ್ದು ಮತ್ತು ರೋಗದ ತೀವ್ರತೆಯೂ ಸಹ ಕಡಿಮೆ ಕಂಡು ಬಂದಿದೆ.

### ಮೆಣಸಿನಕಾಯಿಯಲ್ಲಿ ಮುಂಚೂಣಿ ಪ್ರಾತ್ಯಕ್ಷಿತೆಯ ಫಲಾನುಭವಿಗಳ ಪಟ್ಟಿ

| ಕ್ರ.ಸಂಖ್ಯೆ | ಫಲಾನುಭವಿಗಳ ಹೆಸರು | ಲಿಂಗ | ವಯಸ್ಸು | ಉದ್ಯೋಗ | ಜಾತಿ |
|---|---|---|---|---|---|
| 1 | ಭರಮಪ್ಪ ಲಚ್ಚಪ್ಪನವರ | ಗಂ | 62 | ರೈತ | ಎಸ್ ಸಿ |
| 2 | ಫಕ್ಕೀರಪ್ಪ ಪೂಜಾರ | ಗಂ | 52 | ರೈತ | ಎಸ್ ಟಿ |
| 3 | ಶಿವಮೂರ್ತೆಪ್ಪ ಪೂಜಾರ | ಗಂ | 46 | ರೈತ | ಎಸ್ ಟಿ |















### ಮೆಣಸಿನಕಾಯಿಯಲ್ಲಿ ವಿವಿಧ ರೋಗಗಳು, ಕೀಟಗಳು ಮತ್ತು ಇಳುವರಿಯ ಬಗ್ಗೆ ಮೌಲ್ಯಮಾಪನೆ

## ಹೆಬ್ಬೇವು ಸಸಿ ವಿತರಣೆ

ದಿನಾಂಕ 10.08.2018 ರಂದು ಕರ್ನಾಟಕ ಕೃಷಿ ಬೆಲೆ ಆಯೋಗದ ಯೋಜನೆಯಡಿಯಲ್ಲಿ ಕೃಷಿ ವಿಜ್ಞಾನ ಕೇಂದ್ರ ಹನುಮನಮಟ್ಟಿ ವತಿಯಿಂದ ಖುರ್ಧ ವೀರಾಪುರ ಗ್ರಾಮದಲ್ಲಿ ಹೆಚ್ಚಾಗಿ ಅತಿ ಸಣ್ಣ ರೈತರು ಅಂದರೆ ೧ ಎಕರೆಗಿಂತ ಕಡಿಮೆ ಹಿಡುವಳಿ ಪ್ರದೇಶವಿದ್ದು ಆಸಕ್ತ  ಹೊಂದಿದ ರೈತರಿಗೆ  ಕೃಷಿಯಲ್ಲಿ ಇತರೆ ಬೆಳೆಗಳನ್ನು ಬೆಳೆಯುವುದ್ದಕ್ಕಾಗಿ ಹಾಗೂ ಅವರ ಆಧಾಯವನ್ನು ಹೆಚ್ಚಿಸುವುದ್ದಕ್ಕಾಗಿ ೧೦ ಜನ ರೈತರಿಗೆ ಹೆಬ್ಬೇವಿನ ಸಸಿಗಳನ್ನು ವಿತರಿಸಲಾಯಿತು.

| ಕ್ರ. ಸಂಖ್ಯೆ | ರೈತರ ಹೆಸರು | ಲಿಂಗ | ವಯಸ್ಸು | ಜಾತಿ | ಉದ್ಯೋಗ |
|---|---|---|---|---|---|
| ೧ | ಸಂತೋಷ ಆಡೂರು | ಗಂಡು | ೩೫ | ಸಾಮಾನ್ಯ | ರೈತ |
| ೨ | ಮಾರುತಿ ಗುರೇಮಟ್ಟಿ | ಗಂಡು | ೪೫ | ಸಾಮಾನ್ಯ | ರೈತ |
| ೩ | ಚಂದ್ರಪ್ಪ ಗುರೇಮಟ್ಟಿ | ಗಂಡು | ೪೮ | ಸಾಮಾನ್ಯ | ರೈತ |
| ೪ | ಪ್ರಕಾಶ ಮಾದರ | ಗಂಡು | ೪೦ | ಎಸ್ ಸಿ | ರೈತ |
| ೫ | ಮಂಜಪ್ಪ ಕೆಂಚಣ್ಣವರ | ಗಂಡು | ೩೨ | ಸಾಮಾನ್ಯ | ರೈತ |
| ೬ | ದೊಡ್ಡನಗೌಡ ಪಾಟೀಲ | ಗಂಡು | ೫೨ | ಸಾಮಾನ್ಯ | ರೈತ |
| ೭ | ನಾಗನಗೌಡ ಪಾಟೀಲ | ಗಂಡು | ೫೪ | ಸಾಮಾನ್ಯ | ರೈತ |
| ೮ | ಪರಸಪ್ಪ ಕಾಕೋಳ | ಗಂಡು | ೪೫ | ಸಾಮಾನ್ಯ | ರೈತ |
| ೯ | ಸುನೀಲ ಪೂಜಾರ | ಗಂಡು | ೨೮ | ಎಸ್ ಟಿ | ರೈತ |
| ೧೦ | ರಾಜಪ್ಪ ಗುರೇಮಟ್ಟಿ | ಗಂಡು | ೩೭ | ಸಾಮಾನ್ಯ | ರೈತ |



**ಖುರ್ದವೀರಾಪುರ ಗ್ರಾಮದ ರೈತರಿಗೆ ಹೆಬ್ಬೇವು ಸಸಿ ವಿತರಣೆ**





**ಹೆಬ್ಬೇವಿನ ಸಸಿಯನ್ನು ಹೊಲದಲ್ಲಿ ಹಾಕುತ್ತಿರುವುದು**

## ರೈತ ದಿನಾಚರಣೆ

ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನ ಖುರ್ದವೀರಾಪುರ ಗ್ರಾಮದಲ್ಲಿ ಹನುಮನಮಟ್ಟಿಯ ಕೃಷಿ ವಿಜ್ಞಾನ ಕೇಂದ್ರದಿಂದ **"ರೈತ ದಿನಾಚರಣೆ"**ಯನ್ನು 23.12.2018 ರಂದು ಆಚರಿಸಲಾಯಿತು. ಈ ಕಾರ್ಯಕ್ರಮವನ್ನು ಕೃಷಿ ಪಂಡಿತ ಮತ್ತು ಜಿಲ್ಲಾ ಮಟ್ಟದ ಶ್ರೇಷ್ಠ ಕೃಷಿಕ ಪ್ರಶಸ್ತಿ ವಿಜೇತರಾದ ಶ್ರೀ ಹೇಮಣ್ಣ ಬಾರಂಗಿ, ಹಿರೇಅಣಜಿ, ಬ್ಯಾಡಗಿ ತಾಲ್ಲೂಕು ಇವರು ಉದ್ಘಾಟನೆಯನ್ನು ಮಾಡಿ, ತಮ್ಮ ಉದ್ಘಾಟನಾ ಭಾಷಣದಲ್ಲಿ ರೈತರು ಸಮಗ್ರ ಕೃಷಿ ಪದ್ಧತಿಯನ್ನು ಅನುಸರಿಸಿ ಕಡಿಮೆ ಖರ್ಚಿನಲ್ಲಿ ಹೆಚ್ಚಿನ ಲಾಭವನ್ನು ಪಡೆದುಕೊಳ್ಳಬೇಕೆಂದು ರೈತರಿಗೆ ಕರೆ ನೀಡಿದರು. ಇವರು ತಮ್ಮ 10 ಗುಂಟೆಯ ಕ್ಷೇತ್ರದಲ್ಲಿ ತೆಂಗು, ನುಗ್ಗೆ, ತೊಂಡೆಕಾಯಿ, ತರಕಾರಿ ಬೆಳೆಗಳು, ಗುಲಾಬಿ ಮತ್ತು ನಿಂಬೆ ಸಸಿಯ ಕಸಿ ಕಟ್ಟುವುದು, ಮೀನು ಸಾಕಾಣಿಕೆ,

ಜೇನು ಸಾಕಾಣಿಕೆ, ಎರೆಹುಳು ಗೊಬ್ಬರ ಮತ್ತು ಎರೆ ಜಲ ತಯಾರಿಕೆ, ಹೈನುಗಾರಿಕೆ ಮತ್ತು ಅನಿಲ ಘಟಕವನ್ನು ಹೊಂದಿದ್ದಾರೆ. ಈ ರೀತಿಯಾಗಿ ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕೆಂದು ಇತರೆ ರೈತರಿಗೆ ಅರಿವು ಮೂಡಿಸಿದರು. .ಕೃಷಿ ವಿಜ್ಞಾನ ಕೇಂದ್ರದ, ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರಾದ ಡಾ. ಅಶೋಕ ಪಿ, ಇವರು ಅಧ್ಯಕ್ಷೀಯ ಭಾಷಣ ಮಾಡಿದರು. ಡಾ. ಗುಂಡಣ್ಣನವರ್ ಇವರು ತಮ್ಮ ಭಾಷಣದಲ್ಲಿ ಸಮಗ್ರ ಪೀಡೆ ಹಾಗೂ ರೋಗಗಳ ನಿರ್ವಹಣೆಯ ಕ್ರಮಗಳ ಬಗ್ಗೆ ರೈತರಿಗೆ ಮನದಟ್ಟು ಮಾಡಿಕೊಟ್ಟರು. ಮುಂದುವರೆದು ಕೀಟನಾಶಕಗಳ ದುಷ್ಪರಿಣಾಮದ ಬಗ್ಗೆ ವಿವರಿಸುತ್ತಾ ಕೀಟನಾಶಕಗಳ ಸದ್ಬಳಕೆ ಮಾಡಿಕೊಳ್ಳಲು ತಿಳಿ ಹೇಳಿದರು. ಈ ಕಾರ್ಯಕ್ರಮದಲ್ಲಿ ಖುರ್ಧವೀರಾಪುರ ಗ್ರಾಮದ ಗ್ರಾಮಪಂಚಾಯಿತಿ ಸದ್ಯಸರಾದ ಶ್ರೀ ಸಿದ್ಧಲಿಂಗಪ್ಪ ಬ ಗುರೇಮಟ್ಟಿ ಮತ್ತು ಹಿರಿಯ ರೈತರಾದ ಬಸವರಾಜಪ್ಪ ನಾಗಪ್ಪ ಕಾಕೋಳ, ಇವರು ಉಪಸ್ಥಿತರಿದ್ದರು. ಈ ಕಾರ್ಯಾಕ್ರಮದಲ್ಲಿ ಸುಮಾರು 55 ಜನ ರೈತ ಹಾಗೂ ರೈತ ಮಹಿಳೆಯರು ಭಾಗವಹಿಸಿದ್ದರು.



**ರೈತ ದಿನಾಚರಣೆಯಂದು ಖುರ್ದು ವೀರಾಪುರದ ರೈತರಿಗೆ ಸಪೋಟ ಹಾಗೂ ಕರಿಬೇವು ಸಸಿಗಳನ್ನು ವಿತರಿಸಲಾಯಿತು**

## ಗ್ರಾಮ ಸಭೆ ಹಾಗೂ ಸ್ವಚ್ಚತಾ ಸಪ್ತಾಹ ಕಾರ್ಯಕ್ರಮ : ಖುರ್ದ ವೀರಾಪುರ

ದಿನಾಂಕ 27.12.2018 ರಂದು ಖುರ್ಧ ವೀರಾಪುರ ಗ್ರಾಮದಲ್ಲಿ ಗ್ರಾಮ ಸಭೆಯನ್ನು ಏರ್ಪಡಿಸಲಾಗಿತ್ತು. ಈ ಸಭೆಯಲ್ಲಿ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರಾದ ಡಾ. ಅಶೋಕ ಪಿ. ಯವರು ಮಾತನಾಡಿ ಕೃಷಿಯಲ್ಲಿ ತಾಂತ್ರಿಕತೆಗಳನ್ನು ಅಳವಡಿಸಿಕೊಳ್ಳುವುದರ ಬಗ್ಗೆ ಹಾಗೂ ಸ್ವಚ್ಚತಾ ಸಪ್ತಾಹದ ಬಗ್ಗೆ ತಿಳಿಸಿದರು, ಕೀಟಶಾಸ್ತ್ರ ವಿಭಾಗದ ವಿಜ್ಞಾನಿಯಾದ ಡಾ. ಕೆ. ಪಿ. ಗುಂಡನವರ ಮಾತನಾಡಿ ವಿವಿದ ಬೆಳೆಗಳಲ್ಲಿ ಬರುವ ಕೀಟ ಹಾಗೂ ರೋಗಗಳ ನಿರ್ವಹಣೆ ಬಗ್ಗೆ ತಿಳಿಸಿದರು ಮತ್ತು ಪರಿಸರ ಸ್ವಚ್ಚತೆ ಕಾಪಾಡಿಕೊಳ್ಳುವುದರ ಬಗ್ಗೆ ತಿಳಿಸಿದರು ಮತ್ತು ಖುರ್ಧ ವೀರಾಪುರ ಗ್ರಾಮದ ಪ್ರಗತಿಪರ ರೈತರಾದ ಸಿದ್ದಲಿಂಗಪ್ಪ ಗುರೇವ್ಮಟ್ಟಿಯವರು ಹಾಜರಿದ್ದರು ಹಾಗೂ ಇತರೆ ರೈತರು, ಮತ್ತು ಖುರ್ಧ ವೀರಾಪುರ ಗ್ರಾಮದ ಶಾಲೆಯ ಮಕ್ಕಳು ಮತ್ತಿತರರು ಪಾಲ್ಗೊಂಡಿದ್ದರು. ಯೋಜನಾ ಸಹಾಯಕರಾದ ಶ್ರೀಮತಿ ಅರ್ಚನಾ ಬಿ ಸಿ ಯವರು ನಿರೂಪಣೆ ಮಾಡಿದರು.



ಕೃಷಿಯಲ್ಲಿ ತಾಂತ್ರಿಕತೆಗಳ ಬಗ್ಗೆ ಚರ್ಚೆ



ಸ್ವಚ್ಛತಾ ಸಪ್ತಾಹ

## ಸಾವಯವ ಸಿರಿಧಾನ್ಯಗಳ ಕೃಷಿ ಮೇಳ

ದಿನಾಂಕ : 04.01.2019 ಮತ್ತು 05.02.2019 ರಂದು ಜಿಲ್ಲಾ ಮಟ್ಟದ ಸಾವಯವ ಸಿರಿಧಾನ್ಯಗಳ ಕೃಷಿ ಮೇಳವನ್ನು ಹಾವೇರಿ ಜಿಲ್ಲೆ ಹಿರೇಕೆರೂರ ತಾಲ್ಲೂಕಿನಲ್ಲಿ ಏರ್ಪಡಿಸಲಾಗಿತ್ತು. **ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯಿಂದ** ಕರ್ನಾಟಕ ಕೃಷಿ ಬೆಲೆ ಆಯೋಗ, ಬೆಂಗಳೂರು "ರೈತರ ಆದಾಯ ಮತ್ತು ಕಲ್ಯಾಣವೃದ್ಧಿ ಯೋಜನೆ"ಯಲ್ಲಿ ಆಯ್ಕೆಯಾದ ಖುರ್ದ ವೀರಾಪುರ ಗ್ರಾಮದ ರೈತರು ಹಾಗೂ ಎಲ್ಲಾ ತಾಲ್ಲೂಕಿನ ರೈತರು ಸಿರಿಧಾನ್ಯಗಳ ಕೃಷಿ ಮೇಳದಲ್ಲಿ ಪಾಲ್ಗೊಂಡಿದ್ದರು. ಈ ಕೃಷಿ ಮೇಳದಲ್ಲಿ ಎಲ್ಲಾ ತರಹದ ಸಿರಿ ಧಾನ್ಯಗಳನ್ನು (ರಾಗಿ, ಸಜ್ಜೆ, ನವಣೆ, ಬರಗು, ಕೊರಲೆ, ಹಾರಕ, ಸಾಮೆ, ಊದಲು) **ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ** ವತಿಯಿಂದ ಪ್ರದರ್ಶನಕ್ಕೆ ಇಡಲಾಗಿತ್ತು.

- ಸಿರಿಧಾನ್ಯಗಳು ಉತ್ತಮ ಪ್ರಮಾಣದ ಆ್ಯಂಟಿ ಆಕ್ಸಿಡೆಂಟ್‌ಗಳನ್ನು ಹೊಂದಿವೆ. ಇವುಗಳಿಗೆ ಕ್ಯಾನ್ಸರ್ ತಡೆಗಟ್ಟುವ ಗುಣ ಸಹ ಇರುತ್ತದೆ.
- ಸಿರಿಧಾನ್ಯಗಳು ರೋಗ ನಿರೋಧಕ ಶಕ್ತಿ ಹೆಚ್ಚಿಸುತ್ತವೆ ಹಾಗೂ ದೇಹದಲ್ಲಿ ಗಡ್ಡೆಗಳಾಗುವುದನ್ನು ತಡೆಯುತ್ತವೆ.
- ಕಡಿಮೆ ಗ್ಲೈಸಿಮಿಕ್ ಸೂಚ್ಯಾಂಕ ಹೊಂದಿರುವುದರಿಂದ ನಿಧಾನವಾಗಿ ಜೀರ್ಣವಾಗಿ ರಕ್ತದಲ್ಲಿನ ಸಕ್ಕರೆ ಪ್ರಮಾಣ ನಿಯಂತ್ರಿಸಲು ಸಹಾಯಮಾಡುತ್ತವೆ.
- ಇವುಗಳಲ್ಲಿರುವ ಒಮೆಗಾ–3 ಕೊಬ್ಬಿನ ಆಮ್ಲಗಳು ಫ್ಯಾಟಿ ಆಸಿಡ್ಸ್ ಹೃದಯ ರೋಗಿಗಳಿಗೆ ಸಹಕಾರಿಯಾಗಿವೆ.
- ಉತ್ತಮ ಖನಿಜಾಂಶಗಳನ್ನು ಹೊಂದಿರುವುದರಿಂದ ರಕ್ತದೊತ್ತಡ, ಅಸ್ತಮಾ, ಹೃದಯದ ತೊಂದರೆಗಳ ನಿವಾರಣೆಯಲ್ಲಿ ಸಹಾಯ ಮಾಡುತ್ತವೆ.
- ಈ ಧಾನ್ಯಗಳು ಉತ್ತಮ ಗುಣಮಟ್ಟದ ಅವಶ್ಯಕ ಅಮೈನೊ ಆಸಿಡ್ಸ್ ಹೊಂದಿವೆ.

- ಆಧುನಿಕ ಜೀವನ ಶೈಲಿಯಿಂದ ಬರುವ ರೋಗಗಳು ಮತ್ತು ರೋಗ ಲಕ್ಷಣಗಳನ್ನು ತಡೆಯುವಲ್ಲಿ ಈ ಧಾನ್ಯಗಳು ಪ್ರಮುಖ ಪಾತ್ರ ವಹಿಸುತ್ತವೆ. ಅದರಲ್ಲೂ ಬೊಜ್ಜುತನ, ಮಧುಮೇಹದಂತಹ ರೋಗಗಳಿಗೆ ಉತ್ತಮ ಆಹಾರ ಕ್ರಮಗಳಾಗಿವೆ.

| ಕ್ರಮ. ಸಂಖ್ಯೆ | ಸಿರಿ ಧಾನ್ಯಗಳು | ಮಹತ್ವ |
|---|---|---|
| 1 | ರಾಗಿ | ರಾಗಿಯಲ್ಲಿ ಹೆಚ್ಚು ನಾರಿನಂಶವಿದ್ದು, ದೇಹದಲ್ಲಿ ಕೊಲೆಸ್ಟ್ರಾಲ್ ಅಂಶವನ್ನು ಕಡಿಮೆ ಮಾಡಿ ತೂಕವನ್ನು ಇಳಿಸುತ್ತದೆ. ಸಿಹಿ ಮೂತ್ರ ರೋಗಿಗಳಿಗೆ ಉತ್ತಮ ಆಹಾರವಾಗಿದೆ ಹಾಗೂ ದೇಹವನ್ನು ತಂಪಾಗಿರಿಸುತ್ತದೆ. |
| 2 | ಸಜ್ಜೆ | ಖನಿಜಾಂಶ ಮತ್ತು ಲವಣಾಂಶ, ಜೀವಸತ್ವಗಳು ಹೆಚ್ಚಾಗಿರುವುದರಿಂದ ರಕ್ತದ ಒತ್ತಡದವರಿಗೆ ಒಳ್ಳೆಯ ಪರಿಣಾಮವನ್ನುಂಟು ಮಾಡುತ್ತದೆ. |
| 3 | ನವಣೆ | ನವಣೆ ಕಾಳಿನಲ್ಲಿ ಹೆಚ್ಚು ಸಸಾರಜನಕ, ಪಿಷ್ಠ, ಕೊಬ್ಬು, ನಾರಿನಂಶ, ಖನಿಜಾಂಶ, ಸುಣ್ಣ, ರಂಜಕ, ಕಬ್ಬಿಣ, ಸತು ಇವೆಲ್ಲಾ ಅಂಶಗಳಿರುವ್ಯದರಿಂದ ಉತ್ತಮ ಪೌಷ್ಠಿಕ ಆಹಾರವಾಗಿದೆ |
| 4 | ಹಾರಕ | ಇದರಲ್ಲಿ ಎಲ್ಲಾ ತರಹದ ಲವಣಾಂಶಗಳು ಹಾಗೂ ಖನಿಜಾಂಶಗಳಿರುವ್ಯದರಿಂದ ಜೀವಕೋಶಗಳಿಗೆ ಉತ್ಕರ್ಷಣೆಯಿಂದ ಹಾನಿ ಉಂಟಾಗುವುದನ್ನು ತಡೆಯುತ್ತದೆ. |
| 5 | ಊದಲು | ಊದಲು ಕಾಳಿನಲ್ಲಿ ಹೆಚ್ಚು ಸಸಾರಜನಕ, ಪಿಷ್ಠ , ಕೊಬ್ಬು, ಮತ್ತು ಲವಣಾಂಶಗಳಿರುವುದರಿಂದ ಉತ್ತಮ ಪೌಷ್ಠಿಕ ಆಹಾರವಾಗಿದೆ. ಕಾಳಿನಲ್ಲಿ ನಾರಿನ ಅಂಶ ಇತರೆ ಆಹಾರ ಧಾನ್ಯಗಳಿಗಿಂತ ಹೆಚ್ಚಾಗಿದ್ದು ರಂಜಕವು ಸಾಕಷ್ಟು ಪ್ರಮಾಣದಲ್ಲಿ ಇರುವುದು. |
| 6 | ಸಾವೆ | ಸಾಮೆಯ ಕಾಳಿನಲ್ಲಿ ಕಡಿಮೆ ಸಕ್ಕರೆ ಪ್ರಮಾಣ ,ಕ್ರಮೇಣ ಜೀರ್ಣವಾಗುವ ಶರ್ಕರ ಪಿಷ್ಟ (ಕಾರ್ಬೋಹೈಡ್ರೇಟ್ಸ್), ಹೆಚ್ಚಿನ ಪ್ರಮಾಣದ ಕೊಬ್ಬು, ಪಿಷ್ಟ, ಲವಣಾಂಶಗಳನ್ನು ಹೊಂದಿರುವುದು.ಕಾಳಿನಲ್ಲಿ ನಾರಿನಾಂಶ ಹೆಚ್ಚಾಗಿದ್ದು ಕ್ಯಾಲ್ಸಿಯಂ ಮತ್ತು ರಂಜಕವನ್ನು ಸಾಕಷ್ಟು ಪ್ರಮಾಣದಲ್ಲಿ ಹೊಂದಿದೆ. ಸಿಹಿ ಮೂತ್ರ ರೋಗಿಗಳಿಗೆ ಉತ್ತಮ ಆಹಾರವಾಗಿದೆ. |
| 7 | ಬರಗು | ಬರಗು ಒಂದು ಸತ್ವ ಪೂರ್ಣ ಬೆಳೆ. ಇದರಲ್ಲಿ ಸಸಾರಜನಕ, ಕೊಬ್ಬು, ಪಿಷ್ಠ ಮತ್ತು ಲವಣಾಂಶಗಳು ಸಮೃದ್ಧವಾಗಿದ್ದು ಹೆಚ್ಚು ನಾರಿನ ಅಂಶ, ರಂಜಕ ಹಾಗೂ ಥಯಾಮಿನ್‌ಗಳಿಂದ ಕೂಡಿದ ಉತ್ತಮ ಪೌಷ್ಠಿಕ ಆಹಾರ. |
| 8 | ಕೊರಲೆ | ದೇಹದಲ್ಲಿ ದಿನನಿತ್ಯ ನಡೆಯುವ ಅನೇಕ ಕಾರ್ಯಗಳು ಸುಗಮವಾಗಿ ಕಾರ್ಯಗತವಾಗಲು ಹಾಗೂ ಮಧುಮೇಹಿಗಳಿಗೆ ಕಾಯಿಲೆಯನ್ನು ಹತೋಟಿಯಲ್ಲಿಡಲು ಸಾಕಷ್ಟು ಉಪಯೋಗವಾಗುತ್ತದೆ. |

ಈ ಎಲ್ಲಾ ಸಿರಿಧಾನ್ಯಗಳ ಪ್ರಾಮುಖ್ಯತೆ, ಮಹತ್ವದ ಬಗ್ಗೆ ರೈತರಿಗೆ ತಿಳಿಸಲಾಯಿತು.





**ಆಧಿಕಾರಿಗಳೊಂದಿಗೆ ವಿವಿಧ ಸಿರಿ ಧಾನ್ಯಗಳ ಬಗ್ಗೆ ಚರ್ಚೆ**

## ಗ್ರಾಮ ಸಭೆ : ಖುರ್ದ ವೀರಾಪುರ

ದಿನಾಂಕ 28.01.2019 ರಂದು ಖುರ್ಧ ವೀರಾಪುರ ಗ್ರಾಮದಲ್ಲಿ ಗ್ರಾಮಸಭೆಯನ್ನು ಏರ್ಪಡಿಸಲಾಗಿತ್ತು. ಈ ಸಭೆಯಲ್ಲಿ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರಾದ ಡಾ. ಅಶೋಕ ಪಿ. ಯವರು ಮಾತನಾಡಿ ಬೀಜೋತ್ಪಾದಕ ಸಂಘ ರಚನೆ ಹಾಗೂ ಮುಂಚೂಣಿ ಪ್ರಾತ್ಯಕ್ಷಿತೆ ಕೈಗೊಳ್ಳುವುದರ ಬಗ್ಗೆ ರೈತರೊಂದಿಗೆ ಮಾತಾಡಿದರು. ಕೀಟಶಾಸ್ತ್ರ ವಿಭಾಗದ ವಿಜ್ಞಾನಿಯಾದ ಡಾ. ಕೆ. ಪಿ. ಗುಂಡನವರ ಮಾತನಾಡಿ ಹತ್ತಿ ಬೆಳೆಯಲ್ಲಿ ಬರುವ ಗುಲಾಬಿ ಕಾಯಿಕೋರಕದಿಂದ ಆಗುವ ಹಾನಿಯ ಲಕ್ಷಣಗಳು ಮತ್ತು ಜೈವಿಕ ಹಾಗೂ ರಾಸಾಯನಿಕ ಹತೋಟಿಯ ಕ್ರಮವನ್ನು ಸವಿಸ್ತಾರವಾಗಿ ವಿವರಿಸಿದರು.

ವಿವಿದ ಬೆಳೆಗಳಲ್ಲಿ ಬರುವ ಕೀಟ ಹಾಗೂ ರೋಗಗಳ ನಿರ್ವಹಣೆ ಬಗ್ಗೆ ತಿಳಿಸಿದರು. ಮಣ್ಣು ವಿಜ್ಞಾನಿಯಾದ ಡಾ. ಕುಮಾರ ಅವರು ಮಾತನಾಡಿ ನೀರು ಮತ್ತು ಮಣ್ಣಿನ ಮಾದರಿಯನ್ನು ಸಂಗ್ರಹಿಸುವ ಹಾಗೂ ಮಣ್ಣಿನ ಸಂರಕ್ಷಣೆ ಮತ್ತು ಫಲವತ್ತತೆಯನ್ನು ಹೇಗೆ ಕಾಪಾಡಿಕೊಳ್ಳಬೇಕೆಂಬ ವಿಷಯದ ಬಗ್ಗೆ ತಿಳಿಸಿದರು ಹಾಗೂ ಖುರ್ಧ ವೀರಾಪುರ ಗ್ರಾಮದ ಪ್ರಗತಿಪರ ರೈತರಾದ ಸಿದ್ದಲಿಂಗಪ್ಪ ಗುರೇವ್ಮಟ್ಟಿಯವರು ಹಾಜರಿದ್ದರು ಹಾಗೂ ಇತರೆ ರೈತರು ಮತ್ತಿತರರು ಪಾಲ್ಗೊಂಡಿದ್ದರು.





**ಗ್ರಾಮ ಸಭೆಯಲ್ಲಿ ಎರೆಹುಳು ಗೊಬ್ಬರ ಬಳಕೆಯ ಬಗ್ಗೆ ರೈತರೊಂದಿಗೆ ಚರ್ಚೆ**

## ಗ್ರಾಮ ಸಭೆ : ಖುರ್ದ ವೀರಾಪುರ

ದಿನಾಂಕ 05.02.2019 ರಂದು ಖುರ್ಧ ವೀರಾಪುರ ಗ್ರಾಮದಲ್ಲಿ ಗ್ರಾಮಸಭೆಯನ್ನು ಏರ್ಪಡಿಸಲಾಗಿತ್ತು. ಈ ಸಭೆಯಲ್ಲಿ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರಾದ ಡಾ. ಅಶೋಕ ಪಿ. ಯವರು ಮಾತನಾಡಿ ಎರೆಹುಳು ಗೊಬ್ಬರ ಬಳಕೆ ಮಾಡುವುದರಿಂದ ಆಗುವ ಅನುಕೂಲತೆಯ ಬಗ್ಗೆ ವಿವರವಾಗಿ ತಿಳಿಸಿದರು. ಕೀಟಶಾಸ್ತ್ರ ವಿಭಾಗದ ವಿಜ್ಞಾನಿಯಾದ ಡಾ. ಕೆ. ಪಿ. ಗುಂಡನವರ ಮಾತನಾಡಿ ಹತ್ತಿ ಮತ್ತು ಟೊಮ್ಯಾಟೋ ಬೆಳೆಗಳಲ್ಲಿ ಬರುವ ಕೀಟ ಹಾಗೂ ರೋಗಗಳ ನಿರ್ವಹಣೆ ಬಗ್ಗೆ ತಿಳಿಸಿದರು. ಹಾಗೂ ಖುರ್ಧ ವೀರಾಪುರ ಗ್ರಾಮದ ಪ್ರಗತಿಪರ ರೈತರಾದ ಸಿದ್ದಲಿಂಗಪ್ಪ ಗುರೇಮಟ್ಟಿಯವರು ಹಾಜರಿದ್ದರು ಹಾಗೂ ಇತರೆ ರೈತರು ಮತ್ತಿತರರು ಪಾಲ್ಗೊಂಡಿದ್ದರು.



# ರೈತರ ಆದಾಯ ಹಾಗೂ ಕಲ್ಯಾಣ ವೃದ್ಧಿ ಯೋಜನೆಯಲ್ಲಿ ಪ್ರಗತಿ ಪರಿಶೀಲನಾ ಸಭೆ

**(ಪ್ಲಸ್ ಟ್ರಸ್ಟ್ ತಂಡದ ಭೇಟಿ)**

ದಿನಾಂಕ 08.02.2019 ರಂದು ಕರ್ನಾಟಕ ಕೃಷಿ ಬೆಲೆ ಆಯೋಗ ಬೆಂಗಳೂರು ಇವರ ಪ್ರಾಯೋಜಿತ ಯೋಜನೆಯಾದ "ರೈತರ ಆದಾಯ ಹಾಗೂ ಕಲ್ಯಾಣ ವೃದ್ಧಿ ಯೋಜನೆಯಲ್ಲಿ" ಆಯ್ಕೆಯಾದ ಗ್ರಾಮ ಖುರ್ದುವೀರಾಪುರದ ಪ್ರಗತಿ ಪರಿಶೀಲನೆ ಕುರಿತು ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯಲ್ಲಿ ಸಭೆಯನ್ನು ಆಯೋಜಿಸಲಾಗಿತ್ತು. ಈ ಸಭೆಯಲ್ಲಿ ಡಾ. ಮುಕುಂದ್ ಜೋಷಿ , ನಿರ್ದೇಶಕರು, ಪ್ಲಸ್ಟ್ ಟ್ರಸ್ಟ್ ಬೆಂಗಳೂರು, ಇವರು ರೈತರ ಆಧಾಯವನ್ನು ಹೆಚ್ಚಿಸುವ ಹಾಗೂ ಸಮಗ್ರ ಕೃಷಿ ಪದ್ಧತಿಯ ಅಳವಡಿಕೆಯ ಮಹತ್ವದ ಬಗ್ಗೆ ಕುರಿತು ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಚರ್ಚಿಸಿದರು. ಹಾಗೂ ಬೇರೆ ಬೇರೆ ಇಲಾಖೆಯ ಆಧಿಕಾರಿಗಳು ತಮ್ಮ ಇಲಾಖೆಯಲ್ಲಿ ಲಭ್ಯವಿರುವ ಸೌಲಭ್ಯಗಳು ಹಾಗೂ ಅವುಗಳ ಬಗ್ಗೆ ಮಾಹಿತಿಯನ್ನು ಸಭೆಯಲ್ಲಿ ಹಂಚಿಕೊಂಡರು. ಈ ಕಾರ್ಯಕ್ರಮದಲ್ಲಿ ಡಾ. ಅಶೋಕ ಪಿ. ಮುಖ್ಯಸ್ಥರು ಹಾಗೂ ಹಿರಿಯ ವಿಜ್ಞಾನಿ ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ ಇವರು ಸಹ ಸಭೆಯ ಬಗ್ಗೆ ಎಲ್ಲಾ ಅಧಿಕಾರಿಗಳೊಂದಿಗೆ ಚರ್ಚಿಸಿದರು ಮತ್ತು ಕೃಷಿ, ತೋಟಗಾರಿಕಾ, ಪಶು, ಅರಣ್ಯ, ಆರೋಗ್ಯ ಹಾಗೂ ಇತರೆ ಇಲಾಖೆಯ ಅಧಿಕಾರಿಗಳು ಹಾಗೂ ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯ ಎಲ್ಲಾ ಸಿಬ್ಬಂದಿ ವರ್ಗದವರು ಸಹ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.



**ಪ್ಲಸ್ಟ್ ಟ್ರಸ್ಟ್ ತಂಡದ ಬೇಟಿ**



**ಪ್ರಗತಿ ಪರಿಶೀಲನಾ ಸಭೆ**

**ಮುಂಚೂಣಿ ಪ್ರಾತ್ಯಕ್ಷಿತೆಗಳು :**

## 1.ಟೊಮ್ಯಾಟೋ ಬೆಳೆಯಲ್ಲಿ ವೆಜಿಟೇಬಲ್ ಸ್ಪೆಷಲ್ ಬಳಕೆ

ಕೃಷಿ ವಿಜ್ಞಾನ ಕೇಂದ್ರ ಹನುಮನಮಟ್ಟಿ ವತಿಯಿಂದ 27-02-2019 ಖುರ್ಧ ವೀರಾಪುರ ಗ್ರಾಮದ ಆರುಜನ ರೈತರಿಗೆ ಟೊಮ್ಯಾಟೊ ಬೆಳೆಯಲ್ಲಿ ಮೂಂಚೂಣಿ ಪ್ರಾತ್ಯೆಕ್ಷಿಕೆಯನ್ನು ನೀಡಲಾಗಿತ್ತು. ಈ

ಪ್ರಾತ್ಯಕ್ಷಿತೆಯಲ್ಲಿ ಲಘು ಪೋಷಕಾಂಶಗಳ ನಿರ್ವಹಣೆಗೆ ವೆಜಿಟೇಬಲ್ ಸ್ಪೆಷಲ್‌ನ್ನು ಸಿಂಪರಣೆ ಮಾಡಿಸಿ ಅದರ ಮಹತ್ವದ ಬಗ್ಗೆ ಡಾ. ಕುಮಾರ ಮಣ್ಣು ವಿಜ್ಞಾನಿಗಳು ರೈತರಿಗೆ ತಿಳಿಸಿಕೊಟ್ಟರು.

## ವೆಜಿಟೇಬಲ್ ಸ್ಪೆಷಲ್‌ನ ಉಪಯೋಗಗಳು:

1. ವೆಜಿಟೇಬಲ್ ಸ್ಪೆಷಲ್‌ನ್ನು ಎಲ್ಲಾ ತರಹದ ತರಕಾರಿ ಬೆಳೆಗಳಿಗೆ ಶಿಫಾರಸ್ಸು ಮಾಡಲಾಗುತ್ತದೆ.
2. ಇದನ್ನು ಯಾವುದೇ ಶಿಲೀಂಧ್ರನಾಶಕ ಅಥವಾ ಕೀಟನಾಶಕಗಳೊಂದಿಗೆ ಸೇರಿಸಿ ಬೆಳೆಗಳಿಗೆ ಹಾಕಬಹುದು.
3. ಇದರಲ್ಲಿ ಲಘು ಪೋಷಕಾಂಶಗಳಾದ ಸತು, ಬೋರಾನ, ಕಬ್ಬಿಣ, ತಾಮ್ರ, ಮ್ಯಾಂಗನೀಸ್, ಮಾಲಿಬ್ಡಿನಂ, ಕ್ಲೋರಿನ್ ಇರುತ್ತದೆ.
4. ಇದರಲ್ಲಿ ಮಧ್ಯಮ ಪೋಷಕಾಂಶಗಳಾದ ಕ್ಯಾಲ್ಸಿಯಂ, ಮ್ಯಾಂಗನೀಸ್, ಸಲ್ಫರ್ ಮತ್ತು ಪೋಟ್ಯಾಷ್ ಇರುತ್ತದೆ.
5. ಇದನ್ನು ಉಪಯೋಗಿಸುವ್ಯದರಿಂದ ತರಕಾರಿ ಹಣ್ಣುಗಳ ಗುಣಮಟ್ಟ ಅಂದರೆ, ಹಣ್ಣಿನ ಮೇಲ್ಮೈ ಲಕ್ಷಣಗಳು, ಶೇಕರಣಾವಧಿ ಹಾಗೂ ರುಚಿಯನ್ನು ಕಾಪಾಡುತ್ತದೆ.



ಟೊಮ್ಯಾಟೋ ಬೆಳೆಯಲ್ಲಿ ವೆಜಿಟೇಬಲ್ ಸ್ಪೆಷಲ್ ಸಿಂಪರಣೆ



ರೈತರೊಂದಿಗೆ ಮಣ್ಣು ವಿಜ್ಞಾನಿಗಳ ಚರ್ಚೆ

**ರೈತರ ಫಲಾನುಭವಿಗಳ ಪಟ್ಟಿ ;**

| ಕ್ರಮ. ಸಂಖ್ಯೆ | ರೈತರ ಹೆಸರು | ಲಿಂಗ | ವಯ್ಯಸ್ಸು | ಉದ್ಯೋಗ | ಜಾತಿ |
|---|---|---|---|---|---|
| 1 | ಪರಸಪ್ಪ ಕಾಕೋಳ | ಗಂಡು | 45 | ಕೃಷಿ | ಸಾಮಾನ್ಯ |
| 2 | ರೇವಣಸಿದ್ದಪ್ಪ ಪೂಜಾರ | ಗಂಡು | 49 | ಕೃಷಿ | ಎಸ್ ಟಿ |
| 3 | ಹೊನ್ನಪ್ಪ ಪೂಜಾರ | ಗಂಡು | 52 | ಕೃಷಿ | ಎಸ್ ಟಿ |
| 4 | ಬಸವರಾಜಪ್ಪ ಕಾಕೋಳ | ಗಂಡು | 58 | ಕೃಷಿ | ಸಾಮಾನ್ಯ |
| 5 | ಮಂಜಪ್ಪ ಮಾದರ | ಗಂಡು | 45 | ಕೃಷಿ | ಎಸ್ ಸಿ |
| 6 | ನಾಗರಾಜಪ್ಪ ಗುರೇಮಟ್ಟಿ | ಗಂಡು | 48 | ಕೃಷಿ | ಸಾಮಾನ್ಯ |

## ತಿಪ್ಪೆ ಗೊಬ್ಬರದ ಮೂಂಚೂಣಿ ಪ್ರಾತ್ಯೆಕ್ಷಿಕೆ

ಕೃಷಿ ವಿಜ್ಞಾನ ಕೇಂದ್ರ ಹನುಮನಮಟ್ಟಿ ವತಿಯಿಂದ 02–03–2019 ರಂದು ಖುರ್ದ ವೀರಾಪುರ ಗ್ರಾಮದ ಹತ್ತು ಜನ ರೈತರಿಗೆ ತಿಪ್ಪೆ  ಗೊಬ್ಬರದ ಮೂಂಚೂಣಿ ಪ್ರಾತ್ಯೆಕ್ಷಿಕೆಯನ್ನು ನೀಡಲಾಗಿತ್ತು. ಈ ಪ್ರಾತ್ಯಕ್ಷಿತೆಯಲ್ಲಿ ತಿಪ್ಪೆ ಗೊಬ್ಬರದ ಅನುಕೂಲ ಮತ್ತು ಇದರ ಉಪಯುಕ್ತತೆಗಳಾದ ಕೃಷಿಯ ತ್ಯಾಜ್ಯ ವಸ್ತುಗಳನ್ನು ಮತ್ತು ಶಗಣಿ, ಗಂಜಲ ಇದನ್ನು ಮರುಬಳಕೆ ಮಾಡುವುದರ ಮೂಲಕ ತಿಪ್ಪೆ ಗೊಬ್ಬರಕ್ಕೆ ಕಾಂಪೋಸ್ಟ್ ಕಲ್ಚರ ಹಾಕಿ ತಯಾರಿಸುವ ಮಾಹಿತಿಯನ್ನು ರೈತರಿಗೆ ಪ್ರಾತ್ಯೆಕ್ಷಿಕೆಯ ಮೂಲಕ ತಿಳಿಸಿಕೊಡಲಾಯಿತು. ಈ ಕಾಂಪೋಸ್ಟ್ ಕಲ್ಚರನ್ನು ಉಪಯೋಗಿಸುವುದರಿಂದ ಮಣ್ಣಿನ ಆರೋಗ್ಯ ಸುಧಾರಿಸಿ, ಮಣ್ಣಿನಲ್ಲಿ ಸಾವಯವ ಅಂಶ ಹೆಚ್ಚಾಗಿ ಬೆಳೆಗಳ ಬೆಳವಣಿಗೆ ವೃದ್ಧಿಯಾಗಿ, ಇಳುವರಿ ಹೆಚ್ಚಾಗುತ್ತದೆ ಎಂದು ಹಾಗೂ ತಿಪ್ಪೆ ಗೊಬ್ಬರದ ನಿರ್ವಹಣೆ ಮತ್ತು ಅದನ್ನು ಬಳಕೆ  ಮಾಡುವುದರ ಬಗ್ಗೆ ಡಾ. ಶಿವಮೂರ್ತಿ ಬೇಸಾಯ ಶಾಸ್ತ್ರ ವಿಜ್ಞಾನಿ ಮೂಂಚಣಿ ಪ್ರಾತ್ಯೆಕ್ಷಿಕೆಯಲ್ಲಿ ತಿಳಿಸಿಕೊಟ್ಟರು.




ರೈತರೊಂದಿಗೆ ತಿಪ್ಪೆ ಗೊಬ್ಬರದ ಪ್ರಾತ್ಯಕ್ಷಿತೆ ಹಾಗೂ ಬೇಸಾಯ ಶಾಸ್ತ್ರ ವಿಜ್ಞಾನಿಗಳಿಂದ ರೈತರಿಗೆ ಮಾಹಿತಿ

**ತಿಪ್ಪೆ ಗೊಬ್ಬರ ತಯಾರಸುವ ವಿಧಾನ :**

ಉಪಯೋಗಿಸುವ ಸಾವಯವ ಪದಾರ್ಥಗಳು : ಸಹಣಿ, ಕೋಳಿ ತ್ಯಾಜ್ಯ, ಹುಲ್ಲು, ಹಸಿರೆಲೆ, ವಿವಿಧ ಕಳೆ, ಬೆಳೆಗಳ  ಅವಶೇಷ ಮುಂತಾದವುಗಳು.

ಕೃಷಿ ಉತ್ಪನ ಅವಂಬಿಸಿರುವ ಕಾರ್ಖಾನೆಗಳ ತ್ಯಾಜ್ಯ ವಸ್ತುಗಳಾದ (ಅಗ್ರೋ ಇಂಡಸ್ಟ್ರಿಯಲ್ ವೇಸ್ಟ್) ಸಕ್ಕರೆ ಕಾರ್ಖಾನೆಯ ಪ್ರೆಸ್‌ಮಡ್ ,ತೆಂಗಿನ ಹುಡಿ, ರೇಷ್ಮೆ ಹುಳುವಿನ ಅವಶೇಷ, ಅಡಿಕೆ ಸಿಪ್ಪೆ ಮತ್ತು ಪಟ್ಟಣಗಳಲ್ಲಿ ದೊರೆಯುವ ತ್ಯಾಜ್ಯವಸ್ತುಗಳು ಮತ್ತು ಹಣ್ಣು ತರಕಾರಿ ಉಳಿಕೆಗಳು ಇತ್ಯಾದಿ.

ವಿಧಾನ: ಮೊದಲು ಸಾವಯವ ವಸ್ತುಗಳನ್ನು ಶೇಕರಿಸಿಕೊಳ್ಳಲು ಈ ಕ್ರೋಢೀಕರಿಸಿದ ಸಾವಯವ ವಸ್ತುಗಳನ್ನು ಪದರ ಪದರವಾಗಿ ಹರಡಬೇಕು. ಸಾವಯವ ವಸ್ತುಗಳನ್ನು ತುಂಬುವಾಗ ಕೆಳಭಾಗದಲ್ಲಿ ಅಂದರೆ ಮೊದಲನೆಯ ಪದರದಲ್ಲಿ ಶೀಘ್ರ ವಿಭಜನೆಗೆಯಾಗದ ಸಾವಯವ ಪದಾರ್ಥಗಳನ್ನು ಹರಡಬೇಕು (ಒಣ ಹುಲ್ಲು, ತೆಂಗಿನ ನಾರು,ಸೋಗೆ, ನೆಲಗಡಲೆ ಸಿಪ್ಪೆ, ಅಕ್ಕಿ ಹೊಟ್ಟು ಮುಂತಾದವುಗಳು). ಇವುಗಳಲ್ಲಿ ಲಿಗ್ನಿನ ಅಂಶ ಹೆಚ್ಚಿನ ಪ್ರಮಾಣದಲ್ಲಿರುತ್ತದೆ. ಇವುಗಳವ ಮೇಲೆ ಎರಡನೇ ಪದರಾಗಿ ಸಾಮಾನ್ಯವಾಗಿ ಗಟ್ಟಿಯಾದ ಮತ್ತು ಒಣಗಿದ ಸಾವಯವ  ವಸ್ತುಗಳನ್ನು ಹರಡಬೇಕು. ಈ ಪದರದ ಮೇಲೆ ಸಗಣಿ, ಗಂಜಲ ಇವುಗಳನ್ನು ನೀರಿನಲ್ಲಿ ಕಲಿಸಿ ಸಮನಾಗಿ ಸಿಂಪಡಿಸಬೇಕು, ಇವುಗಳ ಮೇಲೆ ಪ್ರತಿ ಟನ್ ಕೃಷಿ ತ್ಯಾಜ್ಯಕ್ಕೆ 1

ರಿಂದ 2 ಕೆಜಿ ಕಾಂಪೋಸ್ಟ್ ಜೀವಿಗಳ ಮಿಶ್ರಣವನ್ನು 10 ರಿಂದ 15 ಲೀಟರ್ ನೀರಿನಲ್ಲಿ ಬೆರೆಸಿ ಬಳಸಬೇಕು. ದನಗಳ ಸಗಣಿ ದೊರೆಯುವ ಸಂದರ್ಭದಲ್ಲಿ 2 ಕೆಜಿ ಸಗಣಿ ಗಂಜಲವನ್ನು ನೀರಿನೊಂದಿಗೆ ಬೆರೆಸಿ ಉಪಯೋಗಿಸುವದರಿಂದ ಸೂಕ್ಷ್ಮಾಣು ಜೀವಿಗಳು ಬೇಗನೆ ವೃದ್ಧಿಯಾಗಿ ಕಳೆಯುವುದಕ್ಕೆ ಸಹಾಯವಾಗುತ್ತದೆ. ಇವುಗಳ ಮೇಲಿನ ಪದರವಾಗಿ ಹಸಿರೆಲೆ, ಕಳೆ ಅಥವಾ ಹಸಿರೆ ಗೊಬ್ಬರ ಗಿಡಗಳನ್ನು ಹರಡಬೇಕು. ಇವು ಸಾಮಾನ್ಯವಾಗಿ ಹೆಚ್ಚಿನ ಸಾರಜನಕವನ್ನು ಹೊಂದಿರುತ್ತವೆ. ಈ ವಿಧಾನದಲ್ಲಿ ಅನೇಕ ಪದರಗಳನ್ನು 30 ರಿಂದ 40 ಸೆಂ.ಮೀ. ಎತ್ತರಕ್ಕೆ ಹರಡಬೇಕು. ಕೊನೆಯ ಅಥವಾ ಮೇಲಿನ ಪದರವಾಗಿ ಸಗಣಿಯ ಬಗ್ಗಡದಿಂದ ತೆಳುವಾಗಿ ಸಾರಿಸಿ ಸೂಕ್ಷ್ಮ ಜೀವಿಗಳ ಪರಿವರ್ತನೆಗೆ ಬಿಡಬೇಕು. 30 ದಿನಗಳ ನಂತರ ಪದರಗಳನ್ನು ಗಾಳಿಯಾಡಲು ತಿರುವಿ ಹಾಕಬೇಕು. ಸಾಮಾನ್ಯವಾಗಿ ಈ ಕಾಂಪೋಸ್ಟ್ ತಯಾರಿಕೆಯ ಅವಧಿ 90 ರಿಂದ 120 ದಿವಸಗಳವರೆಗೂ ಆಗುತ್ತದೆ.ಈ ಅವಧಿಯಲ್ಲಿ 3 ರಿಂದ 4 ಸಲ ಪದರವನ್ನು ತಿರುವಿ ಹಾಕಬೇಕಾಗುತ್ತದೆ. ಈ ಅವಧಿಯ ನಂತರ ಚೆನ್ನಾಗಿ ಕಳೆತ ಸಸ್ಯ ಪೋಷಕಾಂಶ ಹೆಚ್ಚಿರುವ ಕಾಂಪೊಸ್ಟ್ ಲಭ್ಯವಾಗುತ್ತದೆ.

ಚೆನ್ನಾಗಿ ಮಾಗಿರುವ ಕಾಂಪೋಸ್ಟ್ ಗೊಬ್ಬರವನ್ನು ಗುರುತಿಸಿ ಬೆಳೆಗಳಿಗೆ ಉಪಯೋಗಿಸುವುದು ಉತ್ತಮ, ಇಲ್ಲದಿದ್ದರೆ ಬೆಳೆಗಳಿಗೆ ಹಾನಿ. ಚೆನ್ನಾಗಿ ಮಾಗಿರುವ ಕಾಂಪೋಸ್ಟ್ ಗೊಬ್ಬರದಲ್ಲಿ ಉಷ್ಣಾಂಶವು ಸ್ಥಿರವಾಗಿರುತ್ತವೆ. ಹಾಗೂ ದುರ್ವಾಸನೆ ಇರುವುದಿಲ್ಲ. ಬಣ್ಣ ಕಂದುಯುಕ್ತ ಕಪ್ಪು ಅಥವಾ ಕಪ್ಪು, ರಸಸಾರ 7 ರ ಹತ್ತಿರವಿರುತ್ತದೆ ಹಾಗೂ ಇಂಗಾಲ ಮತ್ತು ಸಾರಜನಕ ಅನುಪಾತ 1:20 ಕ್ಕಿಂತ ಕಡಿಮೆ ಇರುತ್ತದೆ. ಮಾಗಿದ ಕಾಂಪೋಸ್ಟ್‌ನ್ನು ತೇವಾಂಶವಿಲ್ಲದ ಹಾಗೂ ತಂಪಾಗಿರುವ ಪ್ರದೇಶಗಳಲ್ಲಿ ಶೇಕರಿಸಿಡಬೇಕು.

## ಕಾಂಪೋಸ್ಟ್ ಕಲ್ಚರ್ ಬಳಸುವುದರಿಂದ ಆಗುವ ಲಾಭಗಳು:

1. ಸಾವಯವ ಪದಾರ್ಥಗಳು ಅಥವಾ ತ್ಯಾಜ್ಯ ವಸ್ತುಗಳು ನಾಲ್ಕು ಶಿಲೀಂದ್ರಗಳ ( ಪ್ಲೊರೋಟಸ್, ಟ್ರೈಕೋಡರ್ಮಾ, ಫೆನಿರೊಕೀಟ್, ಅಸ್ಪರಜಿಲಸ್) ಕ್ರಿಯೆಯಿಂದ ಸಮನಾಗಿ ಮತ್ತು ಶೀಘ್ರವಾಗಿ ವಿಘಟನೆಯಾಗುತ್ತವೆ. ಈ ಉಪಚಾರದಿಂದ 3 ರಿಂದ 4 ತಿಂಗಳಲ್ಲಿ ಉತ್ತಮ ಕಾಂಪೋಸ್ಟ್ ಗೊಬ್ಬರ ತಯಾರಾಗುವುದು ಮತ್ತು ಬೆಳೆಗಳ ಉಳಿಕೆಗಳನ್ನು ಹೊಲ/ಕ್ಷೇತ್ರದಲ್ಲಿಯೇ ಗೊಬ್ಬವಾಗಿ ಮಾಡಲು ಬಹಳ ಉಪಯುಕ್ತವಾದ ವಿಧಾನವಾಗಿರುತ್ತದೆ.
2. ಕಾಂಪೋಸ್ಟಿನ ಗುಣಮಟ್ಟ ಸುಧಾರಿಸಿ ಅದರಲ್ಲಿನ ಪೋಷಕಾಂಶಗಳ ಪ್ರಮಾಣ ಹೆಚ್ಚುವುದು.
3. ಸಾವಯವ ಅಥವಾ ತ್ಯಾಜ್ಯವಸ್ತುಗಳು ಸಂಪೂರ್ಣವಾಗಿ ವಿಘಟನೆ ಹೊಂದಿ, ದುರ್ವಾಸನೆ ರಹಿತ ಉತ್ತಮ ಸಾವಯವ ಗೊಬ್ಬರವಾಗಿ ಪರಿವರ್ತನೆ ಹೊಂದುವುದು.
4. ರೋಗಾಣುಗಳ ಸಂಖ್ಯೆಯನ್ನು ನಿಯಂತ್ರಿಸಿ, ಉಪಯುಕ್ತ ಜೀವಾಣುಗಳ ಸಂಖ್ಯೆಯನ್ನು ವೃದ್ಧಿಸಿ, ಮಣ್ಣಿನ ಆರೋಗ್ಯ, ನೀರಿನ ಸಂಗ್ರಹಣೆ ಹಾಗೂ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಿ ಬೆಳೆಗಳ ಇಳುವರಿಯನ್ನು ಹೆಚ್ಚಿಸುತ್ತದೆ.

**ರೈತರ ಫಲಾನುಭವಿಗಳ ಪಟ್ಟಿ**

| ಕ್ರಮ.ಸಂಖ್ಯೆ | ರೈತರ ಹೆಸರು | ಲಿಂಗ | ವಯ್ಯಸ್ಸು | ಉದ್ಯೋಗ | ಜಾತಿ |
|---|---|---|---|---|---|
| 1 | ಹೊನ್ನಮ್ಮ ಲಚ್ಚಪ್ಪನವರ | ಹೆಣ್ಣು | 53 | ಕೃಷಿ | ಎಸ್ ಟಿ |
| 2 | ಗಿರಿಜವ್ವ ಹರಿಜನ | ಹೆಣ್ಣು | 35 | ಕೃಷಿ | ಎಸ್ ಸಿ |
| 3 | ಸಾವಿತ್ರವ್ವ ದ್ಯಾವಣ್ಣವರ | ಹೆಣ್ಣು | 40 | ಕೃಷಿ | ಎಸ್ ಟಿ |
| 4 | ಪರಮೇಶಪ್ಪ ಗುರೇಮಟ್ಟಿ | ಗಂಡು | 48 | ಕೃಷಿ | ಸಾಮಾನ್ಯ |
| 5 | ರಾಮಪ್ಪ ಕಂಚಣ್ಣವರ | ಗಂಡು | 45 | ಕೃಷಿ | ಸಾಮಾನ್ಯ |
| 6 | ಯಲ್ಲಪ್ಪ ನಾಗಪ್ಪ ಕಾಕೋಳ | ಗಂಡು | 43 | ಕೃಷಿ | ಸಾಮಾನ್ಯ |
| 7 | ಮಲ್ಲಪ್ಪ ಗಣಜೂರ | ಗಂಡು | 40 | ಕೃಷಿ | ಎಸ್ ಟಿ |
| 8 | ನಾಗರಾಜ ಕೋಯರ | ಗಂಡು | 45 | ಕೃಷಿ | ಸಾಮಾನ್ಯ |
| 9 | ರಾಮಪ್ಪ ಪೂಜಾರ | ಗಂಡು | 57 | ಕೃಷಿ | ಎಸ್ ಟಿ |
| 10 | ರಾಮಪ್ಪ ಗುರೇಮಟ್ಟಿ | ಗಂಡು | 47 | ಕೃಷಿ | ಸಾಮಾನ್ಯ |

## 2.ಪೌಷ್ಠಿಕ ಕೈತೋಟ ಪ್ರಾತ್ಯಕ್ಷಿಕೆ

ದಿನಾಂಕ : 11.02.2019 ರಂದು ಖುರ್ದ ವೀರಾಪುರ ಶಾಲೆಯ ಆವರಣದಲ್ಲಿ ಕಿಚನ್ ಗಾರ್ಡನ್ (ನ್ಯೂಟ್ರೀಷನ್ ಗಾರ್ಡನ್) ಮುಂಚೂಣಿ ಪ್ರಾತ್ಯಕ್ಷಿತೆಯನ್ನು ಕೈಗೊಳ್ಳಲಾಗಿತ್ತು ಇದಕ್ಕಾಗಿ 8 ತರಹದ ತರಕಾರಿ (ಮೆಣಸಿನಕಾಯಿ, ಹುಲಿಚ್ಚಿಕ್,ರಾಜಗಿರಿ,ಮೂಲಂಗಿ,ಈರುಳ್ಳಿ,ಟೊಮ್ಯಾಟೊ,ಪಾಲಕ್,ಮೆಂತ್ಯೆ) ಬೀಜಗಳನ್ನು ಬಿತ್ತನೆ ಮಾಡಲಾಗಿತ್ತು. ಹಾಗೂ ವಿವಿಧ ತರಕಾರಿ ಬೆಳೆಗಳನ್ನು ಬೆಳೆಯುವುದರಿಂದ ಸಿಗುವ ಎಲ್ಲಾ ಪೋಷಕಾಂಶಗಳ ಬಗ್ಗೆ ಮಾಹಿತಿ ನೀಡಿ, ಅವುಗಳ ಪೋಷಣೆ ಮತ್ತು ಸರಿಯಾದ ಪ್ರಮಾಣ ಹಾಗೂ ಸರಿಯಾದ ವೇಳೆಗೆ ನೀರು ಹಾಯಿಸುವುದರ ಬಗ್ಗೆ ಹಾಗೂ ನಿರ್ವಹಣೆಯ ಬಗ್ಗೆ ತಿಳಿಸಿಕೊಡಲಾಯಿತು.

**ಪೌಷ್ಠಿಕ ಕೈತೋಟದ ಪ್ರಾಮುಖ್ಯತೆ:**

ಮನೆಯ ಅಥವಾ ಶಾಲೆಯ ಹಿಂಭಾಗದಲ್ಲಿ ಅಥವಾ ಮುಂಭಾಗದಲ್ಲಿ ಸ್ಥಳವನ್ನು ಉಪಯೋಗಿಸಿ ನಮಗೆ ಬೇಕಾಗುವ ತರಕಾರಿ ಮತ್ತು ಹಣ್ಣುಗಳನ್ನು ಬೆಳೆಸುವುದೇ ಪೌಷ್ಠಿಕ ಕೈತೋಟ, ದೈನಂದಿನ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸಲು ಒಬ್ಬ ಮನುಷ್ಯ ದಿನಕ್ಕೆ 300 ಗ್ರಾಂ ತರಕಾರಿಗಳನ್ನು, 90 ಗ್ರಾಂ ಹಣ್ಣುಗಳನ್ನು ಸೇವಿಸಬೇಕು. ಇತ್ತೀಚಿನ ದಿನಗಳಲ್ಲಿ ಮಾರುಕಟ್ಟೆಯಲ್ಲಿ ತರಕಾರಿಗಳ ಬೆಲೆ ದುಬಾರಿಯಾಗಿದ್ದು, ತಾಜಾತನದಿಂದ ಕೂಡಿರುವುದಿಲ್ಲ. ಆದ್ದರಿಂದ ಕಡಿಮೆ ಖರ್ಚಿನಲ್ಲಿ ಸ್ವಲ್ಪ ಸ್ಥಳಾವಕಾಶದಲ್ಲಿ ಉತ್ಕೃಷ್ಟ ಮತ್ತು ಅಧಿಕ ಪೌಷ್ಠಿಕತೆಯ ತರಕಾರಿಗಳ ಉತ್ಪಾದನೆ ಬಹಳ ಮಹತ್ವವೆನಿಸಿಕೊಂಡಿದೆ. ದಿನ ದಿನಕ್ಕೆ ಹೆಚ್ಚುತ್ತಿರುವ ತರಕಾರಿಗಳ ಬೆಳೆಗಳು ಜನಜೀವನ ನಿರ್ವಹಣೆಯನ್ನು ಸಂಕಷ್ಟಕ್ಕೀಡು ಮಾಡಿವೆ. ಇಚಿತಹ ಸನ್ನಿವೇಶಗಳಲ್ಲಿ ಇದ್ದಷ್ಟು ಜಾಗದಲ್ಲಿ ಪೌಷ್ಠಿಕ ಕೈತೋಟದ ನಿರ್ಮಾಣ ದುರ್ಬಲ ವರ್ಗದವರಿಗೆ ಆರ್ಥಿಕವಾಗಿ ಮತ್ತು ಆರೋಗ್ಯ ದೃಷ್ಠಿಯಿಂದ ನೆರವಾಗಬಲ್ಲದು.





ಖುರ್ದ ವೀರಾಪುರ ಶಾಲೆಗೆ ತರಕಾರಿ ಬೀಜಗಳ ವಿತರಣೆ ಹಾಗೂ ಕಿಚನ್ ಗಾರ್ಡನ್ ಪ್ರಾತ್ಯಕ್ಷಿತೆ

# ಬೀಜೋತ್ಪಾದಕ ಸಂಘ ರಚನೆಗೆ ಆಯ್ದ ಫಲಾನುಭವಿ ರೈತರ ಪಟ್ಟಿ

| ಕ್ರ.ಸಂ | ರೈತರ ಹೆಸರು | ದೂರವಾಣಿ ಸಂಖ್ಯೆ | ಲಿಂಗ | ವಯಸ್ಸು | ಜಾತಿ | ವಿದ್ಯಾರ್ಹತೆ |
|---|---|---|---|---|---|---|
| 1 | ಸಿದ್ದಲಿಂಗಪ್ಪ ಬ ಗುರೇಮಟ್ಟಿ | 9901283473 | ಗಂ | 39 | ಸಾಮಾನ್ಯ | ಪಿಯುಸಿ |
| 2 | ದ್ಯಾಮಪ್ಪ ಸತ್ಯಪ್ಪ ಹಳ್ಳಳ್ಳಿ | 9972294278 | ಗಂ | 45 | ಎಸ್ ಟಿ | ಆರನೇ ತರಗತಿ |
| 3 | ಬಸವರಾಜಪ್ಪ ನಾಗಪ್ಪ ಕಾಕೋಳ | 9880637020 | ಗಂ | 55 | ಸಾಮಾನ್ಯ | ಐದನೇ ತರಗತಿ |
| 4 | ಅರವಿಂದಪ್ಪ ತಿರುಕಪ್ಪ ಮಣ್ಣಬಸಣ್ಣವರ | 9591880724 | ಗಂ | 42 | ಎಸ್ ಟಿ | ಬಿಕಾಂ |
| 5 | ವಿನಾಯಕ ಪಾಟೀಲ | – | ಗಂ | 22 | ಸಾಮಾನ್ಯ | ಪಿಯುಸಿ |
| 6 | ಪರಸಪ್ಪ ಚನ್ನಬಸಪ್ಪ ಕಾಕೋಳ | 9731528642 | ಗಂ | 55 | ಸಾಮಾನ್ಯ | ಐದನೇ ತರಗತಿ |
| 7 | ಗಿರಿಜಮ್ಮ ಚಂದ್ರಪ್ಪ ಮಾದರ | – | ಹೆ | 43 | ಎಸ್ ಸಿ | ಐದನೇ ತರಗತಿ |
| 8 | ರೇಣುಕಮ್ಮ ಕೆಂಚಣ್ಣವರ | – | ಹೆ | 59 | ಸಾಮಾನ್ಯ | ಐದನೇ ತರಗತಿ |
| 9 | ಶಂಬಣ್ಣ ನಿಂಗಪ್ಪ ಗುರೇಮಟ್ಟಿ | 9008632950 | ಗಂ | 59 | ಸಾಮಾನ್ಯ | ಐದನೇ ತರಗತಿ |
| 10 | ರೇವಣಪ್ಪ ಶಿವಪುತ್ರಪ್ಪ ಗುರೇಮಟ್ಟಿ | 9611521904 | ಗಂ | 34 | ಸಾಮಾನ್ಯ | ಪಿಯುಸಿ |
| 11 | ಮಂಜಪ್ಪ ಸುಭಾಷ ಮಾದರ | 9900905168 | ಗಂ | 27 | ಎಸ್ ಸಿ | ಐದನೇ ತರಗತಿ |
| 12 | ಮಲ್ಲಪ್ಪ ನಾಗಪ್ಪ ಗಣಜೂರ | 9731065849 | ಗಂ | 45 | ಎಸ್ ಟಿ | ಎಸ್ಎಸ್ ಎಲ್ ಸಿ |
| 13 | ಕೃಷ್ಣಪ್ಪ ಅಡಿವೆಪ್ಪ ಗಣಜೂರ | 9535397383 | ಗಂ | 32 | ಎಸ್ ಟಿ | ಬಿಎ |
| 14 | ಹನುಮಂತಪ್ಪ ನಾಗಪ್ಪ ಗಣಜೂರ | – | ಗಂ | 50 | ಎಸ್ ಟಿ | ಐದನೇ ತರಗತಿ |
| 15 | ಹೊನ್ನಪ್ಪ ನಾಗಪ್ಪ ಪೂಜಾರ | 7760341645 | ಗಂ | 49 | ಎಸ್ ಟಿ | ಎಂಟನೇ ತರಗತಿ |
| 16 | ಶಿವಮೂರ್ತೆಪ್ಪ ನಾಗಪ್ಪ ಪೂಜಾರ | 9880997456 | ಗಂ | 47 | ಎಸ್ ಟಿ | ಆರನೇ ತರಗತಿ |
| 17 | ರಾಮಪ್ಪ ನಾಗಪ್ಪ ಪೂಜಾರ | 9980260119 | ಗಂ | 67 | ಎಸ್ ಟಿ | ಬಿಎ |

| | | | | | | |
|---|---|---|---|---|---|---|
| 18 | ದುರ್ಗಪ್ಪ ಕೆಂಚಣ್ಣವರ | 9611523731 | ಗಂ | 41 | ಸಾಮಾನ್ಯ | ಎಂಟನೇ ತರಗತಿ |
| 19 | ವಿಜಯ ಹನುಮಂತಪ್ಪ ಗುರೇಮಟ್ಟಿ | 9741537743 | ಗಂ | 38 | ಸಾಮಾನ್ಯ | ಎಸ್ಎಸ್ ಎಲ್ ಸಿ |
| 20 | ಭರಮಪ್ಪ ಹನುಮಪ್ಪ ಲಚ್ಚಪ್ಪನವರ | 9008636683 | ಗಂ | 59 | ಎಸ್ ಟಿ | ಐದನೇ ತರಗತಿ |
| 21 | ಚಂದ್ರಪ್ಪ ಹನುಮಂತಪ್ಪ ಗುರೇಮಟ್ಟಿ | 7022780525 | ಗಂ | 31 | ಸಾಮಾನ್ಯ | ಐದನೇ ತರಗತಿ |
| 22 | ಚಂದ್ರಯ್ಯ ಗದಿಗೆಯ್ಯ ಹೊಂಡದಮಠ | 8197924495 | ಗಂ | 60 | ಸಾಮಾನ್ಯ | ಐದನೇ ತರಗತಿ |
| 23 | ಉಮೇಶಪ್ಪ ಕೆಂಚಣ್ಣವರ | – | ಗಂ | 48 | ಸಾಮಾನ್ಯ | ಐದನೇ ತರಗತಿ |
| 24 | ಯಲ್ಲಪ್ಪ ಚನ್ನಬಸಪ್ಪ ಕಾಕೋಳ | – | ಗಂ | 43 | ಸಾಮಾನ್ಯ | ಐದನೇ ತರಗತಿ |
| 25 | ಸುನೀಲ ಬಸಪ್ಪ ಕಾಕೋಳ | – | ಗಂ | 25 | ಸಾಮಾನ್ಯ | ಪಿಯುಸಿ |
| 26 | ಬಸಪ್ಪ ನಿಂಗಪ್ಪ ಕೆಂಚಣ್ಣವರ | | ಗಂ | 35 | ಸಾಮಾನ್ಯ | ಐದನೇ ತರಗತಿ |
| 27 | ಶಿವಪ್ಪ ರಾಮಪ್ಪ ಗುರೇಮಟ್ಟಿ | 9632699539 | ಗಂ | 34 | ಸಾಮಾನ್ಯ | ಎಂಟನೇ ತರಗತಿ |
| 28 | ಯಲ್ಲಪ್ಪ ಸ ಆಡೂರ | 8095483714 | ಗಂ | 64 | ಸಾಮಾನ್ಯ | ಐದನೇ ತರಗತಿ |
| 29 | ಈಶ್ವರಪ್ಪ ನಾಗಪ್ಪ ಕಾಕೋಳ | 8296422142 | ಗಂ | 38 | ಸಾಮಾನ್ಯ | ಪಿಯುಸಿ |
| 30 | ಸುನೀಲಗೌಡ ಈರಪ್ಪ ಪಾಟೀಲ | 9880810176 | ಗಂ | 25 | ಸಾಮಾನ್ಯ | ಪಿಯುಸಿ |
| 31 | ಪರಮೇಶಪ್ಪ ಗುರೇಮಟ್ಟಿ | 9643207543 | ಗಂ | 57 | ಸಾಮಾನ್ಯ | ಐದನೇ ತರಗತಿ |
| 32 | ಶೇಷಪ್ಪ ದ್ಯಾವಣ್ಣವರ | 8861326094 | ಗಂ | 48 | ಎಸ್ ಟಿ | ಆರನೇ ತರಗತಿ |
| 33 | ಬಸಪ್ಪ ಹಾಲಪ್ಪ ಮಾದರ | – | ಗಂ | 73 | ಎಸ್ ಸಿ | ಐದನೇ ತರಗತಿ |
| 34 | ಸುನೀಲ್ ಪೂಜಾರ | 8792400552 | ಗಂ | 25 | ಎಸ್ ಟಿ | ಪಿಯುಸಿ |

ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯಿಂದ ದಿನಾಂಕ: 11.03.2018 ರಂದು ಕರ್ನಾಟಕ ಕೃಷಿ ಬೆಲೆ ಆಯೋಗ " ರೈತರ ಆಧಾಯ ಮತ್ತು ಕಲ್ಯಾಣವೃದ್ಧಿ" ಯೋಜನೆಯಡಿಯಲ್ಲಿ ಬೀಜ ಉತ್ಪಾದಕರ ಸಂಘ ರಚನೆ ಮಾಡಲಾಯಿತು ಹಾಗೂ ಈ ಎಲ್ಲಾ ರೈತರ ಪೋಟೋ ಮತ್ತು ದಾಖಲಾತಿಗಳನ್ನು ಕೊಟ್ಟು ನೊಂದಣಿ ಮಾಡಿಸಿ ಆಂಜನೇಯ ಬೀಜೋತ್ಪಾದಕರ ಸಂಘ ರಚನೆ ಮಾಡಲಾಗಿದೆ.

## ಬೀಜೋತ್ಪಾದಕರ ಸಂಘದ ಉದ್ದೇಶಗಳು :

1. ಬೀಜೋತ್ಪಾದಕರ ಹಿತ ಕಾಯ್ದುಕೊಳ್ಳುವುದು
2. ಬೀಜಗಳು ಕ್ವಡದಂತೆ ಕೋಲ್ಡ್ ಸ್ಟೋರೇಜ್ ವ್ಯವಸ್ಥೆ ಮಾಡುವುದು
3. ಸೂಕ್ತ ಮಾರುಕಟ್ಟೆ ಹಾಗೂ ಸ್ಥಳದ ಅವಕಾಶ ಮಾಡುವುದು
4. ಬೀಜೋತ್ಪಾದಕರಿಗೆ ಮೂಲಬೂತ ಸವಲತ್ತು ಒದಗಿಸುವುದು
5. ಬೀಜೋತ್ಪಾದಕರಿಗೆ ಯೋಗ್ಯ ಕಮಿಷನ್ ಸಿಗುವಂತೆ ಮಾಡುವುದು
6. ಬೀಜಗಳನ್ನು ಸಾಗಿಸಲು ವಾಹನ ಖರೀದಿಗೆ ಸಾಲ ಸವಲತ್ತುಗಳನ್ನು ನೀಡುವುದು
7. ಹಲವು ಕಂಪನಿಗಳು ಈ ಸಂಘದ ರೈತರಿಗೆ ಬೀಜ ಬಿತ್ತನೆಯಿಂದ ಹಿಡಿದು ಕಟಾವು ಮಾಡುವವರೆಗೆ ತರಭೇತಿಯನ್ನು ಕೊಡುತ್ತಾರೆ. ಪ್ರಾಯೋಗಿಕ ರೈತರ ತಾಕುಗಳಿಗೆ ಬಂದು ಬೀಜೋಪಚಾರ, ರೋಗ, ಕೀಟಗಳ ನಿಯಂತ್ರಣ, ಸಮಗ್ರ ಪೋಷಕಾಂಶಗಳ ನಿರ್ವಹಣೆಯ ಬಗ್ಗೆ ಮಾಹಿತಿ ನೀಡುತ್ತಾರೆ.
8. ರೈತರು ಬೆಳೆದ ಬೆಳೆಗೆ ಬೆಂಬಲ ಬೆಲೆ ಸಿಗುವಂತೆ ಮಾಡುವುದು.
9. ಬೀಜೋತ್ಪಾದಕರ ಸಮಾವೇಶ ಮಾಡುವುದು ಮತ್ತು ಪ್ರತಿ ವರ್ಷ ಎಲ್ಲರೂ ಸೇರಿ ರಾಜ್ಯ ಮಟ್ಟದ ಸಮಾವೇಶ ನಡೆಸುವುದು
10. ಸರಕಾರದ ಎಲ್ಲಾ ಎಲ್ಲಾ ಯೋಜನೆಗಳಲ್ಲಿ ಬಾಗವಹಿಸುವುದು ಹಾಗೂ ಬೀಜೋತ್ಪಾದಕರ ಹಿತ ಕಾಪಾಡುವುದು.

## ಬೀಜೋತ್ಪಾದಕರ ಸಂಘ ರಚನೆ ಬಗ್ಗೆ ಖುರ್ದ ವೀರಾಪುರ ಗ್ರಾಮದ ರೈತರೊಂದಿಗೆ ಚರ್ಚೆ ಹಾಗೂ ಬೀಜೋತ್ಪಾದಕ ಸಂಘದ ಪ್ರಮಾಣ ಪತ್ರ ಮತ್ತು ಇತರೆ ದಾಖಲಾತಿಗಳು





11/03/2019

:DRHR/SOR/895/2018-2019.


1960 (1960 17

ANJANEYA BEEJOTPADAKARA SANGHA AT KHURDAVEERAPUR TQ BYADAGI DIST HAVERI BYADGI - 581106, HAVERI

500.00/-

11/03/2019

Class of Society :GENERAL



# ಎರೆಹುಳು ಗೊಬ್ಬರದ ಉತ್ಪಾದನಾ ಘಟಕದ ಫಲಾನುಭವಿಗಳ ಪಟ್ಟಿ

| ಕ್ರ ಸಂ | ರೈತನ ಹೆಸರು | ಜಾತಿ | ವಿಸ್ತೀರ್ಣ (ಎಕರೆ) | ಜಾನುವಾರು ಮಾಹಿತಿ | ನೀರಿನ ಮೂಲ | ಘಟಕದ ಗಾತ್ರ (ಮೀ) |
|---|---|---|---|---|---|---|
| 1 | ಶ್ರೀ ಸಿದ್ದಲಿಂಗಪ್ಪ. ಬ. ಗುರೇಮಟ್ಟಿ | ಸಾಮಾನ್ಯ | 2 | 1–ಎಮ್ಮೆ, 1– ಆಕಳು | ಕೊಳವೆ ಬಾವಿ | 12x4x2 |
| 2 | ಸುನೀಲಗೌಡ ಪಾಟೀಲ | ಸಾಮಾನ್ಯ | 1 | 1–ಎತ್ತು, 1–ಎಮ್ಮೆ | ಕೊಳವೆ ಬಾವಿ | 12x4x2 |
| 3 | ಈಶ್ವರಪ್ಪ ಕಾಕೋಳ | ಸಾಮಾನ್ಯ | 2 | 2–ಎತ್ತು, 4– ಎಮ್ಮೆ | ಕೊಳವೆ ಬಾವಿ | 12x4x2 |
| 4 | ದುರ್ಗಪ್ಪ ಕಂಚಣ್ಣವರ | ಎಸ್.ಟಿ | 1 | 2– ಆಕಳು, 1–ಎಮ್ಮೆ | ಕೊಳವೆ ಬಾವಿ | 12x4x2 |
| 5 | ಶಿವಮೂರ್ತಪ್ಪ ಪೂಜಾರ | ಎಸ್.ಟಿ | 2 | 2–ಎತ್ತು, 1–ಎಮ್ಮೆ | ಕೊಳವೆ ಬಾವಿ | 12x4x2 |

## ಎರೆಹುಳು ಗೊಬ್ಬರದ ಪ್ರಾತ್ಯಕ್ಷಿತೆ

ಕೃಷಿ ವಿಜ್ಞಾನ ಕೇಂದ್ರ ಹನುಮನಮಟ್ಟಿ ವತಿಯಿಂದ ದಿನಾಂಕ: 13–03–2019 ರಂದು ಋರ್ಧ ವೀರಾಪುರ ಗ್ರಾಮದ ಐದು ಜನ ರೈತರಿಗೆ ಎರೆಹುಳು ತೊಟ್ಟಿಯ ಪ್ರಾತ್ಯೆಕ್ಷಿಕೆಯನ್ನು ನೀಡಲಾಗಿತ್ತು. ಈ ಪ್ರಾತ್ಯಕ್ಷಿತೆಯಲ್ಲಿ ಎರೆಹುಳು ಮತ್ತು ಎರೆಹುಳು ಗೊಬ್ಬರದ ಮಹತ್ವದ ಬಗ್ಗೆ ಕೀಟ ಶಾಸ್ತ್ರ ವಿಭಾಗದ ವಿಜ್ಞಾನಿಗಳಾದ ಡಾ. ಕೆ.ಪಿ. ಗುಂಡಣ್ಣವರ ರೈತರಿಗೆ ತಿಳಿಸಿಕೊಟ್ಟರು.

**ಎರೆಗೊಬ್ಬರ ತಯಾರಿಸುವ ವಿಧಾನ :** ತ್ಯಾಜ್ಯ ಪದಾರ್ಥ ಹೊಂದಿದ ಕಚ್ಚಾವಸ್ತುಗಳಿಂದ ತುಂಬಬೇಕು

1. ತೆಂಗಿನ ಸಿಪ್ಪೆ ಅಥವಾ ನೀರು ಹಿಡಿಯುವ ವಸ್ತು
2. ಸಗಣಿ ಅಥವಾ ಬಯೋಗ್ಯಾಸ್ ಸ್ಲೆಡ್ಜ್ ಅಥವಾ ಯಾವ್ಯದೇ ಪ್ರಾಣಿಯ ಹಿಕ್ಕಿ
3. ಕೃಷಿ ತ್ಯಾಜ್ಯ ವಸ್ತುಗಳು ಅಥವಾ ಒಣಗಿದ ಕಸಕಡ್ಡಿ
4. ಸಗಣಿ ಅಥವಾ ಬಯೋಗ್ಯಾಸ್ ಸ್ಲೆಡ್ಜ್ ಅಥವಾ ಯಾವ್ಯದೇ ಪ್ರಾಣಿಯ ಹಿಕ್ಕಿ
5. ಹಸಿರು ಎಲೆಗಳು (ಹುಲ್ಲು, ಕಳೆ ಇತ್ಯಾದಿ).
6. ಎರೆಮಣ್ಣು ಅಥವಾ ತೋಟದ ಮಣ್ಣು
7. ಭತ್ತದ ಹುಲ್ಲು, ಜೋಳದ ದಂಟು ಇತ್ಯಾದಿ

ಈ ಎಲ್ಲಾ ತ್ಯಾಜ್ಯ ವಸ್ತುಗಳನ್ನು ತೊಟ್ಟಿಯಲ್ಲಿ ಅನುಕ್ರಮವಾಗಿ ತುಂಬಬೇಕು. ಅ.ಸಂ.3 ರಲ್ಲಿ ಬರುವ ಕೃಷಿ ತ್ಯಾಜ್ಯ ವಸ್ತುಗಳನ್ನು ಮತ್ತು ಅ.ಸಂ.6. ರಲ್ಲಿ ಬರುವ ಎರೆಮಣ್ಣನ್ನು ಹೊರತುಪಡಿಸಿ, ಉಳಿದ ವಸ್ತುಗಳನ್ನು (ಅ.ಸಂ. 1,2,3,4,5) 6–10 ಸೆಂ.ಮೀ. ದಪ್ಪದಲ್ಲಿ ತುಂಬಬೇಕು. ಕೃಷಿ ತ್ಯಾಜ್ಯ ವಸ್ತುಗಳನ್ನು ಹೆಚ್ಚಿನ

ಪ್ರಮಾಣದಲ್ಲಿ (15–20 ಸೆಂ.ಮೀ.) ಉಪಯೋಗಿಸಬೇಕು. ನಂತರ 16 ದಿನಗಳವರೆಗೆ ಪ್ರತಿ ದಿನ 30–60 ಲೀಟರ್ ನೀರಿನ್ನು ಸಿಂಪಡಿಸಬೇಕು. ಹೀಗೆ ಮಾಡುವುದರಿಂದ ತೊಟ್ಟಿಯಲ್ಲಿ ತುಂಬಿರುವ ಪದಾರ್ಥಗಳು ಬೇಗನೆ ಕಳಿಯಲಿಕ್ಕೆ ಪ್ರಾರಂಭಿಸುವವು. ನಂತರ ಸುಮಾರು 1000 – 2000 ಎರೆಹುಳುಗಳನ್ನು ತೊಟ್ಟಿಯಲ್ಲಿ 10 ಸೆಂ.ಮೀ. ಆಳದಲ್ಲಿ ಬಿಡಬೇಕು. ನಂತರ ತೊಟ್ಟಿಯ ಮೇಲೆ 7 ನೇಯ ಹಾಗೂ ಕೊನೆಯ ಪದರುಗಳಾಗಿ ಹುಲ್ಲು ಅಥವಾ ದಂಟನ್ನು 10–15 ಸೆಂ.ಮೀ ದಪ್ಪ ಹೊದಿಕೆಯಾಗಿ ಹರಡಬೇಕು. ತೊಟ್ಟಿಯಲ್ಲಿ ಕೃಷಿ ತ್ಯಾಜ್ಯ ವಸ್ತುಗಳನ್ನು ಬಳಸುವುದರಿಂದ ಎರೆಹುಳುವಿನ ಅಭಿವೃದ್ದಿ ಹೆಚ್ಚಾಗುವುದು. ಗುಣಮಟ್ಟದ ಹಾಗೂ ಅಧಿಕ ಎರೆಗೊಬ್ಬರದ ಉತ್ಪಾದನೆಗೆ ಬಾಳೆಯ ದಿಂಡು, ಜೋಳದ ಅಥವಾ ಸೂರ್ಯಕಾಂತಿ ತ್ಯಾಜ್ಯ ವಸ್ತುಗಳನ್ನು ಬಳಸಬೇಕು. ಇದರಿಂದ ಲಘು ಹಾಗೂ ಮುಖ್ಯ ಪೋಷಕಾಂಶಗಳನ್ನು ಅಧಿಕವಾಗಿ ಹೊಂದಿರುವ ಎರೆಗೊಬ್ಬರ ಪಡೆಯಲು ಸಾಧ್ಯವೆಂದು ಎರೆಹುಳು ಗೊಬ್ಬರದ ಮಹತ್ವದ ಬಗ್ಗೆ ಕೀಟ ಶಾಸ್ತ್ರ ವಿಭಾಗದ ವಿಜ್ಞಾನಿಗಳಾದ ಡಾ. ಕೆ.ಪಿ. ಗುಂಡಣ್ಣವರ ರೈತರಿಗೆ ತಿಳಿಸಿಕೊಟ್ಟರು.

## ಕೃಷಿಯಲ್ಲಿ ಎರೆಗೊಬ್ಬರದ ಉಪಯೋಗ :

ಎರೆಗೊಬ್ಬರ ಅತ್ಯುತ್ತಮವಾದ ಸಾವಯವ ಗೊಬ್ಬರವಾಗಿದ್ದು, ಬೆಳೆಗಳಿಗೆ ಬೇಕಾಗುವ ಮುಖ್ಯ ಮತ್ತು ಲಘುಪೋಷಕಾಂಶಗಳನ್ನು ಬೆಳೆವರ್ಧಕಗಳನ್ನು ಹೊಂದಿರುತ್ತದೆ. ಎರೆ ಕೃಷಿಯನ್ನು ಈ ಕೆಳಗಿನಂತೆ ಮೂರು ರೀತಿಯಲ್ಲಿ ಅಳವಡಿಸಬಹುದಾಗಿದೆ.

1. ಎರೆತೊಟ್ಟಿಯಲ್ಲಿ ಉತ್ಪಾದಿಸಿದಂತಹ ಎರೆಗೊಬ್ಬರವನ್ನು ಬೆಳೆಗಳಿಗೆ ಕೊಡುವುದು. ಸಾಮಾನ್ಯವಾಗಿ ಎಲ್ಲ ತರಹದ ಬೆಳೆಗಳಿಗೆ ಬಿತ್ತುವ ವೇಳೆಯಲ್ಲಿ ಪ್ರತಿ ಹೆಕ್ಟೇರಿಗೆ 2.5 ಟನ್ ಪ್ರಮಾಣದಲ್ಲಿ ಎರೆಗೊಬ್ಬರವನ್ನು ಕೊಡಬೇಕು.
2. ತೋಟದ ಬೆಳೆಗಳಲ್ಲಿ (ಹಣ್ಣು ಮತ್ತು ಪ್ಲಾಂಟೇಶನ್ ಬೆಳೆಗಳು ಇತ್ಯಾದಿ) ಎರೆಹುಳುಗಳನ್ನೇ ಬಿಟ್ಟು ಎರೆ ಕೃಷಿ ಮಾಡುವುದು ಸ್ಥಾನಿಕ ಎರೆಕೃಷಿ. ಬೆಳೆಗಳಲ್ಲಿ ಎರೆಹುಳುಗಳನ್ನು ಮಣ್ಣಿನಲ್ಲಿ ಸಾಲುಗಳ ಮಧ್ಯ ಅಥವಾ ಗಿಡದ ಸುತ್ತ ಬಿಟ್ಟು ಸಾಕಷ್ಟು ಪ್ರಮಾಣದಲ್ಲಿ ಸಾವಯವ ಕಚ್ಚಾ ಪದಾರ್ಥಗಳನ್ನು ಮಣ್ಣಿನ ಮೇಲೆ ಹರಡಬೇಕು. 10 ರಿಂದ 15 ದಿನಕ್ಕೊಮ್ಮೆ ನೀರನ್ನು ಕೊಡುತ್ತಾ ಹೋದಲ್ಲಿ ಹುಳುಗಳು ಭೂಮಿಯಲ್ಲಿ ಇದ್ದು, ಸಾವಯವ ಪದಾರ್ಥಗಳನ್ನು ತಿಂದು ಉತ್ತಮವಾದ ಗೊಬ್ಬರವನ್ನು ಬೆಳೆಯ ಸಾಲುಗಳಲ್ಲಿಯೇ ಉತ್ಪಾದಿಸಿತ್ತವೆ. ಈ ಪದ್ಧತಿಯನ್ನು ಅಳವಡಿಸಿದಾಗ ಮಣ್ಣಿನಲ್ಲಿ ಯಾವುದೇ ತರಹದ ರಾಸಾಯನಿಕಗಳನ್ನು ಮಿಶ್ರಣ ಮಾಡಬಾರದು. ಅವಶ್ಯಕತೆ ಇದ್ದಾಗ ಎಲೆಗಳ ಮುಖಾಂತರ ಪೋಷಕಾಂಶಗಳನ್ನು ಮತ್ತು ಕೀಟನಾಶಕಗಳನ್ನು ಸಿಂಪರಣೆ ಮಾಡಬಹುದು.
3. ಎರೆಹುಳುಗಳ ದೇಹವನ್ನು ಹಾಗೂ ಹಿಕ್ಕಿಯನ್ನು ನೀರಿನಿಂದ ತೊಳೆದು ಬಂದ ದ್ರಾವಣವನ್ನು (ಎರೆಜಲ) ಬೆಳೆಗಳಿಗೆ ಸಿಂಪಡಿಸುವುದರಿಂದ ಬೆಳೆಯ ಇಳುವರಿ ಅಧಿಕಗೊಳ್ಳುತ್ತದೆ. ಎರೆಜಲದಲ್ಲಿ ಮುಖ್ಯ ಲಘುಪೋಷಕಾಂಶಗಳು, ಬೆಳೆವರ್ಧಕಗಳು ಮತ್ತು ಉಪಯುಕ್ತ ಸೂಕ್ಷ್ಮಾಣು ಜೀವಿಗಳು ಇರುವುದಾಗಿ ಕಂಡುಬಂದಿದೆ.

## ಎರೆಹುಳು ಗೊಬ್ಬರದಲ್ಲಿರುವ ಪೋಷಕಾಂಶಗಳ ಪ್ರಮಾಣ

| ಮುಖ್ಯ ಪೋಷಕಾಂಶಗಳು (%) | | | ಲಘು ಪೋಷಕಾಂಶಗಳು (ಪಿ.ಪಿ.ಎಮ್) | | | ಸೂಕ್ಷ್ಮಾಣು ಜೀವಿಗಳು (ಪ್ರತಿ ಗ್ರಾಂ. ಗೆ) | | |
|---|---|---|---|---|---|---|---|---|
| ಸಾರಜನಕ | ರಂಜಕ | ಪೊಟಾಶ್ | ತಾಮ್ರ | ಕಬ್ಬಿಣ | ಸತುವು | ಶಿಲೀಂದ್ರ | ಬ್ಯಾಕ್ಟೀರಯಾ | ಆಕ್ಟಿನೋಮೈಸಿಟಿಸ್ |
| 0.90 ರಿಂದ 1.50 | 0.40 ರಿಂದ 1.10 | 0.70 ರಿಂದ 2.9 | 4.0 ರಿಂದ 70.0 | 125 ರಿಂದ 2150 | 7.0 ರಿಂದ 245 | $10x\ 10^3$ ರಿಂದ $41x10^4$ | $5x10^6$ ರಿಂದ $65\ x\ 10^7$ | $9x10^3$ ರಿಂದ $15\ x\ 10^4$ |





ಎರೆಹುಳು ತೊಟ್ಟಿಯ ಪ್ರಾತ್ಯಕ್ಷಿತೆ ಹಾಗೂ ರೈತರೊಂದಿಗೆ ಚರ್ಚೆ



ಎರೆಹುಳು ತೊಟ್ಟಿಯ ವಿತರಣೆ



ಎರೆ ಹುಳುವನ್ನು ತೊಟ್ಟಿಗೆ ಬಿಡುತ್ತಿರುವ್ವದು

# ವಿವಿಧ ಇಲಾಖೆಗಳ ಸೌಲಭ್ಯ ಮಾಹಿತಿ ಪುಸ್ತಕ 2018–19

ದಿನಾಂಕ 25–03–2019 ರಂದು ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯಿಂದ ಕರ್ನಾಟಕ ಕೃಷಿ ಬೆಲೆ ಆಯೋಗ " ರೈತರ ಆಧಾಯ ಮತ್ತು ಕಲ್ಯಾಣವೃದ್ಧಿ" ಯೋಜನೆಯಡಿಯಲ್ಲಿ ಆಯ್ಕೆಯಾದ ಗ್ರಾಮ ಖುರ್ಧ ವೀರಾಪುರದಲ್ಲಿ ಸರ್ಕಾರದ ವಿವಿಧ ಇಲಾಖೆಗಳಿಂದ ಲಭ್ಯವಿರುವ ಸೌಲಭ್ಯಗಳ ಮಾಹಿತಿ ಪುಸ್ತಕವನ್ನು ಗ್ರಾಮದ 25 ಜನ ರೈತರಿಗೆ ಕೊಡಲಾಯಿತು.

## ವಿವಿಧ ಇಲಾಖೆಗಳ ಸೌಲಭ್ಯಗಳು :

### ಕೃಷಿ ಇಲಾಖೆಯ ಯೋಜನೆಗಳು

1. **ಕೃಷಿ ಭಾಗ್ಯ ಯೋಜನೆ :** ಈ ಯೋಜನೆಯಡಿಯಲ್ಲಿ ಮಳೆ ನೀರಿನ ಸಮರ್ಥ ಬಳಕೆ ಮತ್ತು ಸಂರಕ್ಷಣೆ ಕೃಷಿಗೆ ಹೆಚ್ಚು ಆದ್ಯತೆ ನೀಡಿದ್ದು ಸದರಿ ಘಟಕದಡಿಯಲ್ಲಿ ಜಮೀನಿನಲ್ಲಿ ನೀರಿನ ಸಂಗ್ರಹಣೆ, ನೀರು ಎತ್ತುವಿಕೆ ಲಘು ನೀರಾವರಿ ಮತ್ತು ಸುಧಾರಿತ ಬೆಳೆ ಪದ್ಧತಿ ಘಟಕಗಳು ಈ ನೀತಿಯ ಪ್ರಮುಖ ಅಂಶಗಳಾಗಿರುತ್ತವೆ. ಪ್ರತಿ ಫಲಾನುಭವಿಗೆ ಗರಿಷ್ಟ 2 ಹೆಕ್ಟೇರ್‌ಗೆ ಸವಲತ್ತನ್ನು ಮಿತಿಗೊಳಿಸಿದೆ.
2. **ಕೃಷಿ ಅಭಿಯಾನ ಯೋಜನೆ :** ಕೃಷಿ ಹಾಗೂ ಬೇಸಾಯ ಸಂಬಂಧಿತ ಇಲಾಖೆಗಳ ಸಮನ್ವಯದೊಂದಿಗೆ ಸಮಗ್ರ ಕೃಷಿ ಮಾಹಿತಿಯನ್ನು ರೈತರಿಗೆ ತಲುಪಿಸುವುದು. ಉತ್ಪಾದಕತೆ ಹೆಚ್ಚಿಸುವ ತಾಂತ್ರಿಕತೆಗಳ ಮನವರಿಕೆ ಹಾಗೂ ವಿಜ್ಞಾನಿಗಳೊಂದಿಗೆ ರೈತರ ಸಂವಾದ.
3. **ಕೃಷಿ ಯಂತ್ರಧಾರೆ ಯೋಜನೆ :** ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಸಕಾಲದಲ್ಲಿ ಮತ್ತು ಕಡಿಮೆ ಬಾಡಿಗೆ ದರದಲ್ಲಿ ಕೃಷಿ ಯಂತ್ರೋಪಕರಣಗಳನ್ನು ಒದಗಿಸಲು **ಕೃಷಿ ಯಂತ್ರೋಪಕರಣಗಳ ಬಾಡಿಗೆ ಆಧಾರಿತ ಸೇವಾ ಕೇಂದ್ರ** ಯೋಜನೆಯನ್ನು ಹಾವೇರಿ ಜಿಲ್ಲೆಯಲ್ಲಿ ಅನುಷ್ಠಾನ ಮಾಡಲು **ಶ್ರೀ ಕ್ಷೇತ್ರ ಧರ್ಮಸ್ಥಳ ರೂರಲ್ ಡೆವಲಪ್‌ಮೆಂಟ್ ಪ್ರಾಜೆಕ್ಟ್, ಧರ್ಮಸ್ಥಳ** ಇವರಿಗೆ ವಹಿಸಲಾಗಿದೆ.

4. **ಪ್ರಮಾಣಿತ/ಗುಣಮಟ್ಟದ ಬಿತ್ತನೆ ಬೀಜ ವಿತರಣಾ ಕಾರ್ಯಕ್ರಮ :** ಪ್ರಮಾಣಿತ ಹಾಗೂ ಉತ್ತಮ ಗುಣಮಟ್ಟದ ಬಿತ್ತನೆ ಬೀಜವನ್ನು ರೈತರಿಗೆ ಸಕಾಲದಲ್ಲಿ ಒದಗಿಸುವುದು. ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿನ ಎಲ್ಲಾ ವರ್ಗದ ರೈತರಿಗೆ ಬೆಳೆಗಳ ಹೈಬ್ರಿಡ್, ಅಧಿಕ ಇಳುವರಿ ತಳಿಗಳು ಮತ್ತು ತಳಿಗಳ ಉತ್ತಮ ಗುಣಮಟ್ಟದ ಪ್ರಮಾಣಿತ ಹಾಗೂ ನಿಜ ಚೀಟಿ ಬಿತ್ತನೆ ಬೀಜಗಳನ್ನು ಮುಂಗಾರು, ಹಿಂಗಾರು/ ಬೇಸಿಗೆ ಹಂಗಾಮುಗಳಲ್ಲಿ ರಿಯಾಯಿತಿ ದರದಲ್ಲಿ ಸಕಾಲದಲ್ಲಿ ರೈತರಿಗೆ ಒದಗಿಸಿ ಅಧಿಕ ಇಳುವರಿ ಪಡೆಯಲು ನೆರವಾಗುವುದು.
5. **ಕೃಷಿ ಯಾಂತ್ರೀಕರಣ ಯೋಜನೆ :** ಈ ಯೋಜನೆಯಡಿ ಪವರ್ ಟಲ್ಲರ್, ಬಿತ್ತನೆ ಅಂತರ ಬೇಸಾಯಕ್ಕೆ ಕೃಷಿ ಯಂತ್ರೋಪಕರಣಗಳು, ಡೀಸೆಲ್ ಪಂಪ್ ಸೆಟ್‌ಗಳು, ಟ್ರ್ಯಾಕ್ಟರ್‌ಗಳು/ಎಂಜಿನ್ ಚಾಲಿತ ಸಸ್ಯ ಸಂರಕ್ಷಣೆಗೆ ಉಪಯುಕ್ತವಾಗುವ ವಿವಿಧ ಮಾದರಿಯ ಕೃಷಿ ಯಂತ್ರೋಪಕರಣಗಳಿಗೆ ಸಾಮಾನ್ಯ ವರ್ಗದವರಿಗೆ ಉಪಕರಣದ ಕನಿಷ್ಟ ದರದ ಶೇ.50% ರಷ್ಟು ಸಹಾಯಧನ ಒದಗಿಸಲಾಗುತ್ತದೆ. ಹಾಗೂ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ರೈತರಿಗೆ ಉಪಕರಣದ ಕನಿಷ್ಟ ದರದ ಶೇ.90% ಸಹಾಯಧನದಲ್ಲಿ ಕೃಷಿ ಯಂತ್ರೋಪಕರಣಗಳನ್ನು ಒದಗಿಸಲಾಗುತ್ತದೆ.
6. **ರಾಷ್ಟೀಯ ಕೃಷಿ ವಿಕಾಸ ಯೋಜನೆ (ಆರ್.ಕೆ.ವಿ.ವೈ) :** ಕೃಷಿ ಮತ್ತು ಕೃಷಿ ಸಂಬಂಧಿತ ವಲಯದಲ್ಲಿ ಮಂದಗತಿಯ ಬೆಳವಣಿಗೆಯನ್ನು ಸುಧಾರಿಸಲು ಹಾಗೂ ಕೃಷಿ ಕ್ಷೇತ್ರದಲ್ಲಿ ಶೇ.4% ರಷ್ಟು ಬೆಳವಣಿಗೆಯನ್ನು ಸಾಧಿಸಲು ಈ ಯೋಜನೆಯನ್ನು ರೂಪಿಸಲಾಗಿದೆ. ಕೃಷಿ ಯಂತ್ರೋಪಕರಣ, ಮಣ್ಣು ಆರೋಗ್ಯ ಸುಧಾರಿಸುವ ಕಾರ್ಯತಂತ್ರಗಳು. ಕೃಷಿ ಹಾಗೂ ತೋಟಗಾರಿಕೆ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರದ ಸಂಸ್ಥೆಗಳಿಗೆ ಅನುದಾನ/ಸಹಾಯ, ಕೃಷಿ ವಿಸ್ತರಣಾ ಸೇವೆಯ ಬಲವರ್ಧನೆ, ಮಾರಯಕಟ್ಟೆ ಮೂಲಭೂತ ಸೌಲಭ್ಯಗಳು ಹಾಗೂ ಮಾರುಕಟ್ಟೆ ಅಭಿವೃದ್ಧಿಗೆ ಉತ್ತೇಜನ, ಪಶುಸಂಗೋಪನೆ ಹಾಗೂ ಮೀನುಗಾರಿಕೆ ಅಭಿವೃದ್ಧಿ, ರೈತರಿಗೆ ವಿವಿಧ ತಂತ್ರಜ್ಞಾನದ ಬಗ್ಗೆ ತರಬೇತಿಗಳನ್ನು ಆಯೋಜಿಸುವುದು ಹಾಗೂ ಕೃಷಿ ಮತ್ತು ಸಂಬಂಧಿತ ವಲಯಗಳು ಅಭಿವೃದ್ಧಿ, ರೈತರಿಗೆ ವಿವಿಧ ತಂತ್ರಜ್ಞಾನದ ಬಗ್ಗೆ ತರಬೇತಿಗಳನ್ನು ಆಯೋಜಿಸುವುದು ಹಾಗೂ ಕೃಷಿ ಮತ್ತು ಸಂಬಂಧಿತ ವಲಯಗಳ ಆಭಿವೃದ್ಧಿಗೆ ನೂತನ ಕಾರ್ಯಕ್ರಮಗಳು.

7. **ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ( ಎನ್.ಎಫ್.ಎಸ್.ಎಂ): ಯೋಜನೆ**
    - ಅಕ್ಕಿ, ದಿದ್ವಳ ಧಾನ್ಯಗಳು ಮತ್ತು ವಾಣಿಜ್ಯ ಬೆಳೆಗಳಲ್ಲಿ (ಹತ್ತಿ) ಕ್ಷೇತ್ರ ವಿಸ್ತೀರ್ಣ ಹಾಗೂ ಉತ್ಪಾದಕತೆ ಹೆಚ್ಚು ಮಾಡುವ ಮುಖಾಂತರ ಹೆಚ್ಚು ಉತ್ಪಾದನೆಯನ್ನು ಸಾಧಿಸುವುದು.
    - ಕ್ಷೇತ್ರ ಮಟ್ಟದಲ್ಲಿ ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತೆಯನ್ನು ಸ್ಥಿರಗೊಳಿಸುವುದು.
    - ಕ್ಷೇತ್ರಮಟ್ಟದಲ್ಲಿ ಕೃಷಿ ಆದಾಯ ಹೆಚ್ಚಿಸುವುದರ ಮೂಲಕ ರೈತರಲ್ಲಿ ಆತ್ಮ ವಿಶ್ವಾಸವನ್ನು ಮೂಡಿಸುವುದು.
8. **ಪ್ರಧಾನ ಮಂತ್ರಿ ಸಿಂಚಾಯಿ ಯೋಜನೆ :** ರಾಜ್ಯದ ರೈತರಲ್ಲಿ ನೀರಿನ ಮಿತ ಬಳಕೆ ಮಾಡುವಚಿತೆ ಪ್ರೋತ್ಸಾಹಿಸುವುದೇ ಈ ಯೋಜನೆಯ ಮುಖ್ಯ ಉದ್ದೇಶ. ಈ ಕಾರ್ಯಕ್ರಮದಡಿ ಸೂಕ್ಷ್ಮ ನೀರಾವರಿ ಘಟಕಗಳಾದ ತುಂತುರು ನೀರಾವರಿ ಮತ್ತು ಹನಿ ನೀರಾವರಿ ಘಟಕಗಳನ್ನು ರೈತರು

ಅಳವಡಿಸಿಕೊಳ್ಳಲು ಶೇ.90% ರಷ್ಟು ಸಹಾಯಧನ ಒದಗಿಸಲಾಗುತ್ತದೆ. "ಪ್ರತಿ ಹನಿಗೂ ಹೆಚ್ಚಿನ ಬೆಳೆ" ಪಡೆಯಲು ಹಾಗೂ ಲಭ್ಯವಿರುವ ನೀರಿನಿಂದ ಹೆಚ್ಚಿನ ಕೃಷಿ ಕ್ಷೇತ್ರವನ್ನು ನೀರಾವರಿಗೆ ಅಳವಡಿಸುವುದು.

9. **ಭೂ ಚೇತನ ಕಾರ್ಯಕ್ರಮ :** ರೈತರಗೆ ದೊರೆಯುವ ಸೌಲಭ್ಯಗಳು – ಉತ್ತಮ ತಾಂತ್ರಿಕತೆಗಳನ್ನು ಅಳವಡಿಸಿ, ಜಿಲ್ಲೆಯ ಆಯ್ದ ಪ್ರಮುಕ ಕೃಷಿ ಬೆಳೆಗಳಲ್ಲಿ ಮತ್ತು ನೀರಾವರಿ ಭತ್ತ ಮತ್ತು ಕಬ್ಬಿನ ಉತ್ಪಾದನೆಯನ್ನು ಶೇ.20% ರಷ್ಟು ಹೆಚ್ಚಿಸುವುದು.
10. **ಮಣ್ಣಿ ಆರೋಗ್ಯ ಅಭಿಯಾನ ಯೋಜನೆ :** ಜಿಲ್ಲೆಯ ಎಲ್ಲಾ ರೈತ ಹಿಡುವಳಿದಾರರಿಗೆ ಮಣ್ಣು ಪರೀಕ್ಷೆ ಮಾಡಿ ಮಣ್ಣು ಆರೋಗ್ಯ ಚೀಟಿ ವಿತರಿಸುವುದು ಹಾಗೂ ಪೋಷಕಾಂಶಗಳ ಕೊರತೆ ನೀಗಿಸಲು, ಮಣ್ಣು ಪರೀಕ್ಷೆ ಆಧಾರಿತ ರಸಗೊಬ್ಬರ ಬಳಕೆ ಮಾಡುವುದು. ಜಿಲ್ಲೆಯಲ್ಲಿ ಎಲ್ಲಾ ತಾಲ್ಲೂಕು/ಹೋಬಳಿ ಮಟ್ಟದಲ್ಲಿ ಮಣ್ಣಿನ ಫಲವತ್ತತೆ ಆಧರಿಸಿ, ರಸಗೊಬ್ಬರ ಶಿಫಾರಸ್ಸುಗಳನ್ನು ನೀಡುವುದು.
11. **ಸಾವಯವ ಭಾಗ್ಯ ಯೋಜನೆ :** ಸಾವಯವ ಭಾಗ್ಯ ಯೋಜನೆಯಡಿ ಪ್ರತಿ ಹೋಬಳಿಯಲ್ಲಿ ಆಯ್ಕೆಯಾದ 100 ಹೆಕ್ಟೇರ್ ಯೋಜನಾ ಪ್ರದೇಶದಲ್ಲಿನ ರೈತರುಗಳಿಗೆ ಸಾವಯವ ಕೃಷಿಗೆ ಪೂರಕವಾದ ಕಾರ್ಯಕ್ರಮ/ಘಟಕಗಳ ಸ್ಥಾಪನೆಗೆ ಮಾರ್ಗಸೂಚಿಯನ್ವಯ ಸಹಾಯಧನ ನೀಡಲಾಗುತ್ತದೆ.
12. **ಮಣ್ಣಿನ ಸತ್ವ ಹೆಚ್ಚಿಸುವಿಕೆ ಕಾರ್ಯಕ್ರಮ :** ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಮಣ್ಣಿನ ಸತ್ವ ಹೆಚ್ಚಿಸುವುದು ಮತ್ತು ರೈತರ ಆರ್ಥಿಕ ಮಟ್ಟ ಸುಧಾರಿಸುವುದು ಹಾಗೂ ಸಾವಯವ ಕೃಷಿಯನ್ನು ಪ್ರೋತ್ಸಾಹಿಸುವ ಸಲುವಾಗಿ ಸಾವಯವ ಗೊಬ್ಬರ ಉತ್ಪಾದನೆ ಮತ್ತು ಬಳಕೆ ಉತ್ತೇಜಿಸುವುದು ಈ ಯೋಜನೆಯ ಮೂಲ ಉದ್ದೇಶವಾಗಿದೆ.
13. **ಕೃಷಿ ಉತ್ಪನ್ನಗಳ ಸಂಸ್ಕರಣೆ ಯೋಜನೆ :** ಗ್ರಾಮೀಣ ಪ್ರದೇಶಗಳಲ್ಲಿ ರೃತರು ಬೆಳೆಯುವ ಕೃಷಿ ಉತ್ಪನ್ನಗಳು ಉತ್ತಮು ಸಂಸ್ಸರಣೆ ಒಳಗಾಗಿ ಗುಣಮಟ್ಟದ ಉತ್ಪನ್ನಗಳನ್ನು ರೈತರಿಗೆ ಹಾಗೂ ಬಳಕೆದಾರರಿಗೆ ಒದಗಿಸುವುದು. ಈ ಮೂಲಕ ರೈತರಿಗೆ ಆರ್ಥಿಕ ಸಂಕಷ್ಟಗಳನ್ನು ಕಡಿಮೆ ಮಾಡುವುದು.
14. **ಆತ್ಮ ಕಾರ್ಯಕ್ರಮ :** ಆತ್ಮ ಯೋಜನೆಯು ಜಿಲ್ಲೆಯ ಸರ್ವಾಂಗೀಣ ಮತ್ತು ಸುಸ್ಥಿರ ಕೃಷಿ ಅಭಿವೃದ್ಧಿಗಾಗಿ ಸ್ಥಾಪಿಸಲಾದ ವಿಕೇಂದ್ರಿತ ವ್ಯವಸ್ಥೆಯಾಗಿರುತ್ತದೆ. ಕೃಷಿ ವಿಸರಣೆಯಲ್ಲಿ ತೊಡಗಿರುವ ಕೃಷಿ ಮತ್ತು ಇತರೆ ಅಭಿವೃದ್ಧಿ ಇಲಾಖೆಗಳು, ಸರ್ಕಾರೇತರ ಸಂಘ ಸಂಸ್ಥೆಗಳು, ಸಂಶೋಧನೆ ಹಾಗೂ ತಾಂತ್ರಿಕ ಪ್ರಸಾರ ಘಟಕಗಳ ಮಧ್ಯೆ ಸಮನ್ವಯ ತರುವ ಮೂಲಕ ರೈತರಿಗೆ ಉತ್ತಮ ಗುಣಮಟ್ಟದ ವಿವಿಧ ಇಲಾಖೆಗಳ ವಿಸ್ತರಣಾ ಸೇವೆ ಹಾಗೂ ನೂತನ ತಂತ್ರಜ್ಞಾನಗಳನ್ನು ಒದಗಿಸುವುದು.

# <u>ತೋಟಗಾರಿಕೆ ಇಲಾಖೆಯ ಯೋಜನೆಗಳು</u>

## <u>ಜಿಲ್ಲಾ ವಲಯ ಯೋಜನೆಗಳು :</u>

1. **<u>ಹನಿ ನೀರಾವರಿ</u> :** ಸರ್ಕಾರದಿಂದ ಅನುಮೋದಿತ ಡೀಲರ್‌ಗಳಿಂದ ತೋಟಗಾರಿಕಾ ಬೆಳೆಗಳಿಗೆ ಹನಿ ನೀರಾವರಿ ಅಳವಡಿಕೆ ಮಾಡಿಕೊಂಡ ರೈತರಿಗೆ ಮಾರ್ಗಸ್ರಚಿ ಪ್ರಕಾರ 90% ಸಹಾಯಧನ (ಕನಿಷ್ಟ 0.20 ಹೆ. ನಿಂದ ಗರಿಷ್ಟ 2 ಹೆ. ಗಳ ವರೆಗೆ 90% ಸಹಾಯಧನ), (2 ರಿಂದ 5 ಹೆ. ಗಳ ವರೆಗೆ 45% ಗಳ ಡಿ ಎ ತಾಲೂಕುಗಳಿಗೆ, 35% ನಾನ್ ಡಿ ಎ ತಾಲೂಕಿಗೆ ಸಹಾಯಧನ) ನೀಡಲಾಗುವುದು.
2. **<u>ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ</u> :** ಜಿಲ್ಲಾ ಪಂಚಾಯತ್ ಅಧೀನ ಬರುವ ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ ಮಾಡುವುದು, ಪಂಪ್ ದುರಸ್ತಿ, ವಿದ್ಯುತ್ ಬಿಲ್ ಪಾವತಿಸುವುದು ಬೋರವೆಲ್ ದುರಸ್ತಿ, ಮುಂತಾದ ನಿರ್ವಹಣೆ ಕಾರ್ಯ ಮಾಡುವುದು.
3. **<u>ಪ್ರಚಾರ ಮತ್ತು ಸಾಹಿತ್ಯ</u> :** ಇಲಾಖಾ ಕಾರ್ಯಕ್ರಮಗಳ ಬಗ್ಗೆ ವ್ಯಾಪಕ ಪ್ರಚಾರ ಕೈಗೊಳ್ಳಲು ಪ್ರಚಾರ ಸಾಮಾಗ್ರಿ ಮಾಡಿಸುವುದು. ವಿಚಾರ ಸಂಕೀರ್ಣ/ಕಾರ್ಯಾಗಾರ ತೋಟಗಾರಿಕೆ ಬೆಳೆಗಳಲ್ಲಿ ಇತ್ತೀಚಿನ ನೂತನ ತಂತ್ರಜ್ಞಾನದ ಬಗ್ಗೆ ರೈತರಿಗೆ ಮಾಹಿತಿ ನೀಡಲು ಹಾಗೂ ಇಲಾಖಾ ಯೋಜನೆಗಳ ಸಮರ್ಪಕ ಕಾರ್ಯರೂಪಕ್ಕೆ ತರವ ಸಲುವಾಗಿ ಈ ಕಾರ್ಯಕ್ರಮ ರೂಪಿಸಲಾಗಿದೆ.
4. **<u>ಸಾಮರ್ಥ್ಯವುಳ್ಳ ರಾಜ್ಯಗಳಲ್ಲಿ ತಾಳೆಬೆಳೆ ಅಭಿವೃದ್ಧಿ ಯೋಜನೆ</u> :** ತಾಳೆ ಬೆಳೆ ರೈತರಿಗೆ ಹನಿ ನೀರಾವರಿ ಅಳವಡಿಕೆಗೆ ಶೇ.90% ರ ಸಹಾಯಧನ, ಕೊಯ್ಲು ಯಂತ್ರ ಖರೀದಿಗೆ, ಯಂತ್ರೋಪಕರಣ ಖರೀದಿಗೆ ಮತ್ತು ಕೊಳವೆ ಭಾವಿ ಕೊರೆಯಲು ಹಾಗೂ ಡೀಸೆಲ್ / ವಿದ್ಯುತ್ ಚಾಲಿತ ಪಂಪ್ಸೆಟ್ಗಳಿಗೆ ಶೇ.50% ರಂತೆ ಸಹಾಯಧನ ನೀಡಲಾಗುವುದು ಹಾಗೂ ತರಬೇತಿ ನೀಡಲಾಗುತ್ತದೆ.
5. **<u>ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆ :</u>** ಇಲಾಖೆಯ ವಿವಿಧ ಕ್ಷೇತ್ರ ಮತ್ತು ನರ್ಸರಿಗಳಲ್ಲಿ ತೆಂಗಿನ ಸಸಿಗಳನ್ನು ಉತ್ಪಾದಿಸಿ ನಿಗದಿತ ದರದಲ್ಲಿ ನೀಡಲಾಗುವುದು.
6. **<u>ರೈತರಿಗೆ ತರಬೇತಿ</u> :** ತೋಟಗಾರಿಕೆ ಬೆಳೆಗಳ ಆಧುನಿಕ ತಂತ್ರಜ್ಞಾನ ಬೇಸಾಯ ಕ್ರಮಗಳ ಬಗ್ಗೆ ರೈತರಿಗೆ ತರಬೇತಿ ನೀಡಲಾಗುವುದು.
7. **<u>ರೈತರಿಗೆ ಸಹಾಯ</u> :** ಪ್ರದೇಶ ವಿಸ್ತರಣೆ ಕಾರ್ಯಕ್ರಮದಡಿ ಆಯಾ ಪ್ರದೇಶಕ್ಕೆ ಸೂಕ್ತವಾದ ತೋಟಗಾರಿಕೆ ಬೆಳೆಗಳನ್ನು ಬೆಳೆಸಲು ಪ್ರತಿ ಫಲಾನುಭವಿಗಳಿಗೆ ಕಸಿ/ಸಸಿಗಳನ್ನು ಸಹಾಯಧನ ರೂಪದಲ್ಲಿ ನೀಡುವುದು.
8. **<u>ಶೀಥಲ ಗೃಹಗಳಿಗೆ ಸಹಾಯಧನ</u> :** ಈ ಯೋಜನೆಯಲ್ಲಿ ಶೀಥಲ ಗೃಹಗಳ ನಿರ್ವಹಣೆ ವಿಧ್ಯುತ್ಚಕ್ತಿ ವೆಚ್ಚವನ್ನು ಭರಿಸಲು ಪ್ರತಿ ಯುನಿಟ್ ವಿಧ್ಯುತ್ಚಕ್ತಿಗೆ ರೂ. 1 ರಂತೆ ನೀಡಲಾಗುತ್ತದೆ.

**ರಾಜ್ಯ ವಲಯ ಯೋಜನೆಗಳು :**

1. **ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಗಳು :** ತೋಟಗಾರಿಕೆ ಬೆಳೆಗಳ ಉತ್ಪಾದನೆ, ಉತ್ಪಾದಕತೆ ಗುಣಮಟ್ಟ ವರ್ದಿಸುವುದು ಹಾಗೂ ಉತ್ಪಾದನೆಗಳಿಗೆ ಸುವ್ಯವಸ್ಥಿತವಾದ ಮಾರುಕಟ್ಟೆವದಗಿಸುವ ನಿಟ್ಟಿನಲ್ಲಿ ಪ್ರತಿ ತಾಲ್ಲೂಕಿನಲ್ಲಿ ಒಚಿದು ಗುಚ್ಚ ಗ್ರಾಮಗಳನ್ನು ಆಯ್ಕೆ ಮಾಡಿ ಆಯ್ದ ತೋಟಗಾರಿಕೆ ಬೆಳೆಗಳನ್ನು ವೈಜ್ಞಾನಿಕ ತಂತ್ರಜ್ಞಾನಗಳೊಂದಿಗೆ ಮಾದರಿ ತೋಟಗಳನ್ನು ಅಭಿವೃದ್ಧಿಪಡಿಸುವುದು. ಆಯ್ಕೆಯಾದ ರೈತ ಫಲಾನುಭವಿಗಳಿಗೆ ಪ್ರತಿ ಘಟಕ ವೆಚ್ಚದ ಶೇ.90 ರಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತ ಫಲಾನುಭವಿಗಳಿಗೆ, ಶೇ.50 ರಷ್ಟು ಸಣ್ಣ ಮತ್ತು ಅತೀ ಸಣ್ಣ ರೈತ ಫಲಾನುಭವಿಗಳಿಗೆ ಹಾಗೂ ಶೇ.40 ರಷ್ಟು ಇತರೆ ರೈತ ಫಲಾನುಭವಿಗಳಿಗೆ ಸಹಾಯಧನ ನೀಡಲಾಗುವುದು.

   **ಯೋಜನೆಯ ಮುಖ್ಯ ಘಟಕಗಳು :**

   1. ತೋಟಗಾರಿಕೆ ಪ್ರದೇಶಾಭಿವೃದ್ಧಿ
   2. ತೋಟಗಾರಿಕೆ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ
   3. ಮಧುವನ ಮತ್ತು ಜೇನು ಕೃಷಿ ಅಭಿವೃದ್ಧಿ ಯೋಜನೆ
   4. ಕೈತೋಟ ಮತ್ತು ತಾರಸಿ ತೋಟಗಳ ಅಭಿವೃದ್ಧಿ ತೋಟಗಾರಿಕಾ ವಿಸ್ತರಣೆ
   5. ತೋಟಗಾರಿಕೆ ಕಟ್ಟಡಗಳು
   6. ತರಕಾರಿ ಬೀಜಗಳ ಮಾದರಿ ಸಂಗ್ರಹಣೆ ಮತ್ತು ವಿಶ್ಲೇಷಣೆ
   7. ರೈತ ಉತ್ಪಾದಕರ ಗುಂಪುಗಳು (ಎಪ್. ಒ)

**ಕೇಂದ್ರ ವಲಯ ಯೋಜನೆಗಳು :**

1. **ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ಎಮ್‌ಜಿಎನ್‌ಆರ್‌ಇಜಿಎ) :** ಪ್ರದೇಶ ವಿಸ್ತರಣೆ ಕಾರ್ಯಕ್ರಮದಡಿ ಮಾವು,ಚಿಕ್ಕು,ತೆಂಗು,ಬಾಳೆ ಹಾಗೂ ಇತರೆ ತೋಟಗಾರಿಕೆ ಬೆಳೆಗಳ ಹೊಸ ತೋಟ ನಿರ್ಮಾಣ ಹಳೆಯ ಮಾವು, ತೆಂಗು ತೋಟಗಳ ಪುನಶ್ಚೇತನ ಕಾರ್ಯಕ್ರಮ, ಕಳೆದ ವರ್ಷಗಳಲ್ಲಿ ಈ ಯೋಜನೆಚುಡಿ ನಿರ್ಮಿಸಿದ ತೋಟಗಳ ನಿರ್ವಹಣೆ ಕಾರ್ಯಕ್ರಮ, ಕೊಳವೆ ಭಾವಿ ಮರುಪೂರಣ ಘಟಕಗಳ ವೈಯಕ್ತಿಕ ಕಾಮಗಾರಿ, ಸಾರ್ವಜನಿಕ ಉದ್ಯಾನ, ಶಾಲೆ, ವಸತಿ ನಿಲಯದ ಆವರಣ, ಪೌಷ್ಟಿಕ ತೋಟ ನಿರ್ಮಾಣ, ತೋಟಗಾರಿಕೆ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕಾಮಗಾರಿಗಳು, ಹಾಗೂ ಪ್ರದೇಶ ವಿಸ್ತರಣೆ ಕಾರ್ಯಕ್ರಮದಲ್ಲಿ ನಿರ್ಮಿಸಿದ ಹೊಸ ತೋಟಗಳಿಗೆ ಹನಿ ನೀರಾವರಿ ಅಳವಡಿಸುವುದು.
2. **ಹನಿ ನೀರಾವರಿ**
3. **ರಾಷ್ಟ್ರೀಯ ತೋಟಗಾರಿಕಾ ಮಿಷನ್**
   - ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ ಕಾರ್ಯಕ್ರಮ
   - ಬಿಡಿ ಹೂಗಳು

- ಸಮಗ್ರ ಪೀಡೆ ನಿರ್ವಹಣೆ
- ರೈತರಿಗೆ ಪ್ರವಾಸ/ತರಬೇತಿ

**ಪ್ರಸ್ತಾವನೆ ಆಧಾರಿತ ಕಾರ್ಯಕ್ರಮಗಳು :**

1. ಸಂರಕ್ಷಿತ ಬೇಸಾಯ
2. ವೈಯಕ್ತಿಕ ನೀರು ಸಂಗ್ರಹಣಾ ಘಟಕ ನಿರ್ಮಾಣ
3. ಪ್ಯಾಕ್ ಹೌಸ್
4. ಹಣ್ಣು ಮಾಗಿಸುವ ಘಟಕ
5. ಶೀಥಲ ಗೃಹ

**ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ :**

1. ತೋಟಗಾರಿಕೆಯಲ್ಲಿ ಯಾಂತ್ರೀಕರಣ

## ರೇಷ್ಮೆ ಇಲಾಖೆ ಯೋಜನೆಗಳು :

1. **ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ :** ಹಿಪ್ಪು ನೆರಳೆ ನಾಟಿ, ಮರಗುಡ್ಡಿ ಬೇಸಾಯ ನರ್ಸರಿಯಲ್ಲಿ ಸಸಿ ಬೆಳೆಯುವುದು, ತೋಟದ ನಿರ್ವಹಣೆ ಕಾಂಪೋಸ್ಟ್ ಗುಂಡಿ ನಿರ್ಮಾಣ, ಕಾಮಗಾರಿಗಳನ್ನು ವಿಶೇಷವಾಗಿ ಇಲಾಖೆಯಿಂದಲೇ ಕೈಗೊಳ್ಳಲಾಗುವುದು.
2. **ಹೊಸ ತಳಿ ಹಿಪ್ಪು ನೇರಳೆ ನಾಟಿಗೆ ಪ್ರೋತ್ಸಾಹ :** ಹೊಸದಾಗಿ ಹೆಚ್ಚು ಅಂತರದಲ್ಲಿ ಸುಧಾರಿತ ತಳಿ ಹಿಪ್ಪು ನೇರಳೆ ನಾಟಿ ಮಾಡಲು ರೈತರಿಗೆ ಪ್ರೋತ್ಸಾಹ ದನ ನೀಡಲಾಗುವುದು.
3. **ಹಿಪ್ಪ ನೇರಳೆ ತೋಟಕ್ಕೆ ಹನಿ ನೀರಾವರಿ ಅಳವಡಿಕೆ :** ಹನಿ ನೀರಾವರಿ ಅಳವಡಿಸುವ ಎಲ್ಲಾ ದ್ವಿತಳಿ ರೇಷ್ಮೆ ಬೆಳೆಗಾರರಿಗೆ ಸಹಾಯಧನ ನೀಡಲಾಗುವುದು. ಇಲಾಖೆ ಅನುಮೋದಿಸುವ ಸಂಸ್ಥೆಗಳಿಂದ ಹನಿ ನೀರಾವರಿ ಅಳವಡಿಸಿಕೊಳ್ಳಬೇಕು.
4. **ರೇಷ್ಮೆ ಹುಳು ಸಾಕಾಣೆ, ಸಲಕ್ಷರಣೆ ಖರೀದಿಗೆ ಸಹಾಯಧನ :** ಸಲಕರಣೆಗಳನ್ನು ಖರೀದಿಸುವ ದ್ವಿತಳಿ ಬೆಳೆಗಾರರಿಗೆ ಖರೀದಿಸಿದ ಮೌಲ್ಯಕ್ಕೆ ಗರಿಷ್ಟ (ಶೇ.75), ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಟ ಪಂಗಡ ಬೆಳೆಗಾರರಿಗೆ ಗರಿಷ್ಟ ರೂ. (ಶೇ.90), ರವರೆಗೆ ಸಹಾಯಧನ ನೀಡಲಾಗುವುದು. ಇಲಾಖೆ ಅನುಮೋದಿಸಿರುವ ಸಂಸ್ಥೆಗಳಿಂದ ಉಪಕರಣಗಳನ್ನು ಖರೀದಿಸಬೇಕು.
5. **ತಾಲ್ಲೂಕು ಪಂಚಾಯತಿ ಕಾರ್ಯಕ್ರಮ :** ತಾಲೂಕು ಮಟ್ಟದ ಕಾರ್ಯಗಾರ, ವಸ್ತು ಪ್ರದರ್ಶನ, ಕ್ಷೇತ್ರೋತ್ಸವ , ಮಹಿಳಾ ಪ್ರಾತ್ಯಕ್ಷಿತೆ ತಾಕು ನಿರ್ವಹಣೆ ಮಾಡಲಾಗುತ್ತದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ರೇಷ್ಮೆ ಬೆಳೆಗಾರರಿಗೆ ಸಲಕರಣೆಗಳನ್ನು ನೀಡಲಾಗುವುದು.
6. **ಜಿಲ್ಲಾ ಪಂಚಾಯತ್ ಕಾರ್ಯಕ್ರಮ :** ಜಿಲ್ಲಾ ಮಟ್ಟದ ಕಾರ್ಯಗಾರ, ವಸ್ತು ಪ್ರದರ್ಶನ, ರೈತರಿಗೆ ಅಧ್ಯಯನ ಪ್ರವಾಸ ಕೈಗೂಳ್ಳಲಾಗುವುದು. ರೈತರಿಗೆ ಹಿಪ್ಪು ನೇರಳೆ ನರ್ಸರಿ ಬೆಳೆಸಲು ಹೊಸ ನಾಟಿ

ಮಾಡಲು ಪ್ರೋತ್ಸಾಹಧನ ಹಾಗೂ ಬೈವೋಲ್ಟೈನ್ ರೇಷ್ಮೆ ಬೆಳೆಗಾರರಿಗೆ ಸೋಂಕು ನಿವಾರಕಗಳನ್ನು ನೀಡಲಾಗುವುದು.

ಎಲ್ಲಾ ಸೌಲಭ್ಯಗಳು ಜೇಷ್ಟತೆ ಹಾಗೂ ಅನುಧಾನ ಲಭ್ಯತೆ ಆಧಾರದ ಮೇಲೆ ದೊರೆಯುತ್ತದೆ.

**<u>ಮೀನುಗಾರಿಕೆ ಇಲಾಖೆ</u>**

**<u>1.</u> <u>ಕೆರೆಗಳ ವಿಲೇವಾರಿ ಮತ್ತು ಅಭಿವೃದ್ಧಿ</u> :** ಕೆರೆಗಳನ್ನು ಗುತ್ತಿಗೆ, ಟೆಂಡರ್–ಕಂ–ಹರಾಜಿನ ಮೂಲಕ ವಿಲೇವಾರಿ ಮಾಡುವುದು ಮತ್ತು ಮೀನುಗಾರಿಕೆ ಅಭಿವೃದ್ಧಿ ಕುರಿತು ತಾಂರ್ತ್ರಿಕ ಸಲಹೆ ನೀಡುವುದು

**2. <u>ಒಳನಾಡು ಮೀನುಗಾರಿಕೆ ಅಭಿವೃದ್ಧಿ ಸಹಾಯ</u> :**

ಅ). **ಮೀನುಮರಿ ಪಾಲನೆ ಮತ್ತು ವಿತರಣೆ :**
**ಆ). ಮೀನುಮರಿ ಪಾಲನಾ ಕೇಂದ್ರಗಳ ನಿರ್ವಹಣೆ :** ಸರ್ಕಾರದ ದರದಲ್ಲಿ ಮೀನುಮರಿ ಸರಬರಾಜು
ಇ). **ವಿಶೇಷ ಘಟಕ ಯೋಜನೆ/ಗಿರಿರಾಜ ಉಪಯೋಜನೆ :**

3. **ಮೀನುಗಾರಿಕೆ ಕಟ್ಟಡಗಳು, ಸೌಲಭ್ಯ ಮತ್ತು ನಿರ್ವಹಣೆ :** ಇಲಾಖೆಯ ಕಟ್ಟಡ ಮತ್ತು ನರ್ಸರಿ ಕೊಳಗಳ ನಿರ್ಮಾಣ ಮತ್ತು ನಿರ್ವಹಣೆ.

4. **ಮೀನು ಮಾರಾಟಕ್ಕೆ ಸಹಾಯ ಯೋಜನೆ :** ಮೀನು ಮಾರಾಟದಲ್ಲಿ ತೊಡಗಿರುವ ಮೀನುಗಾರರು ಪಸಕ್ತ ಸಾಲಿನಲ್ಲಿ ಖರೀದಿಸಿದ ದ್ವಿಚಕ್ರ ವಾಹನ, ಕ್ರೇಟ್, ತಕ್ಕಡಿ ಇತ್ಯಾದಿಗಳಿಗೆ ಸಹಾಯಧನ

5. **ವಸ್ತು ಪ್ರದರ್ಶನ ಮತ್ತು ತರಬೇತಿ :** ಮೀನುಗಾರಿಕೆ ಬಗ್ಗೆ ತರಬೇತಿ, ಅಧ್ಯಯನ ಪ್ರವಾಸ ಇತ್ಯಾದಿ

6. **ಮೀನುಗಾರಿಕೆ ಸಲಕರಣೆ ಕಿಟ್ ವಿತರಣೆ :** ಮೀನುಗಾರಿಕೆ ವೃತ್ತಿ ಮಾಡುತ್ತಿರುವ ಮೀನುಗಾರರ ಅರ್ಜಿ, ಸಂಘದ ಶಿಫಾರಸ್ಸು ಪತ್ರ ಇತ್ಯಾದಿ.

7. **ಮೀನುಮರಿ ಖರೀದಗೆ ಸಹಾಯ :** ಸರ್ಕಾರದ/ಅನುಮೋದಿತ ಮೀನುಮರಿ ಕೇಂದ್ರಗಳಿಂದ ಖರೀದಿಸಿದ ಮೀನು ಮರಿಗಳಿಗೆ ಸಹಾಯ. **ದಾಖಲಾತಿಗಳು :** ಅರ್ಜಿ, ಮೀನುಮರಿ ಖರೀದಿ ಬಿಲ್ಲು, ಕೆರೆಯ ಆದೇಶದ ಪತ್ರ ಇತ್ಯಾದಿ.

8. **ಮೀನು ಕೃಷಿ ಕೊಳ ನಿರ್ಮಾಣಕ್ಕೆ ಸಹಾಯ :** ತುಂಬಾ ನೀರಿನ ಸೌಲತ್ತು ಹೊಂದಿರುವ ರೈತರು ಕನಿಷ್ಟ ಒಂದು ಎಕರೆ ಜಲ ವಿಸ್ತೀರ್ಣದ ಕೊಳ ನಿರ್ಮಿಸಬೇಕು. **ದಾಖಲಾತಿಗಳು :** ಅರ್ಜಿ, ಉತಾರ, ಅಂದಾಜು ಪಟ್ಟಿ, ನಕ್ಷೆ, ಮಣ್ಣು ಮತ್ತು ನೀರು ಪರೀಕ್ಷೆ ಪ್ರಮಾಣ ಪತ್ರ ಚಕ್‌ಬಂದಿ, ನೀರಿನ ಮೂಲ ದೃಢೀಕರಣ, ಹಂತವಾರು ಫೋಟೊ, ನೀರು ಮತ್ತು ಮಣ್ಣಿನ ಪರೀಕ್ಷೆ ಪತ್ರ ಇತ್ಯಾದಿ.

9. **ಮೀನು ಕೃಷಿಕರಿಗೆ ಸಹಕಾರಿ ಬ್ಯಾಂಕಗಳಿಂದ ಅಲ್ಪಾವದಿ ಸಾಲ :** ಮೀನು ಕೃಷಿಕೊಳಗಳ ನಿರ್ವಹಣೆ, ಆಹಾರ, ಬಲೆ, ಅಲಂಕಾರಿಕಾ ಮೀನು ಸಾಕಾಣಿಕೆ ಇತ್ಯಾದಿಗಳಿಗೆ ಶೂನ್ಯ ಬಡ್ಡಿ ಸಾಲ.

**ದಾಖಲಾತಿಗಳು :** ಅರ್ಜಿ, ಸಂಘದ ಶಿಫಾರಸ್ಸು, ಯೋಜನನಾ ವರದಿ ಇತ್ಯಾದಿ.

2. ಮೀನುಗಾರಿಕೆ ಅಪಘಾತ ವಿಮೆ ಯೋಜನೆ
3. ಮೀನುಗಾರಿಕೆ ಸಹಕಾರಿ ಸಂಘಗಳಿಗೆ ಸಹಾಯ

## ಪಶುಪಾಲನಾ ಇಲಾಖೆಯ ಯೋಜನೆಗಳು :

1. **ಮಹಿಳೆಯರಿಗೆ ಹೈನುಗಾರಿಕೆ** :

   2 ಮಿಶ್ರ ತಳಿ ಹಸು/ಎಮ್ಮೆ ಘಟಕ ಸ್ಥಾಪಿಸುವುದು ಹಾಗೂ ಶೇ 25% ಸಹಾಯಧನದಲ್ಲಿ ಘಟಕದ ವೆಚ್ಚ 1,20,000/–, ಬ್ಯಾಂಕ್ ಸಾಲ–75%. ರಷ್ಟು ಇರುತ್ತದೆ.

2. **ಮಹಿಳೆಯರಿಗೆ ಕುರಿ/ಮೇಕೆ ಘಟಕ ಸ್ಥಾಪನೆ : (3 ಕುರಿ ಘಟಕ ಸ್ಥಾಪನೆ)**

   ಒಟ್ಟು ಘಟಕದ ವೆಚ್ಚ 15,000/–
   ಎಸ್ಸಿ. ಎಸ್ಟಿ. – 12,000 – ಸಹಾಯಧನ – 3000 ವಂತಿಕೆ
   ಸಾಮಾನ್ಯ – 10,000 ಸಹಯಧನ – 5000 ವಂತಿಕೆ

3. **ಆರ್.ಕೆ.ವಿ,ವಯ್ ಪಶು ಭಾಗ್ಯ ಯೋಜನೆ :**

   2 ಮಿಶ್ರ ತಳಿ ಹಸು / ಎಮ್ಮೆ ಸ್ಥಾಪನೆಗೆ ಎಸ್ಸಿ ಫಲಾನುಭವಿಗಳಿಗೆ ಶೇ : 50 % ಸಹಾಯಧನ, 50 % ಬ್ಯಾಂಕ್ ಸಾಲ.

4. **ಎಸ್.ಸಿ.ಪಿ/ಟಿ.ಎಸ್.ಪಿ :**

   ಹೈನುಗಾರಿಕೆ ಘಟಕ ಸ್ಥಾಪಿಸಲು ಎಸ್ಸಿ/ಎಸ್ಟಿ ಫಲಾನುಭವಿಗಳಿಗೆ ಶೇಕಡಾ 75% ಸಹಾಯಧನದೊಂದಿಗೆ 2 ಮಿಶ್ರ ತಳಿ ಹಸು ಘಟಕ ಸ್ಥಾಪಿಸುವುದು.


5. **ಹೈನುಗಾರಿಕೆ ಘಟಕ ಯೋಜನೆ :**

   ಈ ಯೋಜನೆಯಡಿಯಲ್ಲಿ ಎಸ್ಸಿ. ಎಸ್ಟಿ. ಫಲಾನುಭವಿಗಳಿಗೆ ಶೇ 75% ರಷ್ಟು ಸಹಾಯಧನದೊಂದಿಗೆ ಮಿಶ್ರ ತಳಿ ಹಸು / ಎಮ್ಮೆ ಘಟಕ ಸ್ಥಾಪಿಸುವುದು.

6. **ಕರು ಸಾಕಾಣಿಕೆ :**

   ಕರು ಘಟಕ ಸ್ಥಾಪಿಸಲು ಸಾಮಾನ್ಯ ಹಾಗೂ ಎಸ್ಸಿ. ಎಸ್ಟಿ. ಫಲಾನುಭವಿಗಳಿಗೆ 18,000/–, ಆಹಾರ ವೆಚ್ಚ & ಆರೋಗ್ಯ ವರ್ಧಕಗಳಿಗೆ – 13,500, ಒಣ ಮೇವು (ವಂತಿಗೆ) – 4,500

7. ಆಕಸ್ಮಿಕ ಮರಣ ಹೊಂದಿದ ಜಾನುವಾರಗಳಿಗೆ ರೂ.10,000/– ಗೌರವಧನ ನೀಡಲಾಗುತ್ತದೆ.
8. ಆರು ತಿಂಗಳಿಗಿಂತ ಮೇಲ್ಪಟ್ಟ ಕುರಿ/ಮೇಕೆಗಳು ಮರಣ ಹೊಂದಿದರೆ ರೂ.5,000 ಹಾಗೂ 3 ರಿಂದ 6 ತಿಂಗಳ ಒಳಗೆ ಮರಣ ಹೂಂದಿದರೆ ರೂ.2,500/– ಗೌರವಧನ ನೀಡಲಾಗುತ್ತದೆ.






## ರೈತರ ಆಧಾಯ ಮತ್ತು ಕಲ್ಯಾಣ ವೃದ್ಧಿ ಯೋಜನೆಯ 2017–18ನೇ ಸಾಲಿನಲ್ಲಿ ಕೈಗೊಂಡ ಕಾರ್ಯಕ್ರಮಗಳು

| ಕ್ರ ಸಂ. | ದಿನಾಂಕ | ಚಟುವಟಿಕೆಗಳು | ಭಾಗವಹಿಸಿದ ರೈತರ ಸಂಖ್ಯೆ | ಭಾಗವಹಿಸಿದ ಅಧಿಕಾರಿಗಳು |
|---|---|---|---|---|
| 1. | 25.11.16 | ಡಾ. ಪ್ರಕಾಶ ಕಮ್ಮರಡಿ ಇವರ ಅಧ್ಯಕ್ಷತೆಯಲ್ಲಿ ಕೃಷಿ ವಿಜ್ಞಾನ ಕೇಂದ್ರ ಹನುಮನಮಟ್ಟಿಯಲ್ಲಿ ಜಿಲ್ಲಾ ಮಟ್ಟದ ವಿವಿಧ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳಿಗೆ KAPC ಪ್ರಾಯೋಜಿತ, "ರೈತರ ಆದಾಯ ಮತ್ತು ಕಲ್ಯಾಣ ವೃದ್ಧಿ ಯೋಜನೆ" ಸಭೆ | – | 45 |
| 2. | 21.12.16 | ಗ್ರಾಮದ ಆಯ್ಕೆ (ಖುರ್ದವೀರಾಪುರ) | 11 | 03 |
| 3. | 09.02.17 | ಫಲಾನುಭವಿ ರೈತರ ಹಾಗೂ ರೈತ ಮಹಿಳೆಯರ ಆಯ್ಕೆ | 11 | 03 |
| 4. | 11.04.17 | ಪ್ರಥಮ ಗ್ರಾಮ ಮಟ್ಟದ ಸಭೆ | 11 | 02 |
| 5. | | ಪೌಷ್ಠಿಕ ಆಹಾರ, ಮನೆ ಹಾಗೂ ಸುತ್ತಮುತ್ತಲಿನ ಸ್ವಚ್ಛತೆ ಕುರಿತ ಅರಿವು ಕಾರ್ಯಕ್ರಮ | 14 | 03 |
| 6. | 13.04.17 | ತೋಟಗಾರಿಕಾ ಬೆಳೆಗಳ ಸುಧಾರಿತ ತಳಿಗಳ ಬಗ್ಗೆ ಮಾಹಿತಿ | | |
| 7. | | ಮುಂಗಾರು ಬೆಳೆಗಳ ಬೀಜಗಳ ಆಯ್ಕೆ, ನಿರ್ವಹಣೆ ಮತ್ತು ಸಮಗ್ರ ಕೃಷಿ ಪದ್ಧತಿ ಬಗ್ಗೆ ಮಾಹಿತಿ | | |
| 8. | 17.04.17 | ರೈತರ ಆರೋಗ್ಯ ತಪಾಸಣೆ ಶಿಬಿರ ಕಾರ್ಯಕ್ರಮ | 123 | 15 |
| 9. | 15.05.17 | ISEC,ಬೆಂಗಳೂರು ಸಹಯೋಗದೊಂದಿಗೆ ಎಲ್ಲೆಗೆರೆ ಸಮೀಕ್ಷೆಯ ಪ್ರಶ್ನಾವಳಿ ಪೂರಕ ಪರಿಶೀಲನೆ | 04 | 01 |
| 10. | 24.05.17 | ರೈತರ ತರಬೇತಿ ಮತ್ತು ಗ್ರಾಮ ಸಭೆ | 31 | 07 |
| 11 | – | ಎಲ್ಲೆಗೆರೆ ಸಮೀಕ್ಷೆ | – | – |
| 12. | – | ಮಣ್ಣು ಆರೋಗ್ಯ ಪರೀಕ್ಷೆ | – | – |
| 13. | – | ಸಮವಸ್ತ್ರ ಹಾಗೂ ಪುಸ್ತಕಗಳ ವಿತರಣೆ | 25 | 01 |

| | | | | |
|---|---|---|---|---|
| **14.** | – | ಕಛೇರಿಯ ಸ್ಥಾಪನೆ | – | – |
| **15.** | **11.10.2017** | ಸೈನಿಕ ಹುಳುವಿಗೆ ವಿಷ ಪಾಷಣ ತಯಾರಿಕೆಯ ಪದ್ಧತಿ ಪ್ರಾತ್ಯೆಕ್ಷಿಕೆ | 55 | 02 |
| **16.** | **16.10.2017** | ಅಂತರಾಷ್ಟ್ರೀಯ ಗ್ರಾಮೀಣ ಮಹಿಳೆಯರ ದಿನ ಹಾಗೂ ವಿಶ್ವ ಆಹಾರ ದಿನಾಚರಣೆ | | |
| | | | 70 | 04 |
| | | | 105 | 12 |
| **17.** | **25.10.2017** | ಫ್ಲಸ್ ತ್ರಸ್ಪ ತಂಡದ ಭೇಟಿ ಮತ್ತು ಸಮಗ್ರ ಕೃಷಿ ಪದ್ಧತಿಯ ಅಳವಡಿಕೆಯ ಕುರಿತು ಚರ್ಚೆ. | | |
| **18.** | **05.12.2017** | ವಿಶ್ವ ಮಣ್ಣು ಆರೋಗ್ಯ ದಿನಾಚರಣೆ ಮತ್ತು ಆರೋಗ್ಯ ಚೀಟಿ ವಿತರಣೆ | 562 | 09 |
| **19.** | **23.12.2017** | ರೈತ ದಿನಾಚರಣೆ | 91 | 03 |
| **20.** | **27.12.2018 – 29.12.2018** | ಪ್ರಗತಿಪರ ರೈತರ ತಾಂತ್ರಿಕ ಆವಿಷ್ಕಾರಗಳನ್ನು ತರಬೇತಿ ಮುಖಾಂತರ ಇತರೆ ರೈತರಿಗೆ ತಲುಪಿಸುವ ಯೋಜನೆ | 10 | 06 |
| **21** | **05.01.2018** | ರೈತರ ಆಧಾಯ ಹಾಗೂ ಕಲ್ಯಾಣ ವೃದ್ಧಿ ಯೋಜನೆಯ ಪ್ರಗತಿ ಪರಿಶೀಲನಾ ಸಭೆ | 25 | 30 |
| **22.** | **29.01.2018 – 31.01.2018** | ವ್ಯಕ್ತಿತ್ವ ವಿಕಸನ ಶಿಬಿರ–ಮಣಿಪಾಲ್ | 25 | 01 |
| **23.** | **09.02.2018** | ಗಾಮ ಸಭೆ | 19 | 02 |
| **24.** | **13.02.2018** | ಮೂಲಭೂತ ಸೌಕರ್ಯ, ನೈರ್ಮಲ್ಯ ಮತ್ತು ಸಾಮಾಜಿಕ ಸಮಸ್ಯೆಗಳ ಕುರಿತು ಸಮೀಕ್ಷೆ | – | – |
| **25.** | – | ಸರ್ಕಾರದ ಯೋಜನೆಗಳ ಮತ್ತು ತಾಂತ್ರಜ್ಞಾನಗಳ ಅರಿವು ಮತ್ತು ಅಳವಡಿಕೆ ಹಾಗೂ ಕೃಷಿಯಲ್ಲಿ ಮುಂದುವರಿಯುವ ಕುರಿತು ಗ್ರಾಮೀಣ ಯುವಕರ ಮತ್ತು ರೈತ ಮಹಿಳೆಯರ ಎಲ್ಲೆಗೆರೆ ಸಮೀಕ್ಷೆ | – | – |
| **26.** | **02.03.2018 – 03.03.2018** | ರಾಜ್ಯ ಮಟ್ಟದ ರೈತರ ಕಾರ್ಯಗಾರ | 10 | 02 |
| **27.** | **12.04.2018** | ವಾರ್ಷಿಕ ಸಭೆ – ಕರ್ನಾಟಕ ಕೃಷಿ ಬೆಲೆ ಆಯೋಗ ಬೆಂಗಳೂರು | | |
| **28.** | **03.05.2018** | ಗ್ರಾಮ ಸಭೆ | 25 | 02 |
| **29.** | **15.05.2018** | ಮಂಗಾರಿನ ಮುಂಚೂಣಿ ಪ್ರಾತ್ಯಕ್ಷಿತೆಗಳ ಫಲಾನುಭವಿಗಳ ಆಯ್ಕೆ ಸಭೆ | 19 | 02 |
| **30.** | **08.06.2018 09.06.2018** | ಕೃಷಿ ವಿಜ್ಞಾನ ಕೇಂದ್ರ ಹಿರಿಯೂರಿನಲ್ಲಿ ಕೃಷಿ ಬೆಲೆ ಆಯೋಗದ ಸಭೆ | – | – |
| **31.** | **23.07.2018** | ಖುರ್ಧ ವೀರಾಪುರದಲ್ಲಿ ಗ್ರಾಮಸಭೆ | 10 | 02 |
| **32.** | **26.07.2018** | ರಾಷ್ಟ್ರ ಮಟ್ಟದ ತಾಂತ್ರಿಕ ಕಾರ್ಯಗಾರ, ಬೆಂಗಳೂರು | 10 | 02 |
| **33.** | **06.08.2018** | ಎಲೆಕೋಸು ಬೆಳೆಯಲ್ಲಿ ಕ್ಷೇತ್ರೋತ್ಸವ | 25 | 30 |
| **34.** | **10.08.2018** | ಹೆಬ್ಬೇವು ಸಸಿ ವಿತರಣೆ | | |
| **35** | **23.12.2108** | ರೈತ ದಿನಾಚರಣೆ | 30 | 05 |

| | | | | |
|---|---|---|---|---|
| **36** | **27.12.218** | ಗ್ರಾಮ ಸಭೆ ಹಾಗೂ ಸ್ವಚ್ಛತಾ ಸಪ್ತಾಹ ಕಾರ್ಯಕ್ರಮ : ಖುರ್ದ ವೀರಾಪುರ | 25 | 03 |
| **37.** | **04.01.2019 05.01.2019** | ಸಾವಯವ ಸಿರಿಧಾನ್ಯಗಳ ಕೃಷಿ ಮೇಳ – ಹಿರೇಕೆರೂರು | 25 | 07 |
| **38.** | **28.01.2019** | ಗ್ರಾಮ ಸಭೆ : ಖುರ್ದ ವೀರಾಪುರ | 20 | 03 |
| **39.** | **05.02.2019** | ಗ್ರಾಮ ಸಭೆ : ಖುರ್ದ ವೀರಾಪುರ | 15 | 03 |
| **40.** | **08.02.2019** | ರೈತರ ಆದಾಯ ಹಾಗೂ ಕಲ್ಯಾಣ ವೃದ್ಧಿ ಯೋಜನೆಯಲ್ಲಿ ಪ್ರಗತಿ ಪರಿಶೀಲನಾ ಸಭೆ (ಪ್ಲಸ್ ಟ್ರಸ್ಟ್ ತಂಡದ ಭೇಟಿ) | – | 13 |
| **41.** | **11.02.2019** | ಮುಂಚೂಣಿ ಪ್ರಾತ್ಯಕ್ಷಿತೆಗಳು : ಪೌಷ್ಠಿಕ ಕೈತೋಟ ಪ್ರಾತ್ಯಕ್ಷಿಕೆ | – | 02 |
| **42.** | **27.02.2019** | ಟೊಮ್ಯಾಟೋ ಬೆಳೆಯಲ್ಲಿ ವೆಜಿಟೇಬಲ್ ಬಳಕೆಯ ಪ್ರಾತ್ಯಕ್ಷಿಕೆ | 06 | 01 |
| **43.** | **02.03.2019** | ತಿಪ್ಪೆ ಗೊಬ್ಬರದ ಪ್ರಾತ್ಯಕ್ಷಿಕೆ | 10 | 01 |
| **44.** | **11.03.2019** | ಬೀಜ ಉತ್ಪಾದಕರ ಸಂಘ ರಚನೆ. | 34 | 04 |
| **45.** | **12.03.2019** | ಎರೆಹುಳು ತೊಟ್ಟಿಯ ಪ್ರಾತ್ಯಕ್ಷಿತೆ | 15 | 02 |
| **46.** | **25.03.2019** | ವಿವಿಧ ಇಲಾಖೆಗಳ ಸೌಲಭ್ಯಗಳ ಮಾಹಿತಿ ಪುಸ್ತಕ ವಿತರಣೆ | 25 | 03 |